UNIVERSAL
LIBRARY
OU_198189
UNIVERSAL
LIBRARY

# ನೀಹಾರ

ಎಸ್. ಕೆ. ಕರೀಂಖಾನ್

ರಾಮರಾಜ್ಯ ಪ್ರಕಾಶನ, ಬೆಂಗಳೂರು-೪

OSMANIA UNIVERSITY LIBRARY

Call No. K83.1 K18N Accession No. K4801

Author [illegible]

Title [illegible]

This book should be returned on or before the date last marked below.

ಪ್ರಥಮ ಮುದ್ರಣ
**ಜನವರಿ ೧೯೫೪**

ಬೆಲೆ : ೧ ರೂಪಾಯಿ

ಮುದ್ರಣ
**ಚಿತ್ರಾ ಪ್ರಿಂಟರಿ**
**ಬೆಂಗಳೂರು-೨**

# ಅರ್ಪಣೆ

ಜಾತೀಯತೆಯ ಅನಿಷ್ಟ ವೈಪರೀತ್ಯದಿಂದ ಸಂಪೂರ್ಣವಾಗಿಯೂ ನಿರ್ಲಿಪ್ತರಾಗಿದ್ದು, ಹಿಂದೂ ಮುಸ್ಲಿಮರ ಅನ್ಯೋನ್ಯತೆಗೆ ನಿದರ್ಶನ ರೂಪದಂತಿದ್ದ, ನನ್ನ ಪೂಜ್ಯ ಅಗ್ರಜ ದಿವಂಗತ ಎಸ್. ಕೆ. ಖಲಂದರ್ ಖಾನ್‌ರವರ ಪವಿತ್ರ ಸ್ಮೃತಿಗಾಗಿ

# ಆ ತ್ಮ ನಿ ವೇ ದ ನೆ

ಪ್ರಚಲಿತ ಕನ್ನಡ ಸಾಹಿತ್ಯ ಸೇವಾಕ್ಷೇತ್ರ ನಯನೋನ್ಮೇಷಿತವೂ, ಹೃದಯೋಲ್ಲಾಸಿತವೂ ಆದ ಮನೋಜ್ಞ ಸುಂದರೋದ್ಯಾನದಂತಿದೆ. ಅದು ಚಿತ್ತಹಾರ ಸುವಾಸಿತ ಕುಸುಮ ರಂಜಿತ ಕಮನೀಯ ದ್ರುಮಸಂಕುಲದಿಂದಲೂ, ರಮಣೀಯ ಸ್ತಬಕ ಮಾಲಾಭರಣ ಭೂಷಿತ ಸೌಗಂಧಿಕ ಪುಷ್ಪಲತಿಕಾನೀಕ ದಿಂದಲೂ, ಭುವನಜನ ಮನಮನೋಹರ ಕಮಲಾಕರಪ್ರಾತದಿಂದಲೂ ಹೃದ್ಯವೂ, ಬಂಧುರವೂ, ದರ್ಶನೀಯವೂ ಆಗಿದೆ. ಆದರೆ ಅದು ಚೌಕಟ್ಟಿನಿಂದ ಬಂಧಿತವಾಗಿರುವ ನವರತ್ನಾಲಂಕೃತ ಸ್ವರ್ಣಚಿತ್ರದಂತೆ ಪರಿಮಿತ ಆವಾರದಲ್ಲಿ ಆರಾಜಿಸುತ್ತಿದೆ.

ಸಾಹಿತ್ಯ ವಸಂತನ ನಿರ್ಗಮನಾನಂತರ ಸಾಹಿತ್ಯ ವರ್ಷದ ಶುಭೋದಯ ವಾಗುತ್ತದೆ. ಈ ಮಧುರ ಸನ್ನಿವೇಶದಲ್ಲಿ ಸಾಹಿತ್ಯ ತರುಲತಾಂಕುರ ನಿಕರದ ಆವಿರ್ಭಾವಕ್ಕಾರಂಭವಾಗುತ್ತದೆ. ಆದರೆ ಉದ್ಯಾನಪಾಲಕನು ಚಕಿತನಾಗು ತ್ತಾನೆ. ಭೀತಿಗೊಳ್ಳುತ್ತಾನೆ. ನಿರ್ದಯತ್ವದಿಂದ ಅಂಕುರ ವ್ರಜವನ್ನು ಕಿತ್ತು ಆವಾರದಿಂದಾಚೆಗೆ ಎಸೆದುಬಿಡುತ್ತಾನೆ.

"ಅದೇಕೆ ಇಷ್ಟೊಂದು ನಿರ್ದಯತೆ? ಈ ಮೊಳಕೆಗಳು ಯಾರ ಶ್ರಮ ದಿಂದಲೂ ಉದ್ಭವಿಸಿಲ್ಲ. ಇವುಗಳಿಗಾಗಿ ಹೆಚ್ಚು ಕಷ್ಟವನ್ನೇನೂ ನಿರ್ವಹಿಸ ಬೇಕಾಗಿಲ್ಲ. ಕೊಂಚ ಅಗತೆಕೊಟ್ಟರಾಯಿತು. ಗ್ರೀಷ್ಮಕಾಲದಲ್ಲಿ ಸ್ವಲ್ಪ ನೀರೆರೆದರೆ ನಾಕು. ತಾವಾಗಿಯೇ ಬೆಳೆದುಕೊಳ್ಳುವುವು. ಇವುಗಳಿಂದಲೂ ನಯನಕಾಂತ ಪುಷ್ಪಗಳು ಪ್ರಕಟಿತವಾಗುವುವು. ಆ ಪುಷ್ಪಗಳಿಂದಲೂ ಮಧುರ ಮೋಹಕ ಸೌರಭವು ಹೊರಹೊಮ್ಮುವುದು."

"ಸಾಧ್ಯವೂ ಇಲ್ಲ. ಹೀಗಾಗಲೂಬಾರದು. ಉದ್ಯಾನದ ಶೋಭೆಗಾಗಿ ಕೆಲವೇ ಮರ, ಗಿಡ, ಬಳ್ಳಿಗಳನ್ನು ಬೆಳೆಸಲಾಗಿದೆ. ನಯನಾಭಿರಾಮವಾಗು ವಂತೆ ಇವುಗಳನ್ನು ವ್ಯವಸ್ಥಿಸಲಾಗಿದೆ. ರೂಪಿಸಲಾಗಿದೆ. ಶ್ರಮವೂ, ಜಲವೂ ಇವುಗಳಿಗಾಗಿಯೇ ಮೀಸಲು. ಆದ್ದರಿಂದ ಅಕ್ರಮವಾಗಿ ಉದ್ಭವಿಸುವ ಯಾವ ಸಸಿಗೂ ಇಲ್ಲಿ ಬೆಳೆಯಲು ಬಾಧ್ಯತೆಯಿಲ್ಲ. ಹಾಗೆ ಉದ್ಭವಾಂಕುರಗಳಿಗೆಲ್ಲಾ ಬೆಳೆಯಲಾಸ್ಪದವಿತ್ತರೆ, ಇದು ಸಾಹಿತ್ಯೋದ್ಯಾನವಾಗಲಾರದು. ಸಾಹಿತ್ಯಾ ರಣ್ಯವಾಗುವುದು."

ನಿಷ್ಕರುಣೆಯಿಂದ ಎಸೆಯಲ್ಪಟ್ಟ ಸಸಿಗಳಲ್ಲಿ ಎಷ್ಟೋ ಉದ್ಯಾನಪಾಲಕನ ಕರ್ಕಶಮುಷ್ಠಿಯಲ್ಲಿಯೇ ಗತಪ್ರಾಣವಾಗುವುವು. ಉಳಿದುವು ದನಕರುಗಳಿಗೆ ಭುಕ್ತಿಯಾಗುವುವು. ಹಾಗೂ ಕಸದ ಆವರಣದಲ್ಲಿ ಅಡಗಿದ್ದು ಕೊಳಚೆ ನೀರಿನ ಕೃಪೆಯಿಂದ ಜೀವಧಾರಣ ಮಾಡಿಕೊಂಡ ಒಂದೆರಡು ಸಸಿಗಳು ತಲೆ ಯೆತ್ತಲೂಬಹುದು. ಒಂದೆರಡು ಸಾಹಿತ್ಯಸುಮಗಳಿಗೆ ಜನ್ಮವನ್ನೂ ಕೊಡ ಬಹುದು. ಆದರೆ ಈ ಪುಷ್ಪಗಳು ಆರಾಮದ ವಿವಿಧ ರಾಗೋದ್ಭಾಸಿತ ಸುಂದರ ಸುಮಗಳಿಗೆ ಸಾಟಿಯಾಗಬಲ್ಲುವೇ? ಉದ್ಯಾನದಲ್ಲಿ ಪ್ರವೇಶಿಸಿ ಮೆಚ್ಚುವ, ತಲೆದೂಗುವ, ಮೋಹಗೊಳ್ಳುವ ಉನ್ನತೋನ್ನತ ವಿಹಾರಿಗಳ ದೃಷ್ಟಿಗೆ ಪಾತ್ರವಾಗಬಲ್ಲುವೇ? ಕ್ಷಿಪ್ರದಲ್ಲಿಯೇ ಸನ್ನಿಹಿತವಾಗಲಿರುವ ವಿಕರಾಲ ಗ್ರೀಷ್ಮನ ವಿಲಯಾಗ್ನಿಗೆ ಸಿಕ್ಕಿ ಮೂಲಸಹಿತ ಉಧ್ವಸ್ತವಾಗಬೇಕಾಗಿದೆ. ಇನ್ನೆಲ್ಲಿ ಬೆಳವಣಿಗೆ! ಶೋಭೆ! ಪರಂಪರೆ!

ಇದು ಉತ್ಪ್ರೇಕ್ಷೆಯಲ್ಲ. ವಸ್ತುಸ್ಥಿತಿಯು. ರಾಜಕೀಯದಲ್ಲಿಯೂ, ಪ್ರಭುತ್ವದಲ್ಲಿಯೂ ಪ್ರತಿಷ್ಠಿತ ಸ್ಥಾನಗಳನ್ನು ಪಡೆಯಲಾಗದ ಉದಿತೋದಿತ ಸಾಹಿತಿಗಳಿಗಾಗಿ ಪರಾಮರ್ಶವು. ಈ ಕ್ಷೇತ್ರದ ದೀರ್ಘಾನುಭವ, ಅನುತಾಪ ಮೂಕಸ್ವಪ್ನದಂತೆ ಅವ್ಯಕ್ತವು, ಗೋಪ್ಯವು.

ಉರ್ದು ಸಾಹಿತ್ಯದ ಸುಪ್ರಸಿದ್ಧ ಲೇಖಕರ ಚಾರಿತ್ರಿಕ ಕಥಾನಕ ಗಳನ್ನು ಅನುವಾದಿಸಿ ಈ ಚಿಕ್ಕ ಹೊತ್ತಿಗೆಯಲ್ಲಿ ಅಂಕಿಸಿದ್ದೇನೆ. ಕನ್ನಡಿಗರ ಕೃಪಾವಲೋಕನಕ್ಕಾಗಿ ನಿವೇದಿಸಿದ್ದೇನೆ. ಈ ಸಂದರ್ಭದಲ್ಲಿ ಜ್ಞಾನಶ್ರೇಷ್ಠರೂ, ಪರಹಿತ ಚಿಂತಕರೂ, ವಿಶ್ವವಿಶಾಲ ಮನೋಭಾವನೆಯುಳ್ಳವರೂ ಆದ ದಿವಂಗತ ಶಿ. ಶಿ. ಬಸವನಾಳರವರು ೧೯೫೫ನೆಯ ಡಿಸೆಂಬರ್ ೨೮ ರಲ್ಲಿ ನಡೆದ ೩೮ ಕವಿಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಪೀಠದಿಂದ ಅನುಗ್ರಹಿಸಿದ ಉಪನ್ಯಾಸದ ಅಂಶವೊಂದನ್ನು ಇಲ್ಲಿ ನಿರೂಪಿಸುವುದು ಸಂಗತವೆಂದು ಭಾವಿಸುತ್ತೇನೆ.

"ತಿಳಿಯಾದ ಮಡುವನ್ನು ಕಲಕಿ ಬಹುಕಾಲದಿಂದ ಕೆಳಗೆ ಕುಳಿತ ಕೊಳಚೆಯನ್ನೆಲ್ಲ ಮೇಲಕ್ಕೆಬ್ಬಿಸುವಂತಹ ವಾದವಿವಾದದ ಗೊಂದಲವನ್ನು ಹುಟ್ಟಿಸುವುದು, ಎಷ್ಟು ಮಾತ್ರಕ್ಕೂ ಸಂಶೋಧನೆಯೆನಿಸಿಕೊಳ್ಳಲಾರದು. ಸಂಶೋಧನದ ನೆಪದಲ್ಲಿ ಅರೆಪಕ್ವವಾದ ಜನರು ಹುರುಳಿಲ್ಲದ ವಾದವಿವಾದ

ಗಳನ್ನೆಬ್ಬಿಸಿ, ಇಲ್ಲದ ಸಮಸ್ಯೆಗಳನ್ನು ಹುಟ್ಟಿಸಿ, ಮತಮತಗಳಲ್ಲಿ ವಿರಸವನ್ನು ಬೆಳೆಸುವಂತಹ ಅಪಪ್ರಚಾರಗಳು ಅಲ್ಲಲ್ಲಿ ಕಂಡುಬರುತ್ತವೆ. ಇಂತಹ ಪ್ರವೃತ್ತಿ ಪ್ರಯತ್ನಗಳಿಗೆ ಆದಷ್ಟು ತೀವ್ರ ತಡೆಹಾಕುವುದು ಆವಶ್ಯಕ. ವ್ಯಕ್ತಿ ಸ್ವಾತಂತ್ರ್ಯದ ಈಗಿನ ಕಾಲದಲ್ಲಿ ತಂತಮ್ಮ ಅಭಿಪ್ರಾಯಗಳನ್ನು ಪ್ರಕಟಿಸುವ ಹಕ್ಕು ಪ್ರತಿಯೊಬ್ಬರಿಗಿರುವುದಾದರೂ, ಅಂತಹ ಅಭಿಪ್ರಾಯಗಳು ವ್ಯಕ್ತಿಯ ಹೊಣೆಗಾರಿಕೆಯ ಮೇಲೆಯೇ ಪ್ರಕಟವಾದರೆ, ಹೆಚ್ಚಿನ ಹಾನಿಯಾಗುವುದಿಲ್ಲ. ಅದೇ ಅವುಗಳಿಗೆ ಪ್ರತಿಷ್ಠಿತ ಸಂಸ್ಥೆಗಳ, ಹಾಗೂ ಅವುಗಳ ನೆರೆಯಲ್ಲಿ ನಡೆಯುವ ಪತ್ರಿಕೆಗಳ ಬೆಂಬಲವು ದೊರೆತರೆ, ಇಲ್ಲದ ಗೊಂದಲಗಳೇಳುವ ಸಂಭವವೇ ಹೆಚ್ಚು."

ಮೇಲಿನ ಅಂಶವನ್ನು ಅವಲೋಕಿಸುವಾಗ ಪ್ರಚಲಿತ ಪರಿಸ್ಥಿತಿಯ ನೈಜಾನುಭವವು ವ್ಯಕ್ತವಾಗುತ್ತದೆ. ತಮ್ಮ ದೇಹದ ರಕ್ತವನ್ನು ಬೆವರಿನ ರೂಪಿನಲ್ಲಿ ಹರಿಸಿ, ಅಹೋರಾತ್ರಿ ದುಡಿಯುವ ಶ್ರಮಜೀವಿಗಳ ಬಡ ಗುಡಿಸಿಲುಗಳೇ, ಪರಾನ್ನಭಕ್ಷಕರ ಕೋಮುವಾರು ವೈಷಮ್ಯದ ವಿಷಜ್ವಾಲೆಗೆ ಸಿಕ್ಕಿ ವಿದಗ್ಧವಾಗುತ್ತವೆ. ಗತಿಸಿದ ಚಾರಿತ್ರಿಕ ಘಟನೆಗಳೇ ತೈಲಕಾರ್ಯವನ್ನು ನಡೆಸುತ್ತವೆ. ಸಂದಿಗ್ಧವಾಗಿರುವ ಕೆಲವು ಘಟನಾವಳಿಗಳ ಸತ್ಯಾಸತ್ಯತೆಯನ್ನು ಮಥಿಸಿ ಪರಿಣಾಮವನ್ನು ನೋಡೋಣ.

ಉದಾಹರಣೆಗಾಗಿ ಕನ್ನಡಿಗರ ಮಹಾಸಾಮ್ರಾಜ್ಯವಾದ ವಿಜಯನಗರದ ಸಂಸ್ಥಾಪನೆಯನ್ನೇ ತೆಗೆದುಕೊಳ್ಳೋಣ. ಮುಸ್ಲಿಮರ ದುರಾಕ್ರಮಣದಿಂದ ಹಿಂದೂ ಧರ್ಮವೂ, ಸಂಸ್ಕೃತಿಯೂ ವಿಲುಪ್ತವಾಗುತ್ತಿದ್ದ ವಿಷಮಸನ್ನಿವೇಶದಲ್ಲಿ ಧರ್ಮೋದ್ಧಾರಕರೂ, ಮಹಾ ತಾಪಸೋತ್ತಮರೂ, ಅದ್ಭುತ ಸತ್ವಶಾಲಿಗಳೂ ಆದ ವಿದ್ಯಾರಣ್ಯರು ವಿಜಯನಗರ ಸಾಮ್ರಾಜ್ಯವನ್ನು ಸಂಸ್ಥಾಪಿಸಿದರು.

ಆದರೆ ಯಾರ ಕಾಲದಲ್ಲಿ ? ಮೊಹಮ್ಮದ್ ಬಿನ್ ತೊಗಲಕನ ಆಡಳಿತದ ಅಂತಿಮ ಕಾಲದಲ್ಲಿ. ಮಹಮೂದ್ ಘಜ್ನವಿ, ಮೊಹಮ್ಮದ್ ಘೋರಿ, ಕುತ್ಬುದ್ದೀನ್, ಆಲ್ತಮಷ್, ಬಲ್ಬನ್, ಜಲಾಲುದ್ದೀನ್, ಅಲ್ಲಾವುದ್ದೀನ್, ಮಲ್ಲಿಕ್ ಕಾಫರ್, ಮುಬಾರಕ್, ಗಯಾಸುದ್ದೀನರ ಕಾಲದಲ್ಲಿ ಪ್ರಾಪ್ತವಾಗವಾಗದಿದ್ದಂತಹ ದುರ್ವಿಪತ್ತು, ಹಿಂದೂಗಳಿಗೆ ಈತನ ಕಾಲದಲ್ಲಿ ಪ್ರಾಪ್ತವಾಯಿತೇ ? ಈತನ ಹಿಂದೂ ದ್ವೇಷ ಎಷ್ಟರಮಟ್ಟಿಗೆ ಪ್ರಖರವಾಗಿರಬಹು

ದೆಂಬುದನ್ನು ಮುಸ್ಲಿಂ ಚರಿತ್ರಕಾರರ ಬರವಣಿಗೆಗಳಿಂದಲೇ ತಿಳಿಯೋಣ. ಆಫ್ರಿಕ ದೇಶದ ಯಾತ್ರಿಕನಾದ ಇಬ್ನೆಬತೂತನ ಬರವಣಿಗೆಯೆಂದರೆ, "ಈ ಚಕ್ರವರ್ತಿಗೆ ಮುಸ್ಲಿಮರಿಗಿಂತಲೂ ಹಿಂದೂಗಳ ಮೇಲೆಯೇ ಅತ್ಯಂತ ಪ್ರೇಮವಿದೆ. ಸದಾ ಹಿಂದೂ ಸನ್ಯಾಸಿಗಳ ಜೊತೆಯಲ್ಲಿಯೇ ವ್ಯರ್ಥವಾಗಿ ಕಾಲಹರಣ ಮಾಡುತ್ತಾನೆ. ಹಿಂದೂ ಸಾಮ್ರಾಜ್ಯ ಸ್ಥಾಪನೆಯೇ ಈತನ ಮುಖ್ಯೋದ್ದೇಶ. ಮುಸಲ್ಮಾನರನ್ನು ಶಿಕ್ಷಿಸುವುದರಲ್ಲಿಯೇ ಈತನಿಗೆ ತೀವ್ರಾಸಕ್ತಿ. ಹಿಂದೂ ಅಪರಾಧಿಗಳ ವಿರುದ್ಧ ಮುಸಲ್ಮಾನರು ದೂರಿತ್ತರೂ ಮುಸಲ್ಮಾನರನ್ನೇ ಶಿಕ್ಷಿಸುತ್ತಾನೆ. ಮುಸ್ಲಿಮರನ್ನಂತೂ ಈತನು ನಂಬುವುದೇ ಇಲ್ಲ." ಇಷ್ಟಲ್ಲದೆ ಇತರ ಮುಸ್ಲಿಂ ಚರಿತ್ರಕಾರರು ಈತನನ್ನು 'ಹುಚ್ಚ, ಐಲುದೊರೆ' ಎಂದು ಬರೆದು ಈತನ ಬಗ್ಗೆ ತಮ್ಮ ಉದರಾಗ್ನಿಯನ್ನು ಕಾರಿರುತ್ತಾರೆ. ಹೀಗಿರುವಲ್ಲಿ ಸತ್ಯಾಸತ್ಯತೆಯನ್ನು ವಿಚಾರಪರರೇ ಸೂಚಿಸಬೇಕು. ವಿಜಯನಗರದಂತೆಯೇ ಬಹಮನೀ ಸಾಮ್ರಾಜ್ಯವೂ ಸ್ಥಾಪಿತವಾಯಿತು. ಬಂಗಾಳ, ಮಾಳವ, ಗುಜರಾತ್ ಪ್ರಾಂತ್ಯಗಳೂ ಸ್ವತಂತ್ರವಾದುವು. ಔಧ್, ಜಯಪುರ ಸಂಸ್ಥಾನಗಳೂ ಸ್ವತಂತ್ರವಾದುವು. ಇವಕ್ಕೆಲ್ಲಾ ಕೇಂದ್ರದ ಶಕ್ತಿಯು ಕುಗ್ಗಿದುದೇ ಕಾರಣವಲ್ಲದೆ ಜಾತಿ ದ್ವೇಷವಲ್ಲ. ವಿದ್ಯಾರಣ್ಯರಿಂದ ಸಂಸ್ಥಾಪಿತವಾದ ವಿಜಯನಗರದ ಆ ಸ್ಥಾನದಲ್ಲಿ ಸಿಂಹಾಸನದ ಮುಂಭಾಗದಲ್ಲಿ ಉನ್ನತ ಪೀಠದ ಮೇಲೆ ಮುಸಲ್ಮಾನರ ಪೂಜ್ಯ ಗ್ರಂಥವಾದ ಖುರಾನ್ ಇರಿಸಲ್ಪಡುತ್ತಿದ್ದ ವಿಚಾರವೇ ಸಾಕ್ಷೀಭೂತವಾಗಿದೆ. ತಾಳೀಕೋಟೆ ಯುದ್ಧದಲ್ಲಿ ಹಿಂದೂಗಳಂತೆಯೇ ಮುಸ್ಲಿಂ ಯೋಧರೂ, ಸೇನಾಪತಿಗಳೂ ವಿಜಯನಗರದ ಪರವಾಗಿ ಹೋರಾಡುತ್ತ ಮಡಿದ ಚಿತ್ರ ಶುಭ್ರದರ್ಪಣದಂತೆ ಬೆಳಗುತ್ತಿದೆ.

ಇನ್ನು ಅಕ್ಬರ್ ಪ್ರತಾಪಸಿಂಹನ ವಿಚಾರ–ಮುಸ್ಲಿಂ ಪಕ್ಷಪಾತಿ ಅಕ್ಬರ್ ಹಿಂದೂಗಳಿಗೆ ಭೂಮಿಯಷ್ಟು ಭಾರದ ಅನ್ಯಾಯಗಳನ್ನು ಮಾಡಿದ್ದಾನೆ. ಆದ್ದರಿಂದಲೇ ಹಿಂದೂ ಧರ್ಮದ ರಕ್ಷಣೆಗಾಗಿ ಪ್ರತಾಪಸಿಂಹ ಟೊಂಕಕಟ್ಟಿದನು. ಕೊನೆಯವರೆಗೂ ಅಕ್ಬರನನ್ನಿದಿರಿಸಿ ಹೋರಾಡಿದನು.

ಆದರೆ ಅಕ್ಬರನು ಬೀರ್‌ಬಲ್, ತೋಡರ್‌ಮಲ್ಲರಂತಹ ಹಿಂದೂಗಳಿಗೇ ಆಡಳಿತದಲ್ಲಿ ಪ್ರಾಧಾನ್ಯವನ್ನು ಕೊಟ್ಟನು. ಮಾನಸಿಂಗನ ವಶಕ್ಕೇನೇ ಸೇನೆಯ ಸೂತ್ರಧಾರಿತ್ವವನ್ನು ವಹಿಸಿದನು. ಹಿಂದೂ ಧರ್ಮದ ದಿವ್ಯ ಪ್ರಭೃತಿಗಳೂ,

ಮಹಾಪುರುಷರೂ ಆದ ಸೂರ್‌ದಾಸ್, ಹರಿದಾಸ್, ತುಲಸೀದಾಸರಂತಹ ಕವಿಶ್ರೇಷ್ಠರು ಹಿಂದೂ ಧರ್ಮದ ತುಹಿನಗಿರಿ ತುಂಗನಿಭತತ್ವಗಳನ್ನು ಈತನ ನೆರವಿನಿಂಗಲೇ ನಿರಾತಂಕವಾಗಿ ಸಾರಿದರು. ಚಕ್ರವರ್ತಿ ರಾಮಾಯಣ, ಮಹಾಭಾರತ, ಅಥರ್ವಣವೇದ, ಹರಿವಂಶ, ಲೀಲಾವತಿ, ಯೋಗವಾಸಿಷ್ಠ, ರಾಜತರಂಗಿಣಿ, ನಳೋಪಾಖ್ಯಾನ, ತಾಜಕ ಗ್ರಂಥಗಳನ್ನು ಸಂಸ್ಕೃತದಿಂದ ಪಾರ್ಸಿಭಾಷೆಗೆ ಅನುವಾದಮಾಡಿಸಿ ಪ್ರಚಾರ ಕಾರ್ಯವನ್ನು ನಡೆಸಿದನು. ಗೋವಧೆಯನ್ನು ನಿಲ್ಲಿಸಿದನು. ಹಿಂದೂಗಳ ಹಬ್ಬಗಳಲ್ಲಿ ಇತರ ಪ್ರಾಣಿಗಳ ಮಾಂಸವಿಕ್ರಯವೂ ನಿಷಿದ್ಧವೆಂದು ಆಜ್ಞಾಪಿಸಿದನು. ತನ್ನ ಜೈನಗುರುಗಳಾದ ಮಹಾನ್ ಶ್ರೀಹರಿ ವಿಜಯಸೂರಿಯವರ ಅಪ್ಪಣೆಯಂತೆ ಬಂಧನದಲ್ಲಿದ್ದ ಬಂದಿಗಳನ್ನೆಲ್ಲಾ ಬಿಡುಗಡೆ ಮಾಡಿದನು. ಪಂಜರದಲ್ಲಿದ್ದ ಪಕ್ಷಿಗಳನ್ನೂ, ಮೃಗಾಲಯದಲ್ಲಿದ್ದ ಪ್ರಾಣಿಗಳನ್ನೂ ಬಿಟ್ಟುಬಿಟ್ಟನು. ತನಗೆ ಪ್ರಿಯವಾಗಿದ್ದ ಬೇಟೆಯನ್ನೂ ತ್ಯಜಿಸಿದನು. ಮೀನು ಹಿಡಿಯುವುದೂ ಶಿಕ್ಷಾರ್ಹ ಅಪರಾಧವೆಂದು ಸಾರಿದನು. ಇಂತಹ ನಿರ್ಮಲ ಮನೋಹರಚಿತ್ತನು ಹಿಂದೂಗಳ ನಾಶಕ್ಕಾಗಿ ಸಿದ್ಧನಾಗಿದ್ದನೇ? ಅದನ್ನು ತಪ್ಪಿಸಲು ಪ್ರತಾಪಸಿಂಹನು ಅಕ್ಬರನೊಡನೆ ಹೋರಾಡಿದನೇ?

ಈಗ ಶಿವಾಜಿ ಔರಂಗಜೇಬರ ವಿಷಯವನ್ನು ಕುರಿತು ವಿವೇಚಿಸೋಣ. ಔರಂಗಜೇಬ್ ಹಿಂದೂಧರ್ಮವನ್ನು ಸಮೂಲವಾಗಿ ಉಧ್ವಸ್ತಗೊಳಿಸಲು ಹವಣಿಸುತ್ತಿದ್ದ ಕಾಲದಲ್ಲಿ ಶಿವಾಜಿಯು ಮುಸ್ಲಿಂ ದ್ವೇಷಿಯಾಗಿ, ಹಿಂದೂ ಪ್ರೇಮಿಯಾಗಿ ಗೋಬ್ರಾಹ್ಮಣರನ್ನೂ, ಹಿಂದೂ ಧರ್ಮವನ್ನು ಕಾಪಾಡಿದನು. ಹಿಂದೂ ಸಾಮ್ರಾಜ್ಯವನ್ನು ಸ್ಥಾಪಿಸಿದನು.

ಆದರೆ ಶಿವಾಜಿಯ ಸೇನಾಪತಿಗಳಲ್ಲಿ ಸಿದ್ದೀಹುಲಾಲ, ಸಿದ್ದೀಸಂಬಾಲ, ಸಿದ್ದೀಮಿಶ್ರಿ, ನೂರ್‌ಖಾನ್, ದೌಲತ್‌ಖಾನ್ ಮುಂತಾದವರು ಶಿವಾಜಿಯ ಪ್ರೀತಿಗೆ ಪಾತ್ರರಾಗಿ ಜವಾಬ್ದಾರಿಯುತ ಸ್ಥಾನಗಳಲ್ಲಿದ್ದರು. ಶಿವಾಜಿಯ ಸ್ವಧರ್ಮೀಯರೇ ಆದ ಚಂದ್ರರಾವ್‌ಮೋರೆ, ಸೂರ್ಯಾಜಿಪಿಸಾಳೆಯಂಥವರು ಮಹಾರಾಷ್ಟ್ರ ಸಾಮ್ರಾಜ್ಯದ ವಿನಾಶಕ್ಕಾಗಿ ಶತ್ರುಗಳೊಡನೆ ಸೇರಿಕೊಂಡು ಪಿತೂರಿ ನಡೆಸಿದರೆ, ಮುಸ್ಲಿಂ ಸೇನಾಪತಿಗಳು ತಮ್ಮ ನಾಯಕನಾದ ಶಿವಾಜಿಗಾಗಿ ಔರಂಗಜೇಬನ ಹಾಗೂ ಬಿಜಾಪುರದ ಬಲಿಷ್ಠ ಸೇನೆಗಳನ್ನಿದಿರಿಸಿ ಹೋರಾಡಿ

ದರು. ಶಿವಾಜಿ ರಾಯಗಡದಲ್ಲಿ ಮಸೀದಿಯನ್ನು ಕಟ್ಟಿಸಿದನು. ಅದಕ್ಕೆ ಶಾಶ್ವತ ವಾದ ಉಂಬಳಿಯನ್ನು ಹಾಕಿಕೊಟ್ಟನು. ಹಿಂದೂಗಳು ಮುಸಲ್ಮಾನರ ಮಸೀದಿಗಳಿಗೆ ಗೌರವವನ್ನು ತೋರಿಸಬೇಕೆಂದು ಪ್ರಕಟಿಸಿದನು. ಮುಸಲ್ಮಾನರ ಪೂಜ್ಯಗ್ರಂಥವಾದ ಖುರಾನನ್ನು ಗೌರವದಿಂದ ಕಾಣಬೇಕೆಂದು ತನ್ನ ಸೈನಿಕರಿಗೆ ಕಟ್ಟಾಜ್ಞೆಯಿತ್ತನು. ಇಂತಹ ಮಹಾನುಭಾವನು ನಡೆಸಿದ ಹೋರಾಟಕ್ಕೆ ಜಾತೀಯ ಬಣ್ಣವನ್ನು ಹಚ್ಚಬಹುದೇ? ಶಿವಾಜಿಯ ತಂದೆಯ ಹೆಸರು ಷಹಜಿ. ಚಿಕ್ಕಪ್ಪನ ಹೆಸರು ಷರೀಫ್‌ಜಿ. ಈ ಹೆಸರುಗಳ ಹಿನ್ನೆಲೆ ಎಂತಹ ಮಧುರ ಅಂಶವನ್ನು ಒಳಗೊಂಡಿರಬಹುದು ?

ಔರಂಗಜೇಬನ ಆಸ್ಥಾನದಲ್ಲಿ ಒಬ್ಬನಾದರೂ ಹಿಂದೂ ಅಧಿಕಾರಿಯು ಗೋಚರಿಸುತ್ತಿರಲಿಲ್ಲವೆಂದು ಆಕ್ಷೇಪಿಸಲಾಗಿದೆ. ಸರ್ದಾರ್ ಜಯಸಿಂಗ್, ಸರ್ದಾರ್ ಜಸವಂತಸಿಂಗರೇ ಆತನ ಪ್ರಧಾನ ಸೇನಾಪತಿಗಳು. ಇಷ್ಟಲ್ಲದೆ ಇಪ್ಪತ್ತಾರು ಜನ ಹಿಂದೂಗಳು ಅಧೀನಸೇನಾಪತಿಗಳು. ಔರಂಗಜೇಬನ ಮುಖ್ಯ ಕಾರ್ಯದರ್ಶಿಯೇ ವಾಲೀರಾಮ್. ಆತನ ಅರ್ಥ ಮಂತ್ರಿ ರಘುನಂದನ ರಾಯ್. ಆತನ ಆಸ್ಥಾನದಲ್ಲಿ ಮತಿರಾಮ್, ಬೃಂದ, ತ್ರಿವೇದಿ, ಕಾಳಿ, ಭೂಷಣ ಮೊದಲಾದ ಕವಿಗಳು ವಿರಾಜಮಾನರಾಗಿದ್ದರು. ಆತನ ಪ್ರಧಾನ ನ್ಯಾಯಾಲಯದ ಶ್ರೇಷ್ಠ ನ್ಯಾಯಾಧಿಪತಿಗಳಿಬ್ಬರೂ ಪಾರ್ಸಿಗಳೇ ಆಗಿದ್ದರು. ಔರಂಗಜೇಬನು ಕಾಶೀದೇವಾಲಯದ ಅರ್ಚಕರಿಗೆ ಅವರ ಹಕ್ಕುಬಾಧ್ಯತೆ ಗಳನ್ನು ಸಂರಕ್ಷಿಸಿಕೊಂಡು ಬರುವೆನೆಂದು ಅಭಯ ಪ್ರದಾನ ಪತ್ರಗಳನ್ನು ಬರೆದುಕೊಟ್ಟನು. ಪಂಚಾಚಾರ್ಯರಲ್ಲೊಬ್ಬರಾದ ವಿಶ್ವಾರಾಧ್ಯರ ಪೀಠವು ಕಾಶಿಯ ಜಂಗಮವಾಡಿಯಲ್ಲಿದ್ದು ಅದಕ್ಕೆ ಉಂಬಳಿಯನ್ನು ಹಾಕಿಕೊಟ್ಟು ಗೌರವವನ್ನು ವ್ಯಕ್ತಗೊಳಿಸಿರುವುದರ ಬಗ್ಗೆ ಔರಂಗಜೇಬನ ಮೂರು ಸನದು ಗಳನ್ನು ಈಗಲೂ ಅಲ್ಲಿ ಕಾಣಬಹುದಾಗಿದೆ. ಅವನು ಧರ್ಮಾಂಧನಾಗಿರ ಲಿಲ್ಲ. 'ನ್ಯಾಯತೀರ್ಪೀಯುವ ಹಕ್ಕು ಮುಸಲ್ಮಾನರಿಗೆ ಮಾತ್ರವಿರಬೇಕು. ಆದ್ದರಿಂದ ಶ್ರೇಷ್ಠ ನ್ಯಾಯಾಧಿಪತಿಗಳಿಬ್ಬರನ್ನೂ ತೆಗೆದುಹಾಕಬೇಕು" ಎಂದು ಮೌಲ್ವಿಯೊಬ್ಬನು ಮನವಿಯನ್ನು ಸಲ್ಲಿಸಿದಾಗಲೂ, "ಹಿಂದೂಗಳನ್ನು ಜವಾ ಬ್ದಾರಿ ಸ್ಥಾನಗಳಿಂದ ನಿವೃತ್ತಿಗೊಳಿಸಬೇಕು" ಎಂದು ಆತ್ಮೀಯನೊಬ್ಬನು ಸೂಚಿಸಿದಾಗಲೂ ಔರಂಗಜೇಬನ ಉತ್ತರವು ಮನೋಜ್ಞವಾಗಿದೆ: "ಧರ್ಮಕ್ಕೂ

ಆಡಳಿತಕ್ಕೂ ಯಾವ ಸಂಬಂಧವೂ ಇಲ್ಲ. ರಾಜ್ಯಾಂಗದಂತೆ ಪರಮತಗಳ ಹಿಂಸೆಯು ಅಪರಾಧವು. ಅನರ್ಥಪ್ರಾಪ್ತಿಯು. ಉದ್ಯೋಗವು ಸ್ವಜಾತಿಯವರಿಗೆ ಕೊಡುವ ರುಷುವತ್ತಲ್ಲ. ವ್ಯಕ್ತಿಯ ಗುಣವನ್ನೂ, ಸಾಮರ್ಥ್ಯವನ್ನೂ ತಿಳಿದು ವಹಿಸುವ ಜವಾಬ್ದಾರಿಯು." ಮಕ್ಕಾಪಟ್ಟಣದ ದೊರೆಯು ಧರ್ಮಕಾರ್ಯಗಳಿಗಾಗಿ ಹಣವನ್ನು ಕಳುಹಿಸಿಕೊಡಬೇಕು ಎಂದು ಪತ್ರ ಬರೆದಾಗ ಔರಂಗಜೇಬನ ಉತ್ತರವು ಹೀಗಿದೆ. "ಮಕ್ಕಾದಲ್ಲಿರುವ ದೇವರು ಹಿಂದೂಸ್ಥಾನದಲ್ಲಿಯೂ ಇದ್ದಾನೆ. ಅಲ್ಲಿರುವಂತೆಯೇ ಇಲ್ಲಿಯೂ ಬಡವರಿದ್ದಾರೆ. ಆದ್ದರಿಂದ ಇಲ್ಲಿಯೇ ಸತ್ಪಾತ್ರದಾನ ಮಾಡಬಹುದಾಗಿದೆ. ಹಣ ಕಳುಹಿಸಲು ಸಾಧ್ಯವಿಲ್ಲ." ಈ ವಿಚಾರಗಳನ್ನೆಲ್ಲಾ ಅವಲೋಕಿಸಿದ ಅನಂತರ ಶಿವಾಜಿ ಔರಂಗಜೇಬರಿಗೆ ನಡೆದ ಯುದ್ಧ, ಸ್ವಧರ್ಮ ರಕ್ಷಣೆಗಾಗಿ ನಡೆದ ಯುದ್ಧವಲ್ಲವೆಂಬುದು ಸ್ಪಷ್ಟವಾಗುತ್ತದೆ.

ಇನ್ನು ಮೈಸೂರಿನ ಟೀಪುವಿನ ವಿಚಾರ. ಟೀಪೂಸುಲ್ತಾನ್ ಮಹಾ ಹಿಂದೂ ದ್ವೇಷಿಯೆಂದು ಬರೆಯಲಾಗಿದೆ. ಬರೆಯುತ್ತಿರಲಾಗಿದೆ. ಆದರೆ ಟೀಪುವಿನ ಪರಮತ ಸಹಿಷ್ಣುತೆಯನ್ನೂ, ಧಾರ್ಮಿಕ ಮನೋಭಾವವನ್ನೂ ಅರಿಯಬೇಕಾದರೆ, ಶೃಂಗೇರಿ ಮಠದಲ್ಲಿ ಈಗಲೂ ಜೀವಂತವಾಗಿರುವ ನಲವತ್ತು ಪತ್ರಗಳನ್ನು ಅವಲೋಕಿಸಬಹುದಾಗಿದೆ. ಪೇಷ್ವೆಯ ಸೈನಿಕರು ಶೃಂಗೇರಿ ಮಠವನ್ನು ಸೂರೆಮಾಡಿ, ಐವತ್ತು ಲಕ್ಷ ರೂಪಾಯಿಗಳ ರತ್ನಾಭರಣಗಳನ್ನು ದೋಚಿಕೊಂಡು ಹೋದಾಗ, ಟೀಪು ಶೃಂಗೇರಿ ಮಠಕ್ಕೆ ಸರ್ವರೀತಿಯ ಸಾಹಾಯ್ಯವನ್ನೂ ನೀಡಿದನು. ವಿಪುಲ ಧನವ್ಯಯದಿಂದ ಶಾರದಮ್ಮನವರ ಪ್ರತಿಷ್ಠಾಪನಾಕಾರ್ಯವನ್ನು ನಡೆಸಿದನು. ಗುರುಗಳ ನೇತೃತ್ವದಲ್ಲಿ ದೇಶದ ಕಲ್ಯಾಣಕ್ಕಾಗಿ ಎರಡು ವೇಳೆ ಚಂಡಿಹೋಮವನ್ನು ಮಾಡಿಸಿದನು. ಸ್ನಾನಕ್ಕೆಂದು ಕಾವೇರಿನದಿಯಲ್ಲಿ ಮುಳುಗಿದಾಗ, ತನ್ನ ಕೈಗೆ ದೊರೆತ ಶಿವಲಿಂಗವನ್ನು ಗೌರವದಿಂದ ಶೃಂಗೇರಿ ಮಠಕ್ಕೆ ಕಳುಹಿಸಿಕೊಟ್ಟನು. ಶ್ರೀರಂಗಪಟ್ಟಣದ ರಂಗನಾಥ ಸ್ವಾಮಿಗೆ ಅಭಿಷೇಕವನ್ನು ಮಾಡಿಸಿ, ಬ್ರಾಹ್ಮಣ ಸಂತರ್ಪಣೆಯನ್ನು ನಡೆಸುತ್ತಿದ್ದ ವಿಚಾರವೂ ಮಿಥ್ಯವೇನಲ್ಲ. ಇಂತಹ ನೂರಾರು ನಿದರ್ಶನಗಳು ನಮ್ಮೆದಿರಿನಲ್ಲಿರುವಾಗ, ಚಾರಿತ್ರಿಕ ಮಹಾಪುರುಷರ ಮುಖಕ್ಕೆ ಜಾತಿಯ ಬಣ್ಣ ಬಳಿಯುವುದರಲ್ಲಿ ಏನು ಅವ್ಯಾಯನವಿದೆಯೋ ?

ಮೇಲಿನ ವಿಚಾರಗಳನ್ನು ತಿಳಿಸುವಾಗ, ಮುಸಲ್ಮಾನರ ಆಡಳಿತದ ಕಾಲದಲ್ಲಿ ಅನ್ಯಾಯಗಳು ನಡೆದಿಲ್ಲವೆಂತಲೂ, ಅನುಚಿತ ಘಟನೆಗಳು ಜರುಗ ಲಿಲ್ಲವೆಂತಲೂ ನಾನೇನು ಪ್ರತಿಪಾದಿಸುವುದಿಲ್ಲ. ಆದರೆ ಜಾತಿವಾದಿಗಳು ಯಾವುದರಲ್ಲಿ ಜಾತೀಯತೆಯನ್ನು ಕಾಣುತ್ತಿದ್ದಾರೆಯೋ, ಅದು ಸತ್ಯ ದೂರವಾದ ವಿಚಾರವೆಂದು ತಿಳಿಸಲು ಮಾತ್ರ ಪ್ರಯತ್ನಿಸಿದ್ದೇನೆ.

ತ್ವರಿತದಲ್ಲಿಯೇ ಇತಿಹಾಸದ ಸ್ಪಷ್ಟ ಚಿತ್ರವನ್ನೂ, ಹಿಂದೂ ಮುಸ್ಲಿಂ ವಿದ್ವೇಷದ ಮೂಲಕಾರಣಗಳನ್ನೂ ಸಾಧಾರಣವಾಗಿ ಗ್ರಂಥರೂಪದಲ್ಲಿ ಕನ್ನಡಿ ಗರಿಗೆ ಅರ್ಪಿಸಲಿದ್ದೇನೆ.

ಈ ಚಿಕ್ಕ ಹೊತ್ತಿಗೆಯನ್ನು ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ಚಿತ್ರಾ ಮುದ್ರಣಾಲಯದ ಮಾಲೀಕರಾದ ಶ್ರೀಮಾನ್ ಹೆಚ್.ವೆಂಕೋಬರಾಯ ರಿಗೆ ನಾನು ಚಿರರುಣಿಯಾಗಿರುತ್ತೇನೆ. ಮುದ್ರಣ ಕಾರ್ಯದಲ್ಲಿ ಸಲಹೆ, ಸಹಕಾರ ಗಳನ್ನು ನೀಡಿದ ಆತ್ಮೀಯರಿಗೆ ನಾನು ಅತ್ಯಂತ ಆಭಾರಿಯಾಗಿರುತ್ತೇನೆ. ಕನ್ನಡಿಗರಿಗೆ ನನ್ನ ಈ ಲಘು ಪ್ರಯತ್ನವು ಸಂಗತವೆಂದು ತೋರಿದರೆ, ನನ್ನನ್ನು ಸುದೈವಿಯೆಂದು ಭಾವಿಸಿಕೊಳ್ಳುತ್ತೇನೆ.

೨೦-೧೨-೫೩ ಇಂತು

ಬೆಂಗಳೂರು **ಎಸ್. ಕೆ. ಕರೀಂಖಾನ್**

# ರೂಪ್‌ಕಿಶೋರಿ

ಡಾಕ್ಟರ್ ಆಜಮ್ ಸಾಹೇಬ್ ಕರೀಮಿ

ಮುನ್ನೂರು ವರ್ಷಗಳ ಹಿಂದಿನ ಮಧುರ ಕಥಾನಕ. ಸಂಸವ್ಯಕ್ತ ಭಾರತವು ವೈಭವ ಶಿಖರಾಗ್ರದಲ್ಲಿ ಕುಳಿತು ಹರ್ಷಾಧಿಕ್ಯದಿಂದ ಲೋಲಾಡುತ್ತಿತ್ತು. ನ್ಯಾಯಸಿಂಹ ಸಾರ್ವಭೌಮ ಜಹಾಂಗೀರನು ತನ್ನ ಜನ್ಮಭೂಮಿಯಾದ ಭಾರತದ ಅಭ್ಯುದಯಕ್ಕಾಗಿ ಅವಿಶ್ರಾಂತನಾಗಿ ಶ್ರಮಿಸುತ್ತಿದ್ದನು. ಮತಭೇದ ಭಾವವನ್ನು ಬದಿಗೊತ್ತಿ ದೇಶದ ಕಲ್ಯಾಣಕ್ಕಾಗಿ ದುಡಿಯುತ್ತಿದ್ದ ಹಿಂದೂ ಮುಸಲ್ಮಾನರ ಅನ್ಯೋನ್ಯತೆಯು ಕ್ಷೀರೋದಕದಂತೆ ಬೆರೆತು ಸುಮಧುರವಾಗಿತ್ತು. ದವಸ ಧಾನ್ಯಗಳು ವಿಪುಲವಾಗಿಯೂ, ಅಗ್ಗವಾಗಿಯೂ ದೊರಕುತ್ತಿದ್ದುವು. ಹಾಲು ತುಪ್ಪಗಳಿಗೆ ಅಭಾವವಿರಲಿಲ್ಲ. ಕ್ಷುಧಾಪೀಡನೆಯಿಂದ ನರಳಿ ಸತ್ತವರ ವಿಷಯವನ್ನು ಯಾರೊಬ್ಬರೂ ಕಂಡು ಕೇಳಿ ಅರಿಯರು. ಬಡವ ಬಲ್ಲಿದ, ಅಧಿಕಾರಿ ಪ್ರಜೆ ಎಂಬ ಭೇದವಿಲ್ಲದೆ ಪ್ರತಿಯೊಬ್ಬರಿಗೂ ನ್ಯಾಯವು ದೊರಕುತ್ತಿತ್ತು. ನ್ಯಾಯನಿಷ್ಠರೂ, ಸತ್ಯಪ್ರಿಯರೂ, ಧರ್ಮಾತ್ಮರೂ, ದೈವಭಕ್ತರೂ ಆದವರು ಮಾತ್ರವೇ ನ್ಯಾಯ ಪೀಠದ ಮೇಲೆ ಕುಳಿತು ವ್ಯವಹಾರಗಳನ್ನು ಪರಿಶೀಲಿಸಿ, ಭಗವಂತನನ್ನು ಆಧಾರಿಯಾಗಿಟ್ಟುಕೊಂಡು ತೀರ್ಪಿೀಯುತ್ತಿದ್ದರು. ದೇಶದಾದ್ಯಂತವೂ ಶಾಂತಿ, ಸಂಮೋದಗಳು ಲಾಸ್ಯವೆಸಗುತ್ತಿದ್ದುವು.

ಕ್ರಿ. ಶ. ೧೬೧೭ರಲ್ಲಿ ಬಿಜಾಪುರದ ಸುಲ್ತಾನರಿಗೂ, ದೆಹಲಿಯ ಚಕ್ರವರ್ತಿಗೂ ಯುದ್ಧವು ಸಂಪ್ರಾಪ್ತವಾಯಿತು. ರಾಜಕುಮಾರ ಷಹಜಹಾನನು ಬಿಜಾಪುರದ ಮೇಲೆ ಧಾಳಿಯಿಟ್ಟನು. ಮಗನ ನೆರವಿಗಾಗಿ ಬಂದ ಜಹಾಂಗೀರನು ಸ್ವತಃ ಯುದ್ಧದಲ್ಲಿ ಭಾಗಿಯಾಗಿದ್ದನು. ಜಹಾಂಗೀರನ ಸೇನೆಯು ಮಾಂಡೂಗಡ್‌ನಲ್ಲಿ ಬೀಡುಬಿಟ್ಟಿದ್ದಿತು. ಅಗತ್ಯವೆಂದು ತೋರಿದಾಗ ಅದು ಬಂದು ಷಹಜಹಾನನಿಗೆ ನೆರವನ್ನು ನೀಡುತ್ತಿತ್ತು. ಚಕ್ರವರ್ತಿಯು ತನ್ನ ವಿರಾಮ ಕಾಲವನ್ನು ಬೇಟೆಯಲ್ಲಿ ಕಳೆಯುತ್ತಿದ್ದನು. ಒಮ್ಮೆ ಜಹಾಂಗೀರನು ಬೇಟೆಯಾಡುತ್ತಾದುತ್ತಾ ಒಂದು ಮೃಗದ ಬೆನ್ನಟ್ಟಿದವನು ತನ್ನ ಅನುಯಾಯಿಗಳಿಂದ ಪ್ರತ್ಯೇಕಿಸಲ್ಪಟ್ಟು ಘೋರಾರಣ್ಯವನ್ನು ಹೊಕ್ಕನು.

ಚಂಡ ಭಾಸ್ಕರನು ಗಗನಮಧ್ಯದಲ್ಲಿ ಪ್ರಕಾಶಿಸುತ್ತ ತನ್ನ ಪ್ರಖರಾಂಶು ಗಳಿಂದ ಮರ್ತ್ಯಲೋಕದ ಮೇಲೆ ಅಗ್ನಿವೃಷ್ಟಿಗರೆಯುತ್ತಿದ್ದನು. ವನವೆಲ್ಲವೂ ಕುಂಬಾರನ ಆವಿಗೆಯಂತೆ ತಾಪದಾಯಕವಾಗಿತ್ತು. ಬಿಸಿಲಿನ ಬೇಗೆಯಿಂದ ಜಹಾಂಗೀರನ ಪುಷ್ಪವದನವು ಬಾಡಿಹೋಗಿತ್ತು. ಅವನ ಬತ್ತಿದ ಕಂಠವು ನೀರಿಗಾಗಿ ಹಂಬಲಿಸುತ್ತಿತ್ತು. ಯಾವೆಡೆ ಈಕ್ಷಿಸಿದರೂ ದಾರಿದೋರುವಂತಿಲ್ಲ. ಎಷ್ಟು ಶೋಧಿಸಿದರೂ ನೀರು ಸಿಗುವಂತಿಲ್ಲ. ತೃಷಾಪೀಡನೆಯಿಂದ ಬಸವಳಿಯ ಲಾರಂಭಿಸಿದನು. ಭಯವಿಹ್ವಲನಾಗಿ ತೊಳಲುತ್ತಿದ್ದಾಗ ದೂರದಲ್ಲಿ ಅವನಿ ಗೊಂದು ಮನೆಯು ಗೋಚರಿಸಿತು. "ಈ ಭಯಾನಕವಾದ ಅರಣ್ಯದಲ್ಲಿ ಕೇವಲ ಒಂದೇ ಮನೆಯು ಹೇಗೆ ನಿರ್ಮಿಸಲ್ಪಟ್ಟಿತು!" ಎಂದು ಅಚ್ಚರಿ ಗೊಂಡನು. ಆದರೆ ನೀರಿನಲ್ಲಿ ಮುಳುಗಿಹೋಗುತ್ತಿರುವವನಿಗೆ ತೃಣವೇ ಒಂದು ಆಧಾರ. ಆದ್ದರಿಂದ ತನ್ನ ಕುದುರೆಯನ್ನು ಆ ಮನೆಯ ಕಡೆಗೆ ತಿರುಗಿಸಿದನು.

ಮನೆಯ ಸಮೀಪಕ್ಕೆ ಬಂದೊಡನೆಯೇ ಜಹಾಂಗೀರನು ಏನನ್ನು ನೋಡುತ್ತಾನೆ? ತನ್ನ ನಿರುಪಮ ರೂಪುಲಾವಣ್ಯಗಳಿಂದಲೂ, ಪುಷ್ಪತನುವಿನ ಲಾಲಿತ್ಯದಿಂದಲೂ ವನವೆಲ್ಲವನ್ನೂ ಬೆಳಗುತ್ತಿರುವ ವನದೇವಿಯ ಷೋಡಷ ವರ್ಷದ ಬಾಲೆಯೋರ್ವಳು ಸುಂದರವಾದ ಜಗುಲಿಯ ಮೇಲೆ ಕುಳಿತಿದ್ದಾಳೆ. ತನ್ನ ಮೋಹನಾಕಾರವನ್ನು ಮಾಸಿದ ಹರಕು ವಸ್ತ್ರಗಳಲ್ಲಿ ಮರೆಸಿಕೊಂಡಿದ್ದ ಆ ಮುಗ್ಧ ವನಬಾಲೆಯನ್ನು ನೋಡಿದವರಿಗೆ ಮೋಡದ ತೆರೆಯಲ್ಲಿ ಸೂರ್ಯ ಪ್ರಭೆಯೂ, ಧೂಳಿನ ಹೊದಿಕೆಯಲ್ಲಿ ವಜ್ರಕಾಂತಿಯೂ ಅಡಗಿಕೊಂಡಿದ್ದಂತೆ ವಿದಿತವಾಗುತ್ತಿತ್ತು. ಜಹಾಂಗೀರನು ಆ ಬಾಲೆಯ ಸಮೀಪಕ್ಕೆ ಬಂದನು. ತನ್ನ ಸಮೀಪಕ್ಕೆ ಬಂದ ಜಹಾಂಗೀರನನ್ನು ಕಂಡು ಆ ಬಾಲೆಯು ಲಜ್ಜೆಯಿಂದ ತಲೆಯನ್ನು ತಗ್ಗಿಸಿದಳು. ಚಕ್ರವರ್ತಿಯು ಓರ್ವ ಸಾಮಾನ್ಯ ಮನುಷ್ಯನಂತೆ ಆ ಬಾಲೆಯನ್ನು ಕುರಿತು "ಕುಮಾರಿ! ನಾನೋರ್ವ ಬಡದಾರಿಕಾರನು. ದಾರಿತಪ್ಪಿ ಈ ದಟ್ಟವಾದ ಕಾಡಿನಲ್ಲಿ ಪ್ರವೇಶಿಸಿರುತ್ತೇನೆ. ಬಾಯಾರಿಕೆಯಿಂದ ನನ್ನ ಪರಿಸ್ಥಿತಿಯು ಚಿಂತಾಜನಕವಾಗಿದೆ. ದಯವಿಟ್ಟು ಪರಮಾತ್ಮನಿಗಾಗಿ ಕುಡಿಯಲು ಕೊಂಚ ನೀರನ್ನು ಕೊಡು" ಎಂದು ಕೇಳಿದನು.

ಕುಮಾರಿಯು ಜಹಾಂಗೀರನನ್ನು ಸಹಾನುಭೂತಿಯಿಂದ ದಿಟ್ಟಿಸುತ್ತ ವಿನಯಪೂರ್ವಕವಾಗಿ "ಪ್ರಯಾಣಿಕರೇ! ಕುದುರೆಯಿಂದಿಳಿದು ವಿಶ್ರಮಿಸಿ

ಕೊಳ್ಳಲು ನೆಳಲಿಗೆ ಬನ್ನಿ. ನಾನು ಈಗಲೇ ನೀರನ್ನು ತರುವೆನು" ಎಂದು ಅವಳು ಮನೆಯೊಳಗೆಹೋದಳು. ಜಹಾಂಗೀರನು ಕುದುರೆಯಿಂದಿಳಿದು ಅದನ್ನು ಒಂದು ಮರಕ್ಕೆ ಕಟ್ಟಿಹಾಕಿದನು. ಅನಂತರ ಬಂದು ಜಗುಲಿಯ ಮೇಲೆ ಕುಳಿತುಕೊಂಡನು. ಇಷ್ಟು ಹೊತ್ತಿಗೆ ಕುಮಾರಿಯು ಒಂದು ಗಿಂಡಿಯಲ್ಲಿ ಜಲವನ್ನೂ, ಒಂದು ತಟ್ಟೆಯಲ್ಲಿ ಜವೇಗೋಧಿಯ ಎರಡು ರೊಟ್ಟಿಗಳನ್ನೂ, ಕೊಂಚ ಉಪ್ಪಿನ ಪಲ್ಯವನ್ನೂ ತೆಗೆದುಕೊಂಡು ಬಂದಳು. ಕರುಣಾರ್ದ್ರಚಿತ್ತದ ಆ ನಿರ್ದೋಷ ಸಾತ್ವಿಕ ಬಾಲೆಯು ಜಹಾಂಗೀರನನ್ನು ಕುರಿತು "ಪಥಿಕರೇ! ಮುಖವನ್ನೂ, ಕೈಕಾಲುಗಳನ್ನೂ ತೊಳೆದುಕೊಳ್ಳಿರಿ. ಮೊದಲು ಕೊಂಚ ರೊಟ್ಟಿಯನ್ನು ತಿಂದು ಅನಂತರ ನೀರನ್ನು ಕುಡಿಯಿರಿ. ಬಾಯಾರಿ ಬಳಲಿರುವ ಸಂದರ್ಭದಲ್ಲಿ ಬರಿ ಹೊಟ್ಟೆಗೆ ನೀರನ್ನು ತೆಗೆದುಕೊಳ್ಳಬಾರದು. ಆರೋಗ್ಯವು ಕಡಬಹುದು" ಎಂದಳು. ಚಕ್ರವರ್ತಿಯು ಕುಮಾರಿಯ ಸೌಜನ್ಯವನ್ನೂ, ಪರೋಪಕಾರ ಬುದ್ಧಿಯನ್ನೂ ಕಂಡು ವಿಸ್ಮಿತನಾದನು. ಮಂತ್ರಮುಗ್ಧನಂತೆ ಕುಮಾರಿಯ ವಾಕ್ಯವನ್ನೊಪ್ಪಿಕೊಂಡನು. ಆ ಒಣರೊಟ್ಟಿಯ ಚೂರುಗಳಲ್ಲಿ, ಆ ಕಾಡಿನ ಸೊಪ್ಪಿನಲ್ಲಿ ಜಹಾಂಗೀರನು ಯಾವ ರುಚಿಯನ್ನು ಕಂಡನೋ, ಆ ರುಚಿಯು ಅರಮನೆಯ ಭಕ್ಷ್ಯಭೋಜ್ಯಗಳಲ್ಲಿ ಆತನಿಗೆಂದೂ ಲಭಿಸಿರಲಿಲ್ಲ. ಊಟವಾದ ಅನಂತರ ಚಕ್ರವರ್ತಿಯು ಕುಮಾರಿಯ ಮನೋವಕೃತಿಯನ್ನು ಮುಕ್ತಕಂಠದಿಂದ ಹೊಗಳಿದನು.

ಚಕ್ರವರ್ತಿಯು ಊಟಮಾಡುತ್ತಿದ್ದಾಗ ಕುಮಾರಿಯು ಅವನ ಮುಖವನ್ನು ಎವೆಯಿಕ್ಕದ ದಿಟ್ಟಿಸುವಳು. ಅವನು ಅವಳೆಡೆಗೆ ದೃಷ್ಟಿಯನ್ನು ಹರಿಸಿದೊಡನೆಯೇ, ನಾಚಿಕೆಯಿಂದ ತಲೆಯನ್ನು ತಗ್ಗಿಸುವಳು. ಪುನಃ ಅವಕಾಶವು ದೊರೆತೊಡನೆಯೇ ಅವಳು ಅವನ ಅಂಗಾಂಗಗಳ ಮೇಲೆಲ್ಲಾ ತನ್ನ ಕಣ್ನೋಟವನ್ನು ಬೀರುವಳು. ಹಠಾತ್ತನೇ ಅವಳ ದೃಷ್ಟಿಯು ಜಹಾಂಗೀರನ ಬೆರಳಿನಲ್ಲಿದ್ದ ಪದ್ಮರಾಗದ ಔಂಗುಳೀಯಕದ ಮೇಲೆ ಬಿದ್ದಿತು. ಒಡನೆಯೇ ಹರ್ಷಾಧಿಕ್ಯದಿಂದ ಅವಳ ಮುಖಪದ್ಮವು ಪ್ರಫುಲ್ಲಿತವಾಯಿತು. ಅವಳು ತಕ್ಷಣವೇ ಒಳಗೆ ಹೋಗಿ ಒಂದು ಕಾಗದದ ಕಟ್ಟನ್ನು ತಂದಳು ಒಂದು ಬರಿಕಾಗದವನ್ನು ತೆಗೆದುಕೊಂಡು ಅದರ ಮೇಲೆ ಲಗ್ನಕುಂಡಲಿಯನ್ನು ರಚಿಸಲಾರಂಭಿಸಿದಳು. ಜಹಾಂಗೀರನೂ ಜ್ಯೋತಿಷ್ಯದಲ್ಲಿ ಪ್ರವೀಣತೆಯನ್ನು ಪಡೆದಿದ್ದನು.

ಅವನು ಆ ಬಾಲೆಯ ವಿದ್ಯಾಪ್ರೌಢಿಮೆಯನ್ನು ಕಂಡು ಮನದಲ್ಲಿಯೇ ಅವಳನ್ನು ಶ್ಲಾಘಿಸಿದನು.

ವಿಶ್ರಾಂತಿಗೆಂದು ಕುಳಿತ ಜಹಾಂಗೀರನು ಭೀತಿಯಿಂದ ಸಾಂದ್ರ ಘೋರಾರಣ್ಯವನ್ನೊಮ್ಮೆ ನೋಡುವನು. ಅಚ್ಚರಿಯಿಂದ ಅಸೀಮಾಂಬರವನ್ನೊಮ್ಮೆ ದಿಟ್ಟಿಸುವನು. ದಯಾರ್ದ್ರ ದೃಷ್ಟಿಯಿಂದ ಆ ಮೋಹನಾಕಾರದ ಮುಗ್ಧವನ ಬಾಲೆಯನ್ನೊಮ್ಮೆ ಈಕ್ಷಿಸುವನು. ಈ ವೇಳೆಗೆ ಕುಂಡಲಿಯು ರಚಿತವಾಯಿತು. ಜಹಾಂಗೀರನ ಆನಂದಕ್ಕೂ, ಆಶ್ಚರ್ಯಕ್ಕೂ ಮೇರೆಯಿಲ್ಲವಾಯಿತು. ಅದು ಆತನ ಜನ್ಮಕುಂಡಲಿಯಾಗಿತ್ತು. ಕುಂಡಲಿಯ ಮೇಲೆ ಕುಮಾರಿಯು 'ಸಾರ್ವಭೌಮ ಜಹಾಂಗೀರ್' ಎಂದು ಮುದ್ದಾದ ಅಕ್ಷರಗಳಲ್ಲಿ ಬರೆದಿದ್ದಳು. ಅನಂತರ ಅವಳು ಜಹಾಂಗೀರನನ್ನು ನೀವು ಎನ್ನುವುದಕ್ಕೆ ಪ್ರತಿಯಾಗಿ ತಾವು ಎಂದು ಸಂಬೋಧಿಸಲಾರಂಭಿಸಿದಳು. "ತಾವು ದಯವಿಟ್ಟು ತಮ್ಮ ಅಂಗೈಯನ್ನು ಕೊಂಚ ತೋರಿಸಬಲ್ಲಿರಾ?" ಎಂದು ಕೇಳಿದಳು. ಚಕ್ರವರ್ತಿಯು ಸಂತೋಷದಿಂದ ತನ್ನ ಅಂಗೈಯನ್ನು ಮುಂದೆ ನೀಡಿದನು. ಕುಮಾರಿಯು ಚಕ್ರವರ್ತಿಯ ಹಸ್ತರೇಖಾವಳಿಯನ್ನು ಸ್ವಲ್ಪಹೊತ್ತಿನವರೆಗೆ ಶ್ರದ್ಧೆಯಿಂದ ನೋಡಿದಳು. ಅನಂತರ ಕಟ್ಟಿನಿಂದ ಮತ್ತೊಂದು ಕಾಗದವನ್ನು ತೆಗೆದಳು. ಅದರಲ್ಲಿ ಮೊದಲೇ ಸಿದ್ಧಗೊಳಿಸಲ್ಪಟ್ಟಿದ್ದ ಹಸ್ತರೇಖಾಚಿತ್ರವೊಂದಿತ್ತು. ಆ ಚಿತ್ರವನ್ನೂ, ಚಕ್ರವರ್ತಿಯ ಹಸ್ತವನ್ನೂ ಹೋಲಿಸಿ ನೋಡಿದಳು. ರೇಖೆಗಳಲ್ಲಿ ಸ್ವಲ್ಪವಾದರೂ ವ್ಯತ್ಯಾಸವು ತೋರಿಬರಲಿಲ್ಲ. ಅವಳ ತುಟಿಗಳು ಮುಗುಳ್ನಗೆಯನ್ನು ಬೀರಿದುವು. ಆನಂದೋಲ್ಲಾಸದಿಂದ ನಯನಗಳು ವಿಕಾಸಗೊಂಡುವು. ಅವಳು ಸಂತೋಷದಿಂದುಬ್ಬಿದ ಕಂಠದಿಂದ "ಅಮ್ಮಾ" ಎಂದು ಕರೆದಳು. ಸ್ವಲ್ಪ ಹೊತ್ತಿನ ತರುವಾಯ ಪುಣ್ಯಚರಿತೆಯಾದೋರ್ವ ವೃದ್ಧೆಯು ಈಚೆಗೆ ಬಂದಳು. ಜಗುಲಿಯ ಮೇಲೆ ಕುಳಿತಿದ್ದ ತೇಜೋಮೂರ್ತಿಯನ್ನು ಕಂಡು ಪ್ರೀತಿಯಿಂದ ಆಶೀರ್ವದಿಸಿದಳು. ಅನಂತರ ಮಗಳನ್ನು ಕುರಿತು "ಏನಮ್ಮ" ಎಂದು ಕೇಳಿದಳು. ಕುಮಾರಿಯು ಎದ್ದು ತಾಯಿಯ ಸಮೀಪಕ್ಕೆ ಹೋಗಿ ಸಣ್ಣ ದನಿಯಲ್ಲಿ ಹೇಳತೊಡಗಿದಳು. "ಯಾರ ನಾಮವನ್ನು ತಂದೆಯವರು ಹೆಚ್ಚಿನ ಉತ್ಸಾಹದಿಂದ ನಮ್ಮೆದಿರಿನಲ್ಲಿ ಉಚ್ಚರಿಸುತ್ತಿದ್ದರೋ! ಯಾರನ್ನು ನಿರೀಕ್ಷಿಸುತ್ತ ಅವರು ಸ್ವರ್ಗಾರೋಹಣಗೈದರೋ! ಆ ಭಾಗ್ಯಪುರುಷರನ್ನು ಪರಮಾತ್ಮನು ಈದಿನ

ನನಗೆ ಅನುಗ್ರಹಿಸಿದನು. ತಂದೆಯವರು ಸೂಚಿಸಿದ್ದ ಲಕ್ಷಣಗಳೆಲ್ಲವೂ ಈ ಮಹಾನುಭಾವರಲ್ಲಿವೆ. ತಂದೆಯವರು ಭದ್ರಗೊಳಿಸಲ್ಪಟ್ಟಿದ್ದ ಲಕೋಟೆಯೊಂದನ್ನು ನನಗೆ ಕೊಡುತ್ತಾ 'ನಾನು ತಿಳಿಸಿರುವ ಪುಣ್ಯಪುರುಷರು ನಿಶ್ಚಯವಾಗಿಯೂ ಒಂದು ದಿನ ಇಲ್ಲಿಗೆ ಬರುವರು. ಆದರೆ ಅವರ ಸಂದರ್ಶನ ಭಾಗ್ಯವು ನನ್ನ ಅದೃಷ್ಟದಲ್ಲಿ ಬರೆದಿಲ್ಲ. ಅವರು ಇಲ್ಲಿಗೆ ಬಂದೊಡನೆಯೇ, ನಾನು ಸೂಚಿಸಿರುವ ಲಕ್ಷಣಗಳೆಲ್ಲವೂ ಅವರಲ್ಲಿ ಗೋಚರಿಸಿದೊಡನೆಯೇ ಈ ಪತ್ರವನ್ನು ಅವರಿಗೆ ಕೊಡಬೇಕು. ಮತ್ತು ಶ್ರದ್ಧಾಭಕ್ತಿಗಳಿಂದ ಅವರ ಆತಿಥ್ಯ ಸೇವೆಗೈಯಬೇಕು. ಅವರು ನಿಮ್ಮ ಸಂರಕ್ಷಣಾಭಾರವನ್ನು ನಿರ್ವಹಿಸುವರು ಎಂದಿದ್ದರು' ಎಂದಳು." ಜಹಾಂಗೀರನು ಕುಮಾರಿಯ ವಚನಗಳನ್ನು ಕೇಳಿ ತುಂಬಾ ಆಶ್ಚರಿಗೊಂಡನು. "ಇದೇನು ಮಾಂತ್ರಿಕರ ಆವಾಸಸ್ಥಾನವೋ!" ಎಂದು ಸಂದೇಹವಡಲಾರಂಭಿಸಿದನು.

ತಾಯಿಯು ಮಗಳ ಮಾತುಗಳನ್ನು ಕೇಳಿದ ತರುವಾಯ ಜಹಾಂಗೀರನ ಕಡೆಗೆ ತಿರುಗಿ "ಪಥಿಕರೇ! ತಾವು ಯಾರು? ಯಾವ ದೇಶೀಯರು? ಇಲ್ಲಿಗೆ ಹೇಗೆ ಬಂದಿರಿ?" ಎಂದು ಪ್ರಶ್ನಿಸಿದಳು. ವೃದ್ಧೆಯ ಪ್ರಶ್ನೆಗಳನ್ನು ಕೇಳಿ ಜಹಾಂಗೀರನು ಮನದಲ್ಲೇನು ಯೋಚಿಸಿಕೊಂಡನೋ! ನೈಜವಾರ್ತೆಯನ್ನರುಹಲು ಆದೇಕೆ ಹಿಂದೆಗೆದನೋ! ಭಗವಂತನೇ ಬಲ್ಲ. ಆತನು ವೃದ್ಧೆಯ ಪ್ರಶ್ನೆಗೆ ಉತ್ತರವಿತ್ತನು. "ಅಮ್ಮಾ, ನಾನು ಉತ್ತರ ಹಿಂದೂಸ್ಥಾನದವನು. ಜಹಾಂಗೀರ್ ಸಾರ್ವಭೌಮರ ಸೇನೆಯಲ್ಲಿ ಓರ್ವ ಸಾಮಾನ್ಯ ಸವಾರನು. ಸಾರ್ವಭೌಮರು ಈದಿನ ಬೇಟೆಗೆ ಬಂದಿದ್ದಾರೆ. ನಾನೂ ಅವರೊಂದಿಗೇ ಇದ್ದವನು ಅಕಸ್ಮಾತ್ ದಾರಿತಪ್ಪಿ ಇಲ್ಲಿಗೆ ಬಂದೆನು. ಈ ನಿಮ್ಮ ಉಪಕಾರಶೀಲ ಪುತ್ರಿಯ ಕೃಪೆಯಿಂದ ನನ್ನ ಹಸಿವು ಬಾಯಾರಿಕೆಗಳು ನೀಗಿದುವು. ನಾನು ಈಕೆಯ ಮಹೋಪಕಾರವನ್ನು ಎಂದೆಂದಿಗೂ ಮರೆಯಲಾರೆನು." ಜಹಾಂಗೀರನ ವಾಕ್ಯಗಳಿಂದ ಕುಮಾರಿಗೆ ನಗುಬಂದಿತು. ಅವಳು ಗಟ್ಟಿಯಾಗಿ ನಗುತ್ತ "ಪಥಿಕರೇ! ದಯವಿಟ್ಟು ಕ್ಷಮಿಸಿರಿ. ಸತ್ಯಾಂಶವನ್ನೇಕೆ ಮರೆಮಾಚುತ್ತಿರುವಿರಿ? ನನಗೆ ಪೂರ್ಣ ಭರವಸೆಯಿದೆ. ನನ್ನ ಪೂಜ್ಯ ತಂದೆಯ ಭವಿಷ್ಯದ್ವಚನವು ಎಂದೆಂದಿಗೂ ಮಿಥ್ಯವಾಗಲಾರದು. ಅವರು ಯಾವ ಯಾವ ಲಕ್ಷಣಗಳನ್ನು ಸೂಚಿಸಿಹೋಗಿದ್ದರೋ, ಆ ಎಲ್ಲಾ ಲಕ್ಷಣಗಳನ್ನೂ ನಾನು

ತಮ್ಮಲ್ಲಿ ಕಾಣುತ್ತಿದ್ದೇನೆ. ತಮ್ಮಾಗಮನದ ಕಾರಣಗಳನ್ನೂ, ತಾವು ಬರುವ ರೀತಿಯನ್ನೂ, ತಮ್ಮ ಮುಖಚರ್ಯೆಯನ್ನೂ ಕೂಡ ನನ್ನ ಪಿತೃದೇವರು ತಿಳಿಸಿದ್ದರು. ಅದಕ್ಕನುಸಾರವಾಗಿಯೇ ತಾವು ಬಂದಿರುವಿರಿ. ಇಷ್ಟಲ್ಲದೆ ನನ್ನ ವಿದ್ಯೆಯೂ ಕೂಡ ನನಗೆ ನಿಜಾಂಶವನ್ನು ತಿಳಿಸುತ್ತಿದೆ. ತಮ್ಮ ಹಸ್ತದಲ್ಲಿ ನಾನು ಯಾವ ರೇಖಾವಳಿಯನ್ನು ಕಂಡಿರುವೆನೋ, ಅಂತಹ ರೇಖೆಗಳನ್ನು ಸಾಮಾನ್ಯ ಮಾನವರ ಹಸ್ತಗಳಲ್ಲಿ ಕಾಣಲಾಗುವುದಿಲ್ಲ. ತಮ್ಮ ಹಸ್ತದಲ್ಲಿರುವ ರೇಖೆಗಳೇ ತಾವು ರಾಜಾಧಿರಾಜರೆಂದು ತಿಳಿಸುತ್ತಿವೆ" ಎಂದಳು. ಜಹಾಂಗೀರನು ನಕ್ಕು ಮನದಲ್ಲಿಯೇ ಕುಮಾರಿಯ ವಿದ್ಯಾಪ್ರಭಾವವನ್ನು ಕೊಂಡಾಡಿದನು. ಆದರೂ ಸ್ವೈಜವಾರ್ತೆಯನ್ನು ತಿಳಿಸಲಿಚ್ಛಿಸದೆ "ಮಗಳೇ! ನನಗರಿವಾಗಲೊಲ್ಲದು, ನಿನಗೇಕೆ ನನ್ನ ಸತ್ಯವಚನದ ಮೇಲೆ ನಂಬಿಗೆಯಿಲ್ಲ? ನಾನಂತೂ ನಿಜವಾದ ವಿಚಾರವನ್ನೇ ತಿಳಿಸಿದ್ದೇನೆ. ನನ್ನ ವಿಷಯವಂತಿರಲಿ, ನಿಮ್ಮ ವಿಚಾರವೇನು? ನೀವು ಯಾರು? ಇಂಥಾ ನಿರ್ಜನವಾದ ಭಯಾನಕ ಅರಣ್ಯದಲ್ಲಿ ಮನೆಯನ್ನು ಕಟ್ಟಿಕೊಂಡಿರಲು ಕಾರಣವೇನು? ಅಬಲಾಸ್ತ್ರೀಯರೀರ್ವರೇ ಈ ವಿಶಾಲವಾದ ಮನೆಯಲ್ಲಿ ವಾಸಿಸುವ ಉದ್ದೇಶವೇನು? ಆಹಾರವನ್ನು ಹೇಗೆ ಆರ್ಜಿಸಿಕೊಳ್ಳುತ್ತಿರುವಿರಿ? ಜೀವನವನ್ನು ಹೇಗೆ ನಾಗಿಸುತ್ತಿರುವಿರಿ?" ಎಂದು ಕೇಳಿದನು. ಅಭಿಮಾನಿಯ ಸಹಾನುಭೂತಿಪರ ಹಿತವಚನಗಳನ್ನು ಕೇಳುತಲೇ ತಾಯಿ ಮಗಳೀರ್ವರಿಗೂ ದುಃಖವು ಉಕ್ಕಿಬಂದಿತು. ಕಂಗಳಿಂದ ಅಶ್ರುಜಲಬಿಂದುಗಳು ತೊಟ್ಟಿಕ್ಕಲಾರಂಭಿಸಿದುವು. ಕುಮಾರಿಯ ಕಂಠವು ರೋಧವಾಯಿತು. ಅವಳು ಅವಾಕ್ಕಾಗಿ ಸುಮ್ಮನೆ ಕುಳಿತುಬಿಟ್ಟಳು. ಆವರೆ ತಾಯಿಯು ದುಃಖವನ್ನು ಸಂವರಣಿಸಿಕೊಂಡು "ಮಗನೇ! ನಾವು ನತದೃಷ್ಟರು. ಲೋಕಪೀಡಿತರು. ಈ ಜಗತ್ತಿನಲ್ಲಿ ನಮ್ಮವರೆನ್ನುವವರು ಯಾರೂ ಇಲ್ಲ. ದುಃಖ, ಸಂಕಟಗಳಲ್ಲಿ ಆಶ್ವಾಸನವೀಯುವವರಿಲ್ಲ. ಮೇಲಾಗಿ ನಮ್ಮ ಬಾಳಿನಲ್ಲಿ ಮಹತ್ತರವಾದ ಗುರಿಯೂ ಇಲ್ಲ. ಇಂಥಾ ನಿರ್ಗತಿಕ, ನಿರಾಶ್ರಿತರಾದ ನಾವು ದೀನಶರಣ್ಯನಾದ ಆ ಪರಮೇಶ್ವರನೊಬ್ಬನ ಮೇಲೆಯೇ ಪೂರ್ಣ ಭರವಸೆಯನ್ನಿಟ್ಟಿರುವೆವು. ಆತನ ಕೃಪಾನುಗ್ರಹದಿಂದಲೇ ನಾವು ಉದರಪೋಷಣೆಯನ್ನು ಕಾಣುತ್ತಿರುವೆವು. ಆತನ ದಿವ್ಯನಾಮಸಂಕೀರ್ತನೆಯಲ್ಲಿಯೇ ಕಾಲಯಾಪನೆಗೈಯ್ಯುತ್ತಿರುವೆವು. ಆ ಜಗತ್ಕರ್ತಾರನಾದ ಪರಮಾತ್ಮನೊಬ್ಬನೇ

ನಮ್ಮ ಆಧಾರಿಯೂ, ರಕ್ಷಕನೂ ಆಗಿರುವನು. ಮಗನೇ! ನಾವು ಜನ್ಮತಃ ಬಿಜಾಪುರದವರಾಗಿದ್ದೇವೆ. ಉಚ್ಚ ಬ್ರಾಹ್ಮಣ ಸದ್ವಂಶವೊಂದರ ಸೇನವಾಗಿ ದ್ದೇವೆ. ನನ್ನ ಪತಿದೇವರಾದ ಪಂಡಿತ ಜ್ಞಾನಿವ್ಯಾನರು ಪ್ರೌಢವಿದ್ಯಾನಂಪ ನ್ನರೂ, ಜ್ಯೋತಿಶ್ಶಾಸ್ತ್ರದಲ್ಲಿ ಮಹಾ ಪಂಡಿತೋತ್ತಮರೂ ಆಗಿದ್ದರು. ಬಿಜಾ ಪುರದ ನವಾಬನ ಆಸ್ಥಾನದಲ್ಲಿ ಎಲ್ಲರಿಂದಲೂ ಗೌರವಿಸಲ್ಪಡುತ್ತಿದ್ದರು. ಅಧಿಕಾರ ವರ್ಗದಲ್ಲಿ ಅವರ ಸ್ಥಾನವು ಉನ್ನತವಾಗಿತ್ತು. ಒಮ್ಮೆ ಬಿಜಾಪುರದ ಪ್ರಧಾ ನಿಗೂ, ನನ್ನ ಸ್ವಾಮಿಗೂ ಬಿರುಸಾದ ವಾಗ್ವಾದವು ನಡೆದುಹೋಯಿತು. ನನ್ನ ಪೂಜ್ಯ ಸ್ವಾಮಿ ಸ್ವಾಭಿಮಾನವುಳ್ಳವರು. ಅನ್ಯರ ನ್ಯಾಯವಿರುದ್ಧ ವಚನಗಳನ್ನು ಎಂದಿಗೂ ಸೈರಿಸುವವರಲ್ಲ. ಅವರು ತಮ್ಮ ಉನ್ನತಾಧಿಕಾರ ವನ್ನೂ ಲಕ್ಷಿಸಲಿಲ್ಲ. ಅಧಿಕಾರವನ್ನೂ, ಸಿರಿಸಂಪದಗಳನ್ನೂ ತ್ಯಜಿಸಿ ನಮ್ಮೀ ರ್ವರನ್ನೂ ಕರೆದುಕೊಂಡು ಈ ಕಾಡಿಗೆ ಬಂದರು. ಆಭರಣಗಳನ್ನು ಮಾರಿ ಈ ಮನೆಯನ್ನು ಕಟ್ಟಿಸಿದರು. ಜೊತೆಯಲ್ಲಿ ತಂದಿದ್ದ ಹಣದಿಂದ ಈವರೆಗೂ ಜೀವನವನ್ನು ಸಾಗಿಸುತ್ತಿರುವೆವು. ಕ್ರೋಧ, ದ್ವೇಷ, ಅಸೂಯೆ, ಪರಪೀಡನೆ, ಅಹಂಕಾರಗಳಲ್ಲಿ ವ್ಯಾಪೃತರಾಗಿರುವ ಈ ಪ್ರಾಪಂಚಿಕರ ವಿಷಯದಲ್ಲಿ ನನ್ನ ಸ್ವಾಮಿಗೆ ಜಿಹಾಸೆಯುತ್ಪನ್ನವಾಯಿತು. ಅವರಿಗೆ ಜಗಜ್ಜೀವನದಲ್ಲಿ ತಿರಸ್ಕಾರ ಮನೋಭಾವವುಂಟಾಯಿತು. ಅವರು ಸದಾ ಜಗದೀಶ್ವರನ ಧ್ಯಾನದಲ್ಲಿಯೇ ನಿರತರಾಗಿರುತ್ತಿದ್ದರು. ಕ್ರೂರವಿಧಿಗೆ ನಮ್ಮ ವಿಪನ್ನಾವಸ್ಥೆಯ ಮೇಲೂ ಮರುಕ ವುಂಟಾಗಲಿಲ್ಲ. ನನ್ನ ಪೂಜ್ಯಸ್ವಾಮಿ ಇಹಲೋಕವನ್ನು ತ್ಯಜಿಸಿ ಸ್ವರ್ಗ ಪಥಾನುಗಾಮಿಯಾದರು. ನಾವೀರ್ವರು ಜಗತ್ತಿನ ದುಃಖ ಸಂಕಟಗಳನ್ನು ಸವಿಯುವುದಕ್ಕಾಗಿ ಬದುಕಿಕೊಂಡೆವು.

ನನ್ನ ಪತಿದೇವರು ಜೀವಂತರಾಗಿದ್ದಾಗ ಒಮ್ಮೆ, ನಾವು ಮೂವರೂ ಸರಸಸಲ್ಲಾಪಗಳಲ್ಲಿ ನಿಮಗ್ನರಾಗಿದ್ದೆವು. ಹಠಾತ್ತನೇ ನನ್ನ ಪತಿದೇವರ ಕಣ್ಣು ಗಳಿಂದ ಬಾಷ್ಪಬಿಂದುಗಳು ತೊಟ್ಟಿಕ್ಕಲಾರಂಭಿಸಿದುವು. ಅವರು ಗದ್ಗದಿತ ಸ್ವರದಿಂದ “ಅಯ್ಯೋ! ಭಗವಂತನು ಎಂತಹ ಅನ್ಯಾಯವನ್ನು ಮಾಡಿದನು? ನನ್ನ ವಿದ್ಯೆಯು ನನ್ನೊಂದಿಗೇ ಅಗ್ನಿಗಾಹುತಿಯಾಗುವುದಲ್ಲ! ಭಗವಂತನು ನನಗೆ ಪುತ್ರನನ್ನು ಕರುಣಿಸಿದ್ದಿದ್ದರೆ, ನನ್ನ ವಿದ್ಯೆಯನ್ನೆಲ್ಲಾ ಅವನಿಗೆ ಕಲಿಸು ತ್ತಿದ್ದೆನು” ಎಂದು ರೋದಿಸಿದರು. ಅವರ ವಾಕ್ಯಗಳನ್ನು ಕೇಳಿ ನನಗೂ

ದುಃಖವು ಉಕ್ಕಿಬಂದಿತು. ತಮ್ಮಿದಿರಿನಲ್ಲಿ ಕುಳಿತಿರುವ ಈ ಬಾಲೆಯು ಆಗ ಹತ್ತು ವರ್ಷ ಪ್ರಾಯದವಳಿರಬಹುದು, ಇವಳೂ ಬಿಕ್ಕಿ ಬಿಕ್ಕಿ ಅಳುವುದಕ್ಕಾರಂಭಿಸಿದಳು. ನಾನು ನನ್ನ ಹಸ್ತದಿಂದ ಇವಳ ಶಿರವನ್ನು ನೇವರಿಸುತ್ತ ಸೀರೆಯ ಸೆರಗಿನಿಂದ ಕಂಬನಿಯೊರಸಿ ಸಮಾಧಾನಪಡಿಸಿದೆನು. ಆದರೂ ಇವಳ ದುಃಖವು ಶಮನವಾಗಲಿಲ್ಲ. ಇವಳು ತನ್ನ ತಂದೆಯ ಚರಣಗಳ ಮೇಲೆ ಬಿದ್ದು "ಪಿತೃದೇವಾ! ತಾವು ನನಗೆ ವಿದ್ಯೆಯನ್ನು ಕಲಿಸಿರಿ. ನಾನು ನಿಶ್ಚಯವಾಗಿಯೂ ಕಲಿಯುವೆನು" ಎಂದು ರೋದಿಸುತ್ತ ಬೇಡಲಾರಂಭಿಸಿದಳು. ನನ್ನ ಸ್ವಾಮಿಯು ಮಗಳನ್ನೆತ್ತಿ ಕಂಠಕ್ಕಾಲಿಂಗಿಸಿಕೊಂಡು "ಮಗಳೇ ರೂಪ್ ಕಿಶೋರಿ! ನಾನು ಅಗತ್ಯವಾಗಿಯೂ ನಿನಗೆ ವಿದ್ಯೆಯನ್ನು ಕಲಿಸುವೆನು" ಎಂದರು. ಅಂದಿನಿಂದ ಅವರು ನಿತ್ಯವೂ ಮಗಳಿಗೆ ವಿದ್ಯೆಯನ್ನು ಬೋಧಿಸಲು ಪಕ್ರಮಿಸಿದರು. ಮೂರು ನಾಲ್ಕು ವರ್ಷಗಳಲ್ಲಿಯೇ ಹೆಚ್ಚಿನ ಶ್ರಮದಿಂದ ವಿದ್ಯೆಯನ್ನೆಲ್ಲಾ ಕಲಿಸಿದರು. ಮಗಳ ಬುದ್ಧಿಶಕ್ತಿಯನ್ನೂ, ವಿದ್ಯಾವೈಖರಿಯನ್ನೂ ಕಂಡು ನನ್ನ ಪತಿದೇವರು ಬಹುವಾಗಿ ಹಿಗ್ಗುತ್ತಿದ್ದರು. "ಈಗ ನನಗೆ ಸಾಯುವ ದುಃಖವಿಲ್ಲ" ಎಂದು ಹೇಳುತ್ತಿದ್ದರು. ಒಂದು ದಿನ ಅವರಿಗೆ ಮಗಳ ವಿದ್ಯಾನೈಪುಣ್ಯವನ್ನು ಪರೀಕ್ಷಿಸಬೇಕೆಂಬ ಬಯಕೆಯುಂಟಾಯಿತು. ಅವರು ಮಗಳನ್ನು ಕುರಿತು "ರೂಪ್‌ಕಿಶೋರಿ! ನಾವು ವಾಸಿಸುತ್ತಿರುವ ಈ ಗೃಹದ ಲಗ್ನಚಕ್ರವನ್ನು ರಚಿಸು. ನಾನೂ ರಚಿಸುತ್ತೇನೆ. ನೋಡೋಣ, ನೀನು ಜ್ಯೋತಿಶ್ಶಾಸ್ತ್ರದಲ್ಲಿ ಎಷ್ಟರಮಟ್ಟಿನ ಪ್ರವೀಣತೆಯನ್ನು ಪಡೆದಿರುವೆ?" ಎಂದರು. ತಂದೆಯ ಅನುಜ್ಞೆಯನ್ನು ಕೇಳುತಲೇ ರೂಪ್‌ಕಿಶೋರಿಯು ನಗುತ್ತ ಸ್ವಲ್ಪ ಹೊತ್ತಿನಲ್ಲಿಯೇ ಲಗ್ನಚಕ್ರವನ್ನು ರಚಿಸಿದಳು. ತಂದೆಯು ತಾನು ರಚಿಸಿದ್ದ ಲಗ್ನಚಕ್ರದೊಂದಿಗೆ ಹೋಲಿಸಿ ನೋಡಿದಾಗ ಯಾವ ಲೋಪವೂ ತೋರಲಿಲ್ಲ. ಆಗ ನನ್ನ ಪತಿದೇವರಿಗುಂಟಾದ ಆನಂದಕ್ಕೆ ಪಾರವೇ ಇರಲಿಲ್ಲ."

ಜಹಾಂಗೀರನು ವೃದ್ಧೆಯ ದುಃಖಭರಿತ ಕಥಾನಕವನ್ನು ಕೇಳಿ ಬಹುವಾಗಿ ಮರುಗಿದನು. ಅನಂತರ ವೃದ್ಧೆಯನ್ನು ಕುರಿತು "ಅಮ್ಮಾ! ಈ ಗೃಹದ ಲಗ್ನಚಕ್ರವನ್ನು ರಚಿಸಿದ್ದಾರಲ್ಲಾ, ಅದೇನು ಫಲವನ್ನು ಸೂಚಿಸುತ್ತದೆ?" ಎಂದು ಕೇಳಿದನು. ಅದಕ್ಕೆ ವೃದ್ಧೆಯು "ಲಗ್ನಚಕ್ರದ ಫಲವೇನೆಂದು ನಾನು ರೂಪ್‌ಕಿಶೋರಿಯನ್ನು ಪಶ್ನಿಸಿದಾಗ, ಅವಳು "ಅಮ್ಮಾ! ಒಂದು ದಿನ

ಈ ಸ್ಥಳಕ್ಕೆ ಭವ್ಯತೇಜಸ್ಸುಳ್ಳ ಮಹಾಪುರುಷನೋರ್ವನು ಅಶ್ವಾರೂಢನಾಗಿ ಆಗಮಿಸುವನು. ಆತನು ಪದವಿಯಲ್ಲಿ ರಾಜಾಧಿರಾಜನಾಗಿರುವನು. ಆತನ ಬೆರಳಿನಲ್ಲಿ ಅಮೂಲ್ಯವಾದ ಪದ್ಮರಾಗದ ಉಂಗುರವಿರುವುದು. ಆತನೇ ನಮ್ಮ ಆಧಾರಿಯೂ, ರಕ್ಷಕನೂ ಆಗುವನು" ಎಂದು ಸೂಚಿಸಿದ್ದಳು. ಇದಲ್ಲದೆ ರೂಪ್‌ಕಿಶೋರಿಯು ತಮ್ಮ ಹಸ್ತರೇಖೆಯನ್ನು ನೋಡಿದೊಡನೆಯೇ ತಾವು ಸಾರ್ವಭೌಮರೆಂದು ಸಮರ್ಥಿಸಿರುವಳು. ಆದರೆ ತಾವು ಮಾತ್ರ ಓರ್ವ ಸಾಮಾನ್ಯ ಸವಾರನೆಂದು ಪ್ರತಿವಾದಿಸುತ್ತಿರುವಿರಿ. ನನಗಾದರೋ ತಮ್ಮ ಮಾತಿನ ಮೇಲೆ ತಿಲಾಂಶವಾದರೂ ನಂಬಿಗೆಯಿಲ್ಲ. ಏಕೆಂದರೆ ತಮ್ಮ ಚಂದ್ರ ವದನದಿಂದೆದ್ದು ಕಾಣುತ್ತಿರುವ ದಿವ್ಯಕಾಂತಿಯನ್ನೂ, ಗಾಂಭೀರ್ಯವನ್ನೂ ನೋಡಿದೊಡನೆಯೇ ತಮ್ಮೆದಿರಿನಲ್ಲಿ ಶಿರವನ್ನು ಬಾಗಿಸಬೇಕೆಂದು ಮನವು ಇಚ್ಛಿಸುತ್ತದೆ. ನಾನು ತಮಗೆ ಪರಮಾತ್ಮನ ಆಣೆಯಿಡುತ್ತೇನೆ. ತಾವು ಯಾರೆಂಬುದನ್ನು ತಿಳಿಸಿರಿ. ದಯವಿಟ್ಟು ತಮ್ಮ ಪರಿಚಯಲಾಭವನ್ನನು ಗ್ರಹಿಸಿರಿ. ನಾವೂ ನಮ್ಮ ಗತಿಕನ ನಿರೀಕ್ಷಣೆಯಲ್ಲಿಯೇ ಕಾಲಯಾಪನೆ ಗೈಯುತ್ತಿರುವೆವು. ರೂಪ್‌ಕಿಶೋರಿಯು ಈಗ ಪ್ರಾಯಸಮರ್ಥೆಯಾಗುತ್ತಿರುವಳು. ನಾನು ಅವಳ ವಿವಾಹಕ್ಕಾಗಿ ಯಾವ ಸಿದ್ಧತೆಯನ್ನೂ ನಡೆಸಲಿಲ್ಲ. ನನಗಾದರೋ ತಿಲಾರ್ಧವಾದರೂ ನನ್ನ ವಿಷಯಕವಾದ ಚಿಂತನೆಯಿಲ್ಲ. ಆದರೆ ರೂಪ್‌ಕಿಶೋರಿಯ ವಿವಾಹದ ಚಿಂತನೆಯು ಅಹರ್ನಿಶಿಯೂ ನನ್ನನ್ನು ಬಿಡದೆ ಬಾಧಿಸುತ್ತಿದೆ" ಎಂದಳು.

ವೃದ್ಧೆಯ ಕರುಣಾಜನಕ ವಾಕ್ಯಗಳು ಜಹಾಂಗೀರನ ಮನದ ಮೇಲೆ ಮಹತ್ಪರಿಣಾಮವನ್ನುಂಟುಮಾಡಿದುವು. ಆದರೂ ಅರಿವಾಗಲೊಲ್ಲದು. ಆತನು ತನ್ನ ನಿಜಸ್ಥಿತಿಯನ್ನರುಹಲು ಅದೇಕೆ ಹಿಂದೆಗೆದನೋ! ಆತನು ಆ ವಿಷಯವನ್ನು ಬದಿಗೊತ್ತಿ "ಅಮ್ಮಾ! ನಾನು ಯಾರೇ ಆಗಿರಬಹುದು, ನನ್ನ ಪರಿಚಯಕ್ಕಾಗಿ ನೀವೇಕೆ ಉತ್ಸುಕರಾಗಿರುವಿರಿ? ನಿಮಗೆ ಅದರಿಂದೇನು ಪ್ರಯೋಜನ? ನಾನು ಯಾರೇ ಆಗಿದ್ದರೂ ಇಂದಿನಿಂದ ರೂಪ್‌ಕಿಶೋರಿಯನ್ನು ನನ್ನ ಧರ್ಮಪುತ್ರಿಯೆಂದು ತಿಳಿದಿರುತ್ತೇನೆ. ನಿಮ್ಮನ್ನು ನನ್ನ ಧರ್ಮಮಾತೆಯೆಂದು ಭಾವಿಸುತ್ತೇನೆ. ಭಗವಂತನ ಮೇಲೆ ಭರವಸೆಯಿಡಿ. ಆತನು ಪ್ರತಿಯೊಬ್ಬರ ಪ್ರಾರ್ಥನೆಯನ್ನೂ ಲಾಲಿಸುವನು ಮತ್ತು ಸಂರಕ್ಷಿಸು

ವನು" ಎಂದನು. ಅನಂತರ ರೂಪ್‌ಕಿಶೋರಿಯ ಕಡೆಗೆ ತಿರುಗಿ "ಓಹೋ! ನನ್ನ ಮಗಳಿಗೆ ಈ ಉಂಗುರದ ಮೇಲೆ ಪೂರ್ಣ ಅಭಿಮಾನವಿರುವಂತೆ ತೋರುತ್ತಿದೆ. ನಾನು ಆತ್ಮಸಂತೋಷದಿಂದ ಈ ಉಂಗುರವನ್ನು ನನ್ನ ಮಗಳಿಗೆ ಕರುಣಿಸುತ್ತೇನೆ" ಎಂದವನೇ ಉಂಗುರವನ್ನು ತೆಗೆದು ರೂಪ್‌ಕಿಶೋರಿಯ ಬೆರಳಿಗೆ ತೊಡಿಸಿದನು. ತರುವಾಯ "ಮ ಗ ಳೇ ರೂ ಪ್ ಕಿ ಶೋ ರಿ! ಈ ಉಂಗುರವು ನಿನಗೆ ಶುಭವನ್ನುಂಟುಮಾಡಲಿ" ಎಂದು ಹರಸಿದನು. ವೃದ್ಧೆಯು ಈ ದೃಶ್ಯವನ್ನು ನೋಡಿ ಸ್ತಬ್ಧಳಾದಳು. ಸ್ವಲ್ಪ ಹೊತ್ತಿನ ತರುವಾಯ ಜಹಾಂಗೀರನನ್ನು ನೋಡಿ "ಪಥಿಕರೇ! ಇಂಥಾ ಉಂಗುರವನ್ನು ಸಾಮಾನ್ಯ ಸವಾರನು ಹೇಗೆ ಸಂಪಾದಿಸಬಲ್ಲನು? ಹಾಗೆ ಸಂಪಾದಿಸಿದರೂ ಆತ್ಮಸಂತೋಷದಿಂದ ಇತರರಿಗೆ ಹೇಗೆ ಕೊಡಬಲ್ಲನು? ಈ ವಿಶಾಲವಾದ ಹೃದಯ! ಈ ಔದಾರ್ಯ! ಮಹಾರಾಜರದು. ಸಾಮಾನ್ಯ ಮಾನವರ ಹೃದಯದಲ್ಲಿ ಇಂಥಾ ಔದಾರ್ಯವು ಉತ್ಪನ್ನವಾಗಲಾರದು" ಎಂದಳು. ಅನಂತರ ತಾಯಿಯು ಮಗಳ ಕಡೆಗೆ ತಿರುಗಿ "ನಿನ್ನ ಧರ್ಮಪಿತನಿಗೆ ಪ್ರಣಾಮ ಮಾಡು" ಎಂದು ಸನ್ನೆಯಿಂದ ಸೂಚಿಸಿದಳು. ಅಂತೆಯೇ ರೂಪ್ ಕಿಶೋರಿಯು ಜಹಾಂಗೀರನಿಗೆ ಪ್ರಣಾಮಗೈಯ್ಯಲು ಬಾಗಿದಳು. ಒಡನೆಯೇ ಜಹಾಂಗೀರನು ಅವಳನ್ನು ಮೇಲಕ್ಕೆತ್ತಿ ಪ್ರೀತ್ಯಾದರಗಳಿಂದ ಮೈದಡವುತ್ತ ಅವಳ ಶಿರಸ್ಸಿನ ಮೇಲೆ ತನ್ನ ಅಭಯ ಹಸ್ತವನ್ನಿಟ್ಟನು. ಇಷ್ಟೆಲ್ಲವೂ ಜರಗಿಹೋಯಿತಾದರೂ ಆ ತಾಯಿ ಮಗಳಿಗೆ ಈ ಪ್ರಯಾಣಿಕನು ಯಾರಾಗಿರಬಹುದು! ಎಂಬ ಸಂದೇಹವು ಮಾತ್ರ ನಿವಾರಣೆಯಾಗಲೇ ಇಲ್ಲ. ಈ ವೇಳೆಗೆ ಸರಿಯಾಗಿ ಅನೇಕ ಮಂದಿ ಸವಾರರು ಇವರಿದ್ದ ಕಡೆಗೆ ಬರಲಾರಂಭಿಸಿದರು. ಸಮೀಪಕ್ಕೆ ಬಂದವರೇ ಜಹಾಂಗೀರನನ್ನು ಕಂಡು ಕುದುರೆಗಳಿಂದಿಳಿದರು. ತಕ್ಷಣವೇ ಸಾಲಾಗಿ ನಿಂತು ಸೈನಿಕ ಶಿಸ್ತಿನ ರೀತ್ಯಾ ಜಹಾಂಗೀರನನ್ನು ವಂದಿಸಿದರು. ಏಕ ಕಾಲದಲ್ಲಿ ಎಲ್ಲರೂ "ಸಾರ್ವಭೌಮರು ಚಿರಾಯುವಾಗಲಿ" ಎಂದು ಹರ್ಷೋದ್ವೇಗದಿಂದ ಘೋಷಿಸಿದರು. ಈ ದೃಶ್ಯವನ್ನು ನೋಡಿ ವೃದ್ಧೆಯು ನಕ್ಕು "ಓಹೋ! ಪಥಿಕರೇ! ಈಗ ನಿಜಾಂಶವನ್ನು ಮರೆಮಾಚಲು ಯಾವ ಉಪಾಯವನ್ನು ಹುಡುಕುವಿರಿ? ಈಗ ತಾವು ನನ್ನ ಸ್ವರ್ಗವಾಸಿ ಪತಿದೇವರ ಭವಿಷ್ಯದ್ವಚನವನ್ನು ಹೇಗೆ ಮಿಥ್ಯಗೊಳಿಸುವಿರಿ? ಈ ಸವಾರರಲ್ಲಿ ಅನೇಕ ಅಧಿಕಾರಿಗಳೂ

ಗೋಚರಿಸುತ್ತಾರೆ. ಏನು ಸೇನಾಧಿಕಾರಿಗಳು ಓರ್ವ ಸಾಮಾನ್ಯ ಸವಾರ ನಿದಿರಿನಲ್ಲಿ ಭಕ್ತಿಯಿಂದ ಶಿರಬಾಗಿ ನಮಸ್ಕರಿಸುವರೇ? 'ಸಾರ್ವಭೌಮರು ಚಿರಾಯುವಾಗಲಿ' ಎಂದು ಘೋಷಿಸುವರೇ?" ಎಂದು ಕೇಳಿದಳು. ಈಗ ಜಹಾಂಗೀರನು ನಿರುಪಾಯನಾದನು. ಅತನು ಉಕ್ಕಿಬರುತ್ತಿದ್ದ ನಗುವನ್ನು ತಡೆಯಲಾರದೆ "ಅಮ್ಮಾ! ದಯವಿಟ್ಟು ಕ್ಷಮಿಸಿರಿ. ನನ್ನಿಂದ ತಪ್ಪಾಯಿತು. ನಾನು ಜಹಾಂಗೀರನು" ಎಂದನು. ಈಗ ರೂಪ್‌ಕಿಶೋರಿಯ ಆನಂದಕ್ಕೆ ಮಿತಿಯೆಲ್ಲಿದೆ? ಅವಳು ತಕ್ಷಣವೇ ಮನೆಯೊಳಗೆ ಹೋಗಿ ಪತ್ರವೊಂದನ್ನು ತಂದು ಜಹಾಂಗೀರನ ಕೈಗೆ ಕೊಡುತ್ತ "ಮಹಾರಾಜ್! ಈ ಪತ್ರವನ್ನು ತೆಗೆದುಕೊಳ್ಳಿ. ನನ್ನ ಪೂಜ್ಯ ತಂದೆಯವರು ಈ ಪತ್ರವನ್ನು ತಮಗರ್ಪಿಸ ಬೇಕೆಂದು ತಿಳಿಸಿದ್ದರು" ಎಂದಳು.

ಜಹಾಂಗೀರನು ಬ್ರಾಹ್ಮಣ ಜ್ಯೋತಿಷಿಯ ಪತ್ರವನ್ನು ಬಿಚ್ಚಿ ಓದಲು ಪಕ್ರಮಿಸಿದನು. ಪತ್ರವು ಪಾರ್ಸಿ ಭಾಷೆಯಲ್ಲಿ ಮನೋಹರವಾದ ಶೈಲಿಯಲ್ಲಿ ಬರೆಯಲ್ಪಟ್ಟಿದ್ದಿತು. "ಮಹಾರಾಜಾಧಿರಾಜ್! ನಾನು ತಮಗೆ ಶುಭವನ್ನು ಕೋರುತ್ತೇನೆ. ತಮಗೆ ದಖನ್ನಿನ ಯುದ್ಧದಲ್ಲಿ ವಿಜಯಪ್ರಾಪ್ತಿಯಾಗುವುದು. ತಾವು ಈ ವಿಜಯಕ್ಕಾಗಿ ಭಗವಂತನಿಗೆ ತಮ್ಮ ಕೃತಜ್ಞತೆಯನ್ನು ಅರ್ಪಿಸಬೇಕು ಮತ್ತು ಈ ನನ್ನ ಪತ್ರವನ್ನು ತಮಗರ್ಪಿಸುವ ಅನಾಥ ಪುತ್ರಿಯ ಸಂರಕ್ಷಣಾ ಭಾರವನ್ನು ತಾವು ನಿರ್ವಹಿಸಬೇಕು. ನನ್ನ ಮನೋವ್ಯಥೆಯೆಂದರೆ, ಪರ ಮಾತ್ಮನು ನನ್ನ ಅದೃಷ್ಟದಲ್ಲಿ ತಮ್ಮ ಸಂದರ್ಶನ ಭಾಗ್ಯವನ್ನು ಪಡೆಯುವ ಸುಯೋಗವನ್ನು ಅನುಗ್ರಹಿಸಲಿಲ್ಲ. ಭಗವಂತನು ತಮಗೆ ದೀರ್ಘಾಯುಷ್ಯ ವನ್ನು ಕರುಣಿಸಲಿ." ಪತ್ರವನ್ನು ಓದಿದ ತರುವಾಯ ಜಹಾಂಗೀರನು ಆ ತಾಯಿ ಮಗಳನ್ನು ಕುರಿತು "ಅಮ್ಮಾ! ಮತ್ತು ಮಗಳೇ ರೂಪ್‌ಕಿಶೋರಿ! ಭಗ ವಂತನ ಮೇಲೆ ಭರವಸೆಯಿಡಿ. ಆತನು ಸರ್ವರಕ್ಷಕನು. ಆತನೇ ನಮ್ಮೆಲ್ಲ ರನ್ನೂ ಸಲಹುವವನು. ಇಷ್ಟು ಹೇಳಿ ಆತನು ಅಲ್ಲಿಂದ ಹೊರಟುಹೋದನು.

ಯಾವ ರೂಪ್‌ಕಿಶೋರಿಯು ಬಿಜಾಪುರದ ಉನ್ನತಾಧಿಕಾರಿಯ ಏಕ ಮಾತ್ರ ಪುತ್ರಿಯೆಂಬ ಕಾರಣದಿಂದ ಮುತ್ತಿನ ತೊಟ್ಟಿಲಲ್ಲಿ ಶಯನಿಸುತ್ತಿ ದ್ದಳೋ, ದಾಸ ದಾಸೀಜನರಿಂದಲೂ, ಸುಖಸಂಪತ್ಸಾಧನಗಳಿಂದಲೂ ಸಜ್ಜಿತ ವಾಗಿದ್ದ ಭವ್ಯಗೃಹದಲ್ಲಿ ಹೆಚ್ಚಿನ ಲಾಲನೆಯಿಂದ ಪೋಷಿಸಲ್ಪಡುತ್ತಿದ್ದಳೋ!

ಅದೇ ರೂಪ್‌ಕಿಶೋರಿಯು ಕಾಲಗತಿಯು ನಿರುದ್ಧವಾಗಲು ಸುಖಸಂಪತ್ತು ಗಳನ್ನೂ, ಆಪ್ತೇಷ್ಟರನ್ನೂ ಕಳೆದುಕೊಂಡು ವನವಾಸಿಯಾದಳು. ಈ ಜಗತ್ತಿನಲ್ಲಿ ತಾಯಿಯೊಬ್ಬಳ ಹೊರತು ಆಕೆಯ ಹಿತಚಿಂತಕರೆನ್ನುವವರು ಯಾರೂ ಉಳಿಯಲಿಲ್ಲ. ಅವಳು ತನ್ನ ಶಿರಸ್ಸಿನ ಮೇಲೆ ನೀಲಾಂಬರವನ್ನೂ, ತನ್ನ ಸುತ್ತಲೂ ವನ್ಯಮೃಗಗಳಿಂದ ತುಂಬಿರುವ ಭಯಾನಕ ಅರಣ್ಯವನ್ನೂ ಕಾಣುತ್ತಿದ್ದಳು. ತನ್ನ ಕಾಲವನ್ನೆಲ್ಲಾ ಭಗವಂತನ ಧ್ಯಾನದಲ್ಲಿಯೂ, ತಾಯಿಯ ಸೇವೆಯಲ್ಲಿಯೂ, ಗೃಹಕೃತ್ಯಗಳಲ್ಲಿಯೂ ಕಳೆಯುತ್ತಿದ್ದಳು. ತಾಯಿಯೂ ಕೂಡ ತನ್ನ ಮುದ್ದುಗುವರಿಯ ಪುಷ್ಪಾನನವನ್ನು ನೋಡಿ ಜೀವಿಸುತ್ತಿದ್ದಳು. ತನ್ನ ಮಗಳನ್ನು ಸದಾ ಸುಖಿಯಾಗಿಡಲು ಶ್ರಮಿಸುತ್ತಿದ್ದಳು. ಉದರ ಪೋಷಣೆಯ ಕೊರತೆಯಿರಲಿಲ್ಲ. ಅದು ಹೇಗೂ ನಡೆದುಕೊಳ್ಳುತ್ತಿತ್ತು. ಆದರೂ ತಾಯಿಯು ಮಗಳ ಭವಿತವ್ಯವನ್ನು ಕುರಿತು ಯೋಚಿಸುವಾಗ ಅವಳ ಹೃದಯವು ಚಿಂತಾನಲದಿಂದ ದಗ್ಧವಾಗುತ್ತಿತ್ತು. ರಾತ್ರಿಯ ಭೀಷಣಾಂಧಕಾರವನ್ನು ಸುಪ್ರಭಾತದ ಸ್ವರ್ಣಕಾಂತಿಯು ವಿಘಾಡಿಸುವುದು. ಬಿಸಿಲ ಬೇಗೆಯಿಂದಲೂ, ಬಡಬಾಗ್ನಿಯಿಂದಲೂ ಬೆಂದು ಬೆಂಗಾಡಾದ ವನಪ್ರದೇಶವು ಗ್ರೀಷ್ಮಋತುವಿನಲ್ಲಿ ಪುನಃ ಹಚ್ಚನೆಯ ಬಣ್ಣವನ್ನು ತಳೆದು ಕಂಗೊಳಿಸುವುದು. ಸಂಪೂರ್ಣವಾಗಿಯೂ ಈ ಪರಿಸ್ಥಿತಿಯನ್ನೇ ಮಾನವನು ತನ್ನ ಜೀವನಾನುಭವಚಕ್ರದ ತಿರುಗಣೆಯಲ್ಲಿಯೂ ಕಾಣುತ್ತ ಹೋಗುವನು. ಒಮ್ಮೆ ಅವನು ಸುಖಸಾಗರದಲ್ಲಿ ತೇಲಿಸಲ್ಪಡುವನು. ಮತ್ತೊಮ್ಮೆ ದುಃಖದ ತಪ್ತಜಲದಲ್ಲಿ ಬೇಯಿಸಲ್ಪಡುವನು. ವಿಧಿವಿಲಾಸಕ್ಕೆ ಸಿಲುಕಿ ಸಂಸ್ಥಾನಾಧೀಶನು ತನ್ನ ಸರ್ವಸ್ವವನ್ನೂ ಕಳೆದುಕೊಂಡು ನಿರ್ಗತಿಕನಾಗಿ ಅರಣ್ಯವನ್ನು ಸೇರುವನು. ಅರಣ್ಯವಾಸಿಯಾಗಿದ್ದವನು ಕಾಲಮಹಿಮೆಯಿಂದ ಸಂಸ್ಥಾನಾಧೀಶನಾಗಿ ಮೆರೆಯುವನು. ತನ್ನ ಇಚ್ಛೆಯು ಏನೇ ಇದ್ದರೂ, ಮಾನವನು ಸುಖದುಃಖಗಳಿಂದ ಹೆಣೆಯಲ್ಪಟ್ಟಿರುವ ಸಂಸಾರದಲ್ಲಿ ತನ್ನ ಜೀವನಪಥವನ್ನು ತುಳಿಯುತ್ತ ಸಾಗಲೇಬೇಕಾಗುವುದು.

ಸಾರ್ವಭೌಮ ಜಹಾಂಗೀರನು ತನ್ನ ರಾಜಧಾನಿಯ ಕಡೆಗೆ ಹೊರಟಾಗ ಅನೇಕ ಸವಾರರನ್ನು ಹಿಂದೆಯೇ ಬಿಟ್ಟುಹೋಗಿದ್ದನು. ಆ ಸವಾರರು ಪಲ್ಲಕ್ಕಿಗಳನ್ನು ಸಿದ್ಧಗೊಳಿಸಿದರು. ಮತ್ತು ತಾಯಿಮಗಳಿಬ್ಬರನ್ನೂ ಪಲ್ಲಕ್ಕಿಗಳಲ್ಲಿ

ಕುಳ್ಳಿರಿಸಿಕೊಂಡು ಸುರಕ್ಷಿತವಾಗಿ ಗೌರವದಿಂದ ದಿಲ್ಲಿಪಟ್ಟಣಕ್ಕೆ ತಲಪಿಸಿದರು. ಪಲ್ಲಕ್ಕಿಗಳು ಜಹಾಂಗೀರನ ಅರಮನೆಯ ಮುಂಭಾಗದಲ್ಲಿ ಬಂದಿಳಿದುವು. ಈ ಮೊದಲೇ ಜಹಾಂಗೀರನು ಅರಮನೆಯಲ್ಲಿ ಪ್ರವೇಶಿಸಿ ಸಮಸ್ತ ವೃತ್ತಾಂತವನ್ನೂ ತನ್ನ ಪ್ರಿಯಪತ್ನಿ ನೂರ್ಜಹಾನಳಿಗೆ ತಿಳಿಸಿದ್ದನು. ಈಗ ಸ್ವತಃ ನೂರ್ಜಹಾನಳೇ ತಾಯಿಮಗಳಿಬ್ಬರನ್ನೂ ಸಂತೋಷದಿಂದ ಸ್ವಾಗತಿಸಲು ಬಂದಳು. ಪ್ರೀತ್ಯಾದರಗಳಿಂದಲೂ, ಗೌರವದಿಂದಲೂ ಅವರನ್ನು ಅರಮನೆಯೊಳಗೆ ಕರೆದುತಂದಳು. ಅವರ ನಿವಾಸಕ್ಕಾಗಿ ಒಂದು ಅರಮನೆಯನ್ನು ಬಿಡಿಸಿಕೊಟ್ಟಳು. ಸೇವೆಗಾಗಿ ದಾಸ ದಾಸೀಜನರನ್ನು ನೇಮಿಸಿದಳು.

ಕೆಲವು ದಿನಗಳು ಕಳೆದನಂತರ ಜಹಾಂಗೀರನು ರೂಪ್‌ಕಿಶೋರಿಯ ತಾಯಿಯ ಇಚ್ಛೆಯಂತೆ ತಾಳೀಕೋಟೆಯ ಓರ್ವ ಸರ್ವಾಂಗಸುಂದರನಾದ ಸದ್ವಂಶೀಯ ಬ್ರಾಹ್ಮಣಕುಮಾರನೊಡನೆ ರೂಪ್ ಕಿಶೋರಿಯ ವಿವಾಹವನ್ನು ನಡೆಸಿದನು. ವಿವಾಹ ಮಹೋತ್ಸವದಲ್ಲಿ ಸ್ವತಃ ಜಹಾಂಗೀರನೂ, ರಾಜಕುಮಾರ ಷಹಜಹಾನನೂ, ಎಲ್ಲಾ ರಾಜಪರಿವಾರದವರೂ, ಆಸ್ಥಾನೀಕರೂ ಭಾಗಿಗಳಾಗಿದ್ದರು. ವಿವಾಹಾನಂತರ ಜಹಾಂಗೀರನು ತಾಲ್‌ಕೋಟ್ (ತಾಜ್ ಕೋಟ್, ಕೋಟ್ರಿ) ಸಂಸ್ಥಾನವನ್ನು ತನ್ನ ಪುತ್ರಿ ರೂಪ್‌ಕಿಶೋರಿಗೆ ಬಳುವಳಿಯಾಗಿ ಕೊಟ್ಟನು. ಈ ವೇಳೆಗೆ ತಾಲ್‌ಕೋಟ್ ಸಂಸ್ಥಾನದ ಉತ್ಪನ್ನವು ಹದಿನೈದು ಲಕ್ಷರೂಪಾಯಿಗಳವರೆಗಿತ್ತು. ರಾಜಕುಮಾರ ಷಹಜಹಾನನು ತನ್ನ ಸಿಂಹಾಸನಾರೋಹಣ ಕಾಲದಲ್ಲಿ ತನ್ನ ಸೋದರಿ ರೂಪ್‌ಕಿಶೋರಿಗೆ ಐದು ಲಕ್ಷ ರೂಪಾಯಿ ಉತ್ಪನ್ನದ ಜಹಗೀರನ್ನು ಕೊಟ್ಟನು. ಸಾರ್ವಭೌಮ ಔರಂಗಜೇಬನು ತನ್ನ ಸಿಂಹಾಸನಾರೋಹಣ ಕಾಲದಲ್ಲಿ ತನ್ನ ಸೋದರತ್ತೆ ರೂಪ್‌ಕಿಶೋರಿಗೆ ಪುನಃ ಐದು ಲಕ್ಷ ರೂಪಾಯಿ ಉತ್ಪನ್ನದ ಜಹಗೀರನ್ನು ಬಳುವಳಿಯಾಗಿ ಕೊಟ್ಟನು. ಮತ್ತು ತಾಲ್‌ಕೋಟ್ ಸಂಸ್ಥಾನದ ಪೊಗದಿಯನ್ನು ತೆಗೆದುಹಾಕಿದನು. ಪರಮಾತ್ಮನ ಪರಕೃಪಾನುಗ್ರಹದಿಂದ ವನವಾಸಿಯಾಗಿದ್ದ ಅನಾಥೆ ರೂಪ್‌ಕಿಶೋರಿ ತಾಲ್‌ಕೋಟ್ ಸಂಸ್ಥಾನದ ರಾಣಿಯಾದಳು. ಮತ್ತು ಸುಪ್ರಸಿದ್ಧ ಮೊಗಲ್ ಮನೆತನದೊಂದಿಗೆ ರಕ್ತಸಂಬಂಧವಿಲ್ಲದೇನೇ ಮಧುರಬಾಂಧವ್ಯವನ್ನು ಪಡೆದುಕೊಂಡಳು. ಅವಳ ದುಃಖಮಯ ಬಾಳಿನ ದುರ್ದಿನಗಳು ಸುಖಜೀವನದ ಸುದಿನಗಳಾಗಿ ಪರಿವರ್ತಿತವಾದುವು.

ತಾಲ್‌ಕೋಟ್ ಸಂಸ್ಥಾನವು ಚಾರಿತ್ರಿಕ ಸ್ಥಳವು. ಸಾರ್ವಭೌಮ ಜಹಾಂಗೀರನು ರೂಪ್‌ಕಿಶೋರಿಗೆ ಕರುಣಿಸಿದ್ದ ಪದ್ಮರಾಗದ ಉಂಗುರವು ಈಗಲೂ ಸಂಸ್ಥಾನದ ಕೋಶಾಗಾರದಲ್ಲಿ ಸುರಕ್ಷಿತವಾಗಿದೆ. ಹೊಸ ರಾಜನು ಸಂಸ್ಥಾನದ ಗದ್ದುಗೆಯನ್ನೇರುವ ಸಂಭ್ರಮದಲ್ಲಿ ಈ ಉಂಗುರವನ್ನು ಆತನ ಬೆರಳಿಗೆ ತೊಡಿಸುವ ಶಾಸ್ತ್ರವು ಹೆಚ್ಚಿನ ಶ್ರದ್ಧಾಭಕ್ತಿಗಳಿಂದ ನಡೆಯುವುದು. ಈ ಶಾಸ್ತ್ರವು ಮುಗಿದೊಡನೆಯೇ ಉಂಗುರವನ್ನು ತೆಗೆದು ಪುನಃ ಸಂಸ್ಥಾನದ ಕೋಶದಲ್ಲಿ ಭದ್ರವಾಗಿರಿಸಲಾಗುವುದು.

# ಗಾನಶಕ್ತಿ

ಬಷೀರ್ ಮೊಹಮ್ಮದ್‌ಖಾನ್ ಬರ್ಹಾನ್‌ಪೂರಿ ಎಂ.ಎ., ಎಲ್‌ಎಲ್.ಬಿ.,

ನಿಶಾದೇವಿಯ ಬೃಹದ್ಗರ್ಭದಲ್ಲಿ ಶೋಭಾರಾಶಿಯು ಸಮಾವೇಶ ಗೊಂಡಿತು. ಭೈರವತಿಮಿರಾವರಣ ಜಗತ್ತಿನ ಮೇಲೆ ಆಚ್ಛನ್ನವಾಯಿತು. ನಭದ ಕಾರಂಜಿಯಿಂದ ತುಷಾರ ಜಲರಾಶಿ ಪುಟಿಯುತ್ತ ತುಂತುರು ತುಂತು ರಾಗಿ ವರ್ಷಿಸಲಾರಂಭಿಸಿತು. ಮಾಘಮಾಸದ ಚಳಿ ಅಸಹನೀಯವಾಗಿತ್ತು. ಅದರ ಅವ್ಯಾಹತ ಧಾಳಿಯಿಂದ ಬೆದರಿದ ಜನರು ರಕ್ಷಣೆಗಾಗಿ ತಮ್ಮ ಹೊದಿಕೆ ಗಳಲ್ಲಡಗಿಕೊಳ್ಳುತ್ತಿದ್ದರು. ಆಗ್ರಾಕೋಟೆಯ ರಾಜಭವನವು ದೀಪಾಲಂಕಾರ ಗಳ ವೈವಿಧ್ಯದಿಂದ ಝುಗಝುಗಿಸುತ್ತಿದ್ದಿತು. ಮಂತ್ರಾಲೋಚನಾಮಂದಿರದಲ್ಲಿ ಮಹಾಬಲೀ ಜಲಾಲುದ್ದೀನ್ ಅಕ್ಬರನು ತನ್ನ ಪರಿವೇಷ್ಟಿತ ಪರಿವಾರದೊಂದಿಗೆ ವಿರಾಜಮಾನನಾಗಿದ್ದನು. ಅಬುಲ್‌ಫಜಲ್, ಫೈಜಿ, ಮಾನ್‌ಸಿಂಗ್, ಖಾನ್ ಖಾನಾ, ಬೀರ್‌ಬಲ್, ತೋಡರ್‌ಮಲ್, ಮುಲ್ಲಾ ಅಬ್ದುಲ್‌ಖಾದರ್, ತಾನ್ ಸೇನ್ ಮೊದಲಾದ ವಿವಿಧ ವಿದ್ಯಾಪರಿಣತರೂ, ಅದ್ಭುತ ಜ್ಞಾನಸಂಪನ್ನರೂ ಆದ ಆಪ್ತ ಅನುಯಾಯಿಗಳೂ, ಇತರ ಉನ್ನತಾಧಿಕಾರಿಗಳೂ ಅಧಿಷ್ಠಿತ ರಾಗಿದ್ದರು. ಸುಖಾಸನಕ್ಕೊರಗಿಕೊಂಡು ಪರಿಮಳಯುಕ್ತ ತಂಬಾಕಿನ ಹೊಗೆ ಯನ್ನೆಳೆಯುತ್ತ ಬಾದಷಹನು "ನಿಶ್ಚಯವನ್ನು ನುಡಿಯುವುದಾದರೆ, ಹಿಂದೂ ಸ್ಥಾನವು ಅಮಿತ ಕುಶಲವಿದ್ಯೆಗಳ ಹಾಗೂ ಲಲಿತಕಲೆಗಳ ಭಾಂಡಾರವಾಗಿದೆ. ಬಂಗಾಳದಿಂದ ಬಂದಿರುವ ಆ ಹಿಂದೂ ಚಿತ್ರಕಾರನು ಎಂತಹ ಸುಂದರ ದೃಶ್ಯ ಗಳನ್ನು ಚಿತ್ರಿಸುತ್ತಾನೆ! ಆತನ ಕರವನ್ನು ಚುಂಬಿಸಿಬಿಡಲೇ? ಎಂದು ಮನವು ಆಶಿಸುತ್ತದೆ" ಎಂದನು.

"ಪ್ರಭುಗಳ ನುಡಿಯು ತಥ್ಯಾಂಶದಿಂದ ಕೂಡಿದೆ. ಆ ಚಿತ್ರಕಾರನು ಅಂತಹ ಉತ್ತೇಜನಕ್ಕೆ ಪಾತ್ರನೇ ಹೌದು." ಅಬುಲ್‌ಫಜಲ್ ವಿನಯದಿಂದುತ್ತರವಿತ್ತನು.

"ಪಕ್ಷಪಾತವನ್ನು ವಿವರ್ಜಿಸಿ ಆ ಚಿತ್ರಗಾರನಿಗೆ ಆತನ ನಿರೀಕ್ಷಣೆಗಿಂತ ಮೀರಿ ಪ್ರೋತ್ಸಾಹನವೀಯಬೇಕೆಂದು ಮನವು ಆಶಿಸುತ್ತಿದೆ. ಇದು ನ್ಯಾಯ ಸಮ್ಮತವಾದುದಲ್ಲವೇ? ಹೇಗೆ ಖಾನ್‌ಖಾನಾ! ನಿಮ್ಮ ಉದ್ದೇಶವೇನು?"

"ಅಗತ್ಯವಾಗಿ ಪ್ರೋತ್ಸಾಹಿಸಲೇಬೇಕು ಪ್ರಭು" ಖಾನ್‌ಖಾನಾ ನಮ್ರತೆಯಿಂದುತ್ತರವಿತ್ತನು.

"ನನ್ನ ಇಚ್ಛೆಯೆಂದರೆ ಹಿಂದೂಸ್ಥಾನದ ಪ್ರತಿಯೊಂದು ಭಾಗದ ಮತ್ತು ಪ್ರತಿಯೊಂದು ಜನಾಂಗದ ವಿದ್ಯಾನಿಪುಣನೂ, ಕಲಾವಿದನೂ ಸಮಾನತೆಯಿಂದ ಪುರಸ್ಕರಿಸಲ್ಪಡಬೇಕು ಹಾಗೂ ಸಮ್ಮಾನಿಸಲ್ಪಡಬೇಕು."

"ಪ್ರಭುಗಳ ಅಭೀಷ್ಟವು ಸಹಸ್ರವೇಳೆ ಸ್ತೋತ್ರಿಸಲ್ಪಡಲು ಅರ್ಹವಾದುದು." ಖಾನ್‌ಖಾನಾ ಅಕ್ಬರನ ನುಡಿಗೆ ಸಮರ್ಥನೆಯಿೀಯುತ್ತ ಹೇಳಿದನು.

"ಏನು ಖಾನ್‌ಖಾನಾ! ನಿಮ್ಮ ಅಭಿಪ್ರಾಯದಲ್ಲಿ ವಿದ್ಯೆಗಳಲ್ಲೆಲ್ಲಾ ಉನ್ನತವಾದ ವಿದ್ಯೆಯೆಂದರೆ ಯಾವುದು ?"

"ನನ್ನಭಿಪ್ರಾಯಾನುಸಾರ ಎಲ್ಲಕ್ಕಿಂತಲೂ ಉನ್ನತವಾದ ವಿದ್ಯೆಯೆಂದರೆ ಸಂಗೀತವು."

"ಸಂಗೀತವೇ ? ಅದು ಹೇಗೆ ?"

"ಹೌದು ಮಹಾಪ್ರಭು! ಗಾನಶಕ್ತಿಯು ಮಾನವವರ್ಗದವರನ್ನೇ ಅಲ್ಲ. ಮೂಗುಜಂತುಗಳನ್ನು ಕೂಡಾ ತನ್ನೆಡೆಗೆ ಆಕರ್ಷಿಸಬಲ್ಲದು."

"ಸಂಗೀತವು ಜಡವಸ್ತುಗಳಲ್ಲಿಯೂ ಚೈತನ್ಯವನ್ನುಂಟುಮಾಡಬಲ್ಲುದು." ಬೀರ್‌ಬಲ್ ಖಾನ್‌ಖಾನನ ನುಡಿಗೆ ಪುಷ್ಟಿಯಿೀಯುತ್ತ ಹೇಳಿದನು.

"ಬೀರ್‌ಬಲ್! ನೀವೇನೆಂದಿರಿ? ಇದು ಸತ್ಯವೇ ?" ಬಾದಷಹನು ಅಚ್ಚರಿಗೊಂಡು ಕೇಳಿದನು.

"ಸೇವಕನು ಸತ್ಯವಚನವನ್ನೇ ನುಡಿದಿರುತ್ತಾನೆ ಮಹಾಪ್ರಭು!" ಬೀರ್‌ಬಲನು ವಿನಯಪೂರ್ವಕವಾಗಿ ಉತ್ತರವಿತ್ತನು.

"ಬೀರ್‌ಬಲ್‌ರವರ ನುಡಿಯಲ್ಲಿ ಸತ್ಯಾಂಶವಿದೆ. ಅವರು ನಿಶ್ಚಯವನ್ನೇ ಹೇಳಿರುತ್ತಾರೆ." ಫೈಜಿಯು ಬೀರ್‌ಬಲನ ವಚನವನ್ನು ಸಮರ್ಥಿಸುತ್ತಾ ಹೇಳಿದನು.

"ಅದು ಹೇಗೆ ?"

"ಸಂಗೀತದ ಪ್ರಭಾವದಿಂದ ನೀಲಾಕಾಶದಲ್ಲಿ ಮೇಘಗಳು ಕಾಣಿಸಿಕೊಂಡು ಜಲವನ್ನು ವರ್ಷಿಸಬಲ್ಲುವು. ಶೈತ್ಯದಿಂದ ಹೆಪ್ಪುಗಟ್ಟಿರುವ ನೀರು ಕರಗಿ ತಪ್ತಜಲವಾಗುವುದು. ನಂದಿರುವ ದೀಪಗಳೂ ಪ್ರಜ್ವಲಿಸುವುವು."

"ಪ್ರಮಾಣಿಸಿ ಅರಿಯದೆ ಇದನ್ನು ನಂಬುವುದಾದರೂ ಹೇಗೆ ?''

"ಸ್ವತಃ ತಾನ್‌ಸೇನರೇ ಇಲ್ಲಿ ಪ್ರತ್ಯಕ್ಷರಾಗಿರುವರಲ್ಲ. ಸರ್ವಸ್ವವನ್ನೂ ಅವರಿಂದಲೇ ಅರಿತುಕೊಳ್ಳಬಹುದಲ್ಲವೇ ?" ಎಂದು ಅಬುಲ್ ಫಜಲನು ಹೇಳಿದನು.

''ಹೌದು, ಇದೇ ಒಳ್ಳೆಯದು. ಏನು ತಾನ್‌ಸೇನ್! ಬೀರ್‌ಬಲ್ ಮತ್ತು ಫೈಜಿಯು ನಿಶ್ಚಯವನ್ನು ಹೇಳುತ್ತಿರುವರೇ ?''

''ನಿಶ್ಚಯವನ್ನು ಹೇಳುತ್ತಿದ್ದಾರೆ ಮಹಾಪ್ರಭು! ದೀಪಕರಾಗವನ್ನು ಹಾಡುವುದರಿಂದ ನಂದಿರುವ ದೀಪಗಳೂ ಪ್ರಜ್ವಲಿಸುತ್ತವೆ.''

"ಜಗತ್ಕರ್ತಾರನು ಸ್ತೋತ್ರಾರ್ಹನು.'' ಬಾದಷಹನು ಅಚ್ಚರಿಗೊಂಡು ಹೇಳಿದನು. ''ತಾನ್‌ಸೇನ್! ಏನು ನೀವು ಆ ದೀಪಕರಾಗವನ್ನು ಹಾಡ ಬಲ್ಲಿರಾ ?"

"ಹಾಡಬಲ್ಲೆನು ಮಹಾಪ್ರಭು! ಆದರೆ........''

''ಆದರೇನು ?''

''ಆದರೆ ಹಾಡಲು ಅಂಜುವೆನು."

''ಅದೇಕೆ ?''

''ದೀಪಕರಾಗವನ್ನು ಹಾಡುವುದರಿಂದ ಅಂತರೇಂದ್ರಿಯಗಳಲ್ಲಿ ಔಷ್ಣ್ಯವು ಅಧಿಕಾಂಶದಲ್ಲಿ ಉತ್ಪನ್ನವಾಗುವುದು. ಅದನ್ನು ನಿವಾರಿಸದಿದ್ದಲ್ಲಿ ಹಾಡಿದವನು ಭಯಂಕರ ವ್ಯಾಧಿಪೀಡನೆಗೀಡಾಗುವನು. ಅನಂತರ ಜೀವನ ಉಳಿವು ದುಸ್ತರ ವಾಗುವುದು.''

"ಇಲ್ಲ, ಇಲ್ಲ. ತಾನ್‌ಸೇನ್! ಹಾಡುವುದರಿಂದ ರೋಗೋತ್ಪನ್ನ ವಾಗುವುದೆಂಬುದು ನಿಮ್ಮ ಕಲ್ಪನೆಯು. ದೀಪಕರಾಗವನ್ನು ಕೇಳಲು ನನ್ನ ಮನವು ಕಾತುರಗೊಳ್ಳುತ್ತಿದೆ. ನಾನು ದೀಪಕರಾಗವನ್ನು ಕೇಳಲೇಬೇಕಾಗಿದೆ." ಬಾದಷಹನ ನುಡಿಯು ಕೊಂಚ ಬಿರುಸಾಗಿಯೇ ಇದ್ದಿತು. ತಾನ್‌ಸೇನನು ನಿರುಪಾಯನಾದನು. ಸಾರ್ವಭೌಮಿಕ ಆಜ್ಞೆಯನ್ನು ಉಲ್ಲಂಘಿಸುವ ಧೈರ್ಯವು ಯಾರಿಗಿರುವುದು ? ಯಾವಸ್ಥಳದಲ್ಲಿ ತಾನ್‌ಸೇನನು ಸರಸ ಸಲ್ಲಾಪಗಳಲ್ಲಿ ಮಗ್ನನಾಗಿದ್ದನೋ, ಅದೇ ಮಂತ್ರಾಲೋಚನಾಮಂದಿರದಲ್ಲಿ, ಅದೇ ಸಭಿಕರಿದಿರಿನಲ್ಲಿ ದೀಪಕರಾಗವನ್ನು ಹಾಡಲು ಸಿದ್ಧನಾಗಬೇಕಾಯಿತು.

ಅತ್ಯಲ್ಪಕಾಲದಲ್ಲಿಯೇ ವಾದ್ಯಗಾರರು ಸಿದ್ಧರಾಗಿ ಬಂದರು. ತಾನ್‌ಸೇನನು ತನ್ನ ತಂಬೂರಿಯನ್ನು ಸರಿಪಡಿಸಿಕೊಂಡನು. ಲಲಿತವಾದ್ಯಗಳ ಮೇಲೆ ಮಧುರನಿಸ್ವನವು ನರ್ತಿಸತೊಡಗಿತು. ಶ್ರಾವಕರ ಹೃದಯಗಳಲ್ಲಿ ನವಸ್ಫೂರ್ತಿಯನ್ನು ಸ್ಫುರಿಸುತ್ತ ಸಂಗೀತವು ಪ್ರಾರಂಭವಾಯಿತು.

ಬಾದಷಹನ ಆಜ್ಞೆಯಿಂದ ದೀಪಗಳೆಲ್ಲವೂ ಆರಿಸಲ್ಪಟ್ಟುವು. ಮಾಘ ಮಾಸದ ಕಾಳರಾತ್ರಿಯಲ್ಲಿ ಆಗ್ರಾಕೋಟೆಯ ರಾಜಭವನದಿಂದ ದಿವ್ಯಗಾನ ಸುಧಾಸ್ರೋತವು ನಾಲ್ದೆಸೆಗಳಿಗೂ ಪ್ರವಹಿಸಲಾರಂಭಿಸಿತು. ತಾನ್‌ಸೇನನು ತನ್ನ ಗಂಧರ್ವ ಶಾರೀರದಿಂದ ಮನಮೋಹಕ ಸ್ವರ್ಗೀಯ ರಾಗವನ್ನು ಹಾಡುತ್ತಿದ್ದನು. ಅವನ ವದನ ತೂಣೀರದಿಂದ ಹೊರಹೊಮ್ಮುತ್ತಿದ್ದ ಗಾನ ಸುಧಾಶರಹತಿಯಿಂದ ಶ್ರೋತೃಗಳು ಉನ್ಮತ್ತರಾಗುತ್ತಿದ್ದರು. ಮಂದರದಿಂದ ಮಧ್ಯಮಸ್ಥಾಯಿಯಲ್ಲಿ ಪ್ರವೇಶಿಸಿ ತನ್ನ ವಿಚಕ್ಷಣತೆಯನ್ನು ಬೀರತೊಡಗಿದನು. ತಾನ್‌ಸೇನನ ಅನುಪಮ ಗಾನಕಲಾಚತುರತೆಯಿಂದ, ಆ ಕರ್ಣ ಮನೋಹರ ಅದ್ಭುತ ಅಮರಗಾನ ಮಾಧುರ್ಯದಿಂದ ಅಕ್ಬರನು ರೋಂಪಿ ಹೋಗುತ್ತಿದ್ದನು. ತಾರಕಸ್ಥಾಯಿಯನ್ನೇರಿ ಹಾಡುತ್ತ ಹಾಡುತ್ತ ಹಠಾತ್ತನೇ ರಾಗವನ್ನು ಮುಕ್ತಾಯಗೊಳಿಸಿದನು. ಭೀಷಣಾಂಧತೆಯನ್ನು ಚೆಲ್ಲುತ್ತಿದ್ದ ರಾಜಭವನವು 'ಭುಕ್' ಎಂಬ ರವದೊಡನೆ ಪ್ರಜ್ವಲಿಸತೊಡಗಿತು.

ತಾನ್‌ಸೇನನು ತಂಬೂರಿಯನ್ನು ತೆಗೆದಿಟ್ಟನು. ಜ್ವಲಿಸುತ್ತಿದ್ದ ದೀಪಗಳ ಬೆಳಕಿನಲ್ಲಿ ದೀಪಕರಾಗದ ಪ್ರಭಾವದಿಂದ ಬಾದಷಹನ ಮತ್ತು ಆಸ್ಥಾನೀಕರ ಮುಖಗಳು ಮಿನುಗುತ್ತಿದ್ದುದನ್ನು ಕಾಣಬಹುದಾಗಿತ್ತು. ತನುಕಂಪಿಪ ಶರತ್ಕಾಲದ ರಾತ್ರಿ. ಆದರೇನು? ಶ್ರಾವಕರ ದೇಹಗಳು ಬೆವರ್ನೀರಿನಿಂದ ತೊಯ್ದುಹೋಗಿದ್ದುವು. ಬಾದಷಹನು ಸಂಪ್ರೀತನಾಗಿ "ಭಲೇ! ತಾನ್‌ಸೇನ್! ನಾನು ನಿಮ್ಮ ಗಾನಕಲಾವಿಚಕ್ಷಣತೆಯಿಂದ ಮುಗ್ಧನಾಗಿರುತ್ತೇನೆ. ನಿಮ್ಮ ಗಾನವಿದ್ಯಾಚತುರತೆಯು ಅಸದೃಶವಾದುದು. ಸ್ತೋತ್ರಾರ್ಹವಾದುದು. ನಿಶ್ಚಯವಾಗಿಯೂ ಈಗ ನಿಮ್ಮ ವಿದ್ಯೆಯು ವೈಭವದ ಔನ್ನತ್ಯಕ್ಕೇರಿರುವುದು. ಈ ನಿಮ್ಮ ಶಕ್ತಿರಾಗದಿದಿರಿನಲ್ಲಿ ಇತರ ರಾಗಗಳ ತುಲನೆಗೈಯ್ಯುವುದು ಮೂರ್ಖತನವು" ಎಂದನು.

ಆದರೆ ತಾನ್‌ಸೇನನು ಬಾದಷಹನ ಪ್ರಶಂಸಾವಾಕ್ಯಗಳನ್ನು ಕೇಳುವ ಸಾಮರ್ಥ್ಯವುಳ್ಳವನಾಗಿರಲಿಲ್ಲ. ಆತನ ಪರಿಸ್ಥಿತಿಯು ಕರುಣಾಜನಕವಾಗಿದ್ದಿತು. ಆತನ ಅಂತರೇಂದ್ರಿಯಗಳಲ್ಲಿ ಅಗ್ನಿಜ್ವಾಲೆಗಳು ಪ್ರಭವಿಸಿ ಸರ್ವಾಂಗವನ್ನೂ ದಗ್ಧಿಸುತ್ತಿವೆಯೋ! ಎಂಬಂತೆ ಯಾತನೆಪಡಲಾರಂಭಿಸಿದನು. ಬೀಸಣಿಗೆಗಳಿಂದ ಗಾಳಿಯು ಹಾಕಲ್ಪಡುತ್ತಿತ್ತು. ಆಸ್ಥಾನ ವೈದ್ಯರು ತಾನ್‌ಸೇನನ ಸೇವೆಯಲ್ಲಿ ನಿರತರಾಗಿದ್ದರು. ಆದರೆ ಯಾವ ರೀತಿಯಲ್ಲಾದರೂ ಆತನ ತನುವಿನಲ್ಲಿ ಶಾಂತಿಯೂ, ಸಮಾಧಾನವೂ ಉತ್ಪನ್ನವಾಗುವುದು ದುಷ್ಕರವಾಗಿತ್ತು. ಬಾದಷಹನು ತಾನ್‌ಸೇನನ ದಾರುಣವೇದನೆಯನ್ನು ನೋಡಿ ತುಂಬಾ ಭೀತನಾದನು. ಈಗ ಆತನಿಗೆ ತಾನ್‌ಸೇನನ ಸತ್ಯವಚನದ ಅರಿವಾಯಿತು. ಅವನು ತಾನ್‌ಸೇನನ ಸಮೀಪದಲ್ಲಿ ಕುಳಿತುಕೊಂಡು ಮೃದುಮಧುರ ವಾಕ್ಯಗಳಿಂದ "ತಾನ್‌ಸೇನ್! ನಿಶ್ಚಯವಾಗಿಯೂ ನನ್ನ ಹಟಮಾರಿತನವು ನಿಮ್ಮನ್ನು ಈ ಗುರುತರವಾದ ದುಸ್ಥಿತಿಗೀಡುಮಾಡಿತು. ನಾನು ನನ್ನ ತಪ್ಪಿಗಾಗಿ ತುಂಬಾ ಅನುತಾಪಪಡುತ್ತೇನೆ. ಈಗ ನಿಮ್ಮನ್ನು ನಿಮ್ಮ ಹಿಂದಣ ಸುಸ್ಥಿತಿಗೆ ರೂಪುಗೊಳಿಸುವ ಮಾರ್ಗವ್ಯಾವುದು ತಿಳಿಸಿ? ನಾನು ನಿಮಗಾಗಿ ನಿಮ್ಮ ಭಾರದ ನವರತ್ನಗಳನ್ನಾದರೂ ಉತ್ಸರ್ಗಗೈಯ್ಯಲು ಸಿದ್ಧನಿದ್ದೇನೆ'' ಎಂದನು.

ತಾನ್‌ಸೇನನು ಬಾದಷಹನ ಸಹಾನುಭೂತಿಪರ ಹಿತವಚನಗಳನ್ನು ಕೇಳುತಲೇ ಹೆಚ್ಚಿನ ಶ್ರಮದಿಂದ ಎದ್ದುನಿಂತನು. ''ಮಹಾಪ್ರಭು! ಜಗತ್ಕರ್ತಾರನ ಸೃಷ್ಟಿಯಲ್ಲಿ ಯಾವ ದಿವ್ಯೌಷಧವೂ ಈ ರೋಗದ ಔಷ್ಣ್ಯವನ್ನು ಶಮನಿಸಲಾರದು. ಮೇಘಮಲಹಾರರಾಗದ ಶ್ರವಣದಿಂದ ದೀಪಕರಾಗದ ದಗ್ಧಶರೀರಿಯು ಗುಣಮುಖನಾಗಬಲ್ಲನು. ಆದ್ದರಿಂದ ತಾವು ನನಗೆ ಪ್ರಯಾಣಕ್ಕಾಗಿ ಅನುಜ್ಞೆಯನ್ನು ಕರುಣಿಸಿರಿ. ನಾನು ಅಲೆಯುತ್ತಲೆಯುತ್ತ ಮಲಹಾರರಾಗದ ಅಭಿಜ್ಞನನ್ನರಸುವೆನು. ನನ್ನ ಸುದೈವದಿಂದ ಆತನು ದೊರೆತು ಅಭೀಷ್ಟವು ಸಿದ್ಧಿಸಿದರೆ, ಪುನಃ ಪ್ರಭುಸೇವಾಕಾಂಕ್ಷೆಯಿಂದ ಹಿಂದಿರುಗುವೆನು. ಇಲ್ಲದಿದ್ದರೆ ಇದೇ ನನ್ನ ಅಂತ್ಯಸೇವೆ" ಎಂದನು.

ಬಾದಷಹನ ನೇತ್ರಗಳು ಅಶ್ರುಜಲದಿಂದ ತುಂಬಿದುವು. ಅವನು ತಾನ್‌ಸೇನನ ಪ್ರಯಾಣಕ್ಕಾಗಿ ಸಕಲ ಸಿದ್ಧತೆಗಳನ್ನೂ ಕಲ್ಪಿಸಿಕೊಟ್ಟನು.

ಸೇವಕ ಸೇವಕಿಯರೂ, ಅಂಗರಕ್ಷಕರೂ ತಾನ್‌ಸೇನನೊಡನೆ ಪ್ರಯಾಣ ಬೆಳೆಸಿದರು.

ಅಹಮದಾಬಾದ್ ನಗರದಲ್ಲಿ, ಸಬರ್ಮತೀ ನದೀ ತೀರದಲ್ಲಿ ಒಂದು ದೊಡ್ಡ ಗೂಡಾರವು ಗೋಚರಿಸುತ್ತಿದೆ. ಅದರ ಸಮೀಪದಲ್ಲಿಯೇ ಒಂದು ಚಪ್ಪರದ ತಳಭಾಗದಲ್ಲಿ ಸುಪ್ಪತ್ತಿಗೆಯ ಮೇಲೆ ವಿಷಣ್ಣವದನನೋರ್ವನು ಪವಡಿಸಿದ್ದಾನೆ. ಸೇವಕ ಸೇವಕಿಯರು ಶುಶ್ರೂಷೆಗಾಗಿ ಸಿದ್ಧರಾಗಿದ್ದಾರೆ. ಕೊಂಚ ದೂರದಲ್ಲಿ ಸಿಪಾಯಿಗಳು ಪಹರೆಯನ್ನು ಕೊಡುತ್ತಿದ್ದಾರೆ. ಸುಪ್ರಭಾತದ ಸ್ವರ್ಣರಾಗಚ್ಛಾಯೆಗಳು ಸಂರಾಗವನ್ನೆರಚುತ್ತ ಪ್ರಭಾಸಿಸುತ್ತಿವೆ. ಹರ್ಷಪ್ರದ ಪ್ರಾತಃಸಮೀರಣವು ಜಗಜ್ಜೀವಿಗಳಲ್ಲಿ ನವಚೈತನ್ಯವನ್ನು ಸ್ಫುರಿಸುತ್ತ ಸಂಚಲಿಸುತ್ತಿದೆ. ಗೆಳತಿಯರ ಸಣ್ಣ ದೊಡ್ಡ ಗುಂಪುಗಳು ಜಲವನ್ನು ತರಲು ನದಿಯ ಕಡೆಗೆ ಹೋಗುತ್ತಿವೆ. ಸುಪ್ಪತ್ತಿಗೆಯ ಮೇಲೆ ಮಲಗಿರುವವನು ಹೆಚ್ಚಿನ ಕುತೂಹಲದಿಂದ ಅವರೆಡೆಗೆ ಅವಲೋಕಿಸುತ್ತಿದ್ದಾನೆ.

ಸ್ತ್ರೀಯರ ಆಗಮನ ನಿರ್ಗಮನಗಳು ಇನ್ನೂ ಅನುಷ್ಠಾನದಲ್ಲಿದ್ದುವು. ಪಟ್ಟಣದ ಪಶ್ಚಿಮ ಭಾಗದಿಂದ ಈರ್ವ ನವಯುವತಿಯರು ಆಗಮಿಸಿದರು. ಅವರು ಚಪ್ಪರದ ಸಮೀಪದಿಂದ ಹಾದುಹೋಗುವಾಗ, ಅವರ ದೃಷ್ಟಿಯು ಸುಪ್ಪತ್ತಿಗೆಯ ಮೇಲೆ ಮಲಗಿದ್ದವನ ಕಡೆಗೆ ಹೊರಳಿತು. ಅವರು ಒಮ್ಮಿಂದೊಮ್ಮೆಯೇ ವಿಭ್ರಮೆಗೊಂಡರು. ಪುನಃ ಪುನಃ ಅವನನ್ನು ದಿಟ್ಟಿಸಿದರು. ಅನಂತರ ಅರ್ಥಸೂಚಕ ದೃಷ್ಟಿಯಿಂದ ಒಬ್ಬರನ್ನೊಬ್ಬರು ನೋಡತೊಡಗಿದರು. ಅವರಲ್ಲೋರ್ವಳು ''ಅಕ್ಕಾ! ಇವನನ್ನು ನೋಡಿದರೆ ದೀಪಕರಾಗವನ್ನು ಹಾಡಿ ಈ ದುರ್ಗತಿಗೀಳಿದಿರುವವನಂತೆ ಕಾಣುವನಲ್ಲವೆ?" ಎಂದಳು. ಮತ್ತೋರ್ವಳು "ಹೌದು, ಹೌದು. ನೀನು ನಿಶ್ಚಯವನ್ನು ಹೇಳಿದೆ. ಇವನ ಅಂತರೇಂದ್ರಿಯಗಳಲ್ಲಿ ಏಳುತ್ತಿರುವ ಧಗೆಯನ್ನು ಇವನ ನಿಸ್ತೇಜ ಶ್ಯಾಮಲವರ್ಣವೂ, ಇವನ ದುರ್ಭರವೇದನೆಯೂ ಸೂಚಿಸುತ್ತಿವೆ" ಎಂದಳು.

ಅನಂತರ ಅವರೀರ್ವರೂ ನೀರಿಗಾಗಿ ಮುಂದೆ ತೆರಳಿದರು. ಆದರೆ ಸುಪ್ಪತ್ತಿಗೆಯ ಮೇಲೆ ಮಲಗಿದ್ದವನಿಗೆ ಅವರ ಸಂಭಾಷಣೆಯಿಂದ ತನುವಿನಲ್ಲಿ ನವಸ್ಫೂರ್ತಿಯು ಅಂಕುರಿಸಿದಂತಾಯಿತು. ಅವನ ಧಮನಿಗಳಲ್ಲೆಲ್ಲಾ ವಿದ್ಯುತ್ಪ್ರವಾಹದ ಸಂಚಾಲನವಾದಂತಾಯಿತು. ಅವನು ಎದ್ದವನೇ ಮಿಂಚಿನ ಗತಿಯಲ್ಲಿ

ಓಡಿಹೋಗಿ ಆ ಯುವತಿಯರ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡನು. "ದೇವಿಯರೇ! ನೀವು ಚೆನ್ನಾಗಿ ಪರೀಕ್ಷಿಸಿದಿರಿ. ನಾನು ದೀಪಕರಾಗದಿಂದಲೇ ದಗ್ಧಿತನಾಗಿರುತ್ತೇನೆ. ನನ್ನ ಹೆಸರು ತಾನ್‌ಸೇನ್. ಪ್ರಭುವಾಜ್ಞಾಪಾಲನೆಗಾಗಿ ದೀಪಕರಾಗವನ್ನು ಹಾಡಿ ಈ ದುರವಸ್ಥೆಗೀಡಾಗಿರುತ್ತೇನೆ. ನನ್ನನ್ನು ದುಸ್ಸಹ ವೇದನೆಗೆ ಗುರಿಪಡಿಸಿರುವ ರೋಗವನ್ನು ತಿಳಿದವರು ಇದರ ನಿವಾರಣೋಪಾಯವನ್ನೂ ಅರಿತಿರುವಿರಿ. ನನ್ನ ಮೇಲೆ ಕೃಪೆತೋರಿರಿ. ಈ ದುರ್ಭರ ವೇದನೆಯಿಂದ ಪಾರುಗಾಣಿಸಿರಿ. ನಾನು ಯಾವಜ್ಜೀವವೂ ತಮ್ಮ ಮಹೋಪಕೃತಿಯನ್ನು ಮರೆಯಲಾರೆನು" ಎಂದನು.

ತಾನ್‌ಸೇನನ ಹೆಸರನ್ನರಿಯದ ಯಾವ ಗಾನಕಲಾಭಿಮಾನಿಯೂ ಹಿಂದೂಸ್ಥಾನದಲ್ಲಿರಲಿಲ್ಲ. ಚಕ್ರವರ್ತಿಯ ಆಸ್ಥಾನದ ಗಾಯಕತಿಲಕ, ತಾನ್‌ಸೇನನ ಅಮರಕೀರ್ತಿಯನ್ನು ಆ ರಮಣಿಯರು ಈ ಹಿಂದೆಯೇ ಕೇಳಿ ತಿಳಿದಿದ್ದರು. ಅವರೂ ಸಂಗೀತ ಕಲೆಯಲ್ಲಿ ತುಂಬಾ ಪ್ರವೀಣತೆಯನ್ನು ಪಡೆದಿದ್ದರು. ತಾನ್‌ಸೇನನನ್ನು ಕಾಣುತಲೇ ಹೃಷ್ಟಚಿತ್ತರಾದರು. ಅವನನ್ನು ಹೆಚ್ಚಿನ ಗೌರವದಿಂದ ಮನೆಗೆ ಕರೆದುಕೊಂಡುಹೋಗಿ ಅಧಿಕ ವಿಶ್ವಾಸದಿಂದ ಮೆತ್ತನೆಯ ಪೀಠದ ಮೇಲೆ ಕುಳ್ಳಿರಿಸಿದರು. ತಮ್ಮ ಶಾರೀರಗಳನ್ನು ಸರಿಪಡಿಸಿಕೊಂಡು ತಾನ್‌ಸೇನನಿಗೆ ಸೂಚನೆಯಿತ್ತರು.

"ತಮ್ಮ ವ್ಯಾಧಿಯು ಮಲಾಹಾರರಾಗದ ಶ್ರವಣದಿಂದ ಪರಿಹಾರವಾಗುವುದು. ಇದನ್ನು ತಾವೂ ಬಲ್ಲಿರಿ. ಈಗ ನಾವು ಮಲಾಹಾರರಾಗವನ್ನು ಹಾಡುತ್ತೇವೆ. ತಾವು ಪೂರ್ಣ ಶ್ರದ್ಧೆಯಿಂದ ಶ್ರವಣಿಸಬೇಕು. ಎಷ್ಟು ಹೆಚ್ಚಿನ ಶ್ರದ್ಧೋತ್ಸಾಹಗಳಿಂದ ಕೇಳುವಿರೋ, ಅಷ್ಟು ಹೆಚ್ಚಿನ ಪ್ರಯೋಜನವನ್ನು ಹೊಂದುವಿರಿ." ತಾನ್‌ಸೇನನು ಪೂರ್ಣ ಉತ್ಸುಕತೆಯಿಂದ ರಾಗವನ್ನಾಲಿಸಲು ಸಿದ್ಧನಾದನು. ಈರ್ವ ತರುಣಿಯರೂ ತಂಬೂರಿಗಳನ್ನು ಹಿಡಿದುಕೊಂಡು ಹಾಡಲುಪಕ್ರಮಿಸಿದರು. ಇಬ್ಬರ ಶಾರೀರಗಳೂ ಸುಶ್ರಾವ್ಯವಾಗಿಯೂ, ಸುಮನೋಹರವಾಗಿಯೂ ಇದ್ದುವು. ಎರಡು ಕೋಗಿಲೆಗಳು ತಮ್ಮ ಇಂಚರಗಳಿಂದ ಸುಮಧುರವಾಗಿ ಹಾಡುತ್ತಿವೆಯೋ, ಎಂಬಂತೆ ಅವಗತವಾಗತೊಡಗಿತು. ಅವರ ವದನದಿಂದ ಹೊರಹೊಮ್ಮುತ್ತಿದ್ದ ಒಂದೊಂದು ನುಡಿಯೂ ತಾನ್‌ಸೇನನ ತನುವಿನ ಮೇಲೆ ಸಂಜೀವಿನಿಯ ಪ್ರಯೋಗವನ್ನು ನಡೆಸುತ್ತಿತ್ತು.

ಹಾಡುತ್ತ ಹಾಡುತ್ತ ಅವರೂ ಕೂಡ ಮುಗ್ಧರಾಗುತ್ತಿದ್ದರು. ಅವರ ಮಂಜುಳ ರವವು ಸಿತಾರಿನ ಮಧುರ ನಿನಾದವನ್ನೂ ಅತಿಕ್ರಮಿಸಿ ಹೋಗುತ್ತಿತ್ತು. ಹಾಗೆಯೇ ನೋಡುತ್ತ ಹೋದಂತೆ ಆಕಾಶದ ಅಂಚಿನಿಂದ ಮರಿ ಮೋಡಗಳು ನಭದ ರಂಗಸ್ಥಳದಲ್ಲಿ ನಾಟ್ಯವಾಡಲು ಉತ್ಸಾಹದಿಂದ ಓಡಿಬರಲಾರಂಭಿಸಿದುವು. ಆ ಅಮರಗಾನವು ವೈಭವದ ಔನ್ನತ್ಯಕ್ಕೇರತೊಡಗಿತು. ಭೈರವ ಕಾಲ ಮೇಘಾವಳಿಯು ನೀಲಾಂಬರದ ಮೇಲೆ ಆಚ್ಛಾದಿತವಾಯಿತು. ಶೀತಲ ವಾಯುವಿನೊಡನೆ ಮಳೆಯ ತುಂತುರುಗಳೂ ಓಡಿಬರಲಾರಂಭಿಸಿದುವು. ಕ್ರಮಕ್ರಮೇಣ ಗಾಳಿಯ ದ್ರುತಗಮನದೊಂದಿಗೆ ಜಲವು ಧಾರೆಧಾರೆಯಾಗಿ ವರ್ಷಿಸತೊಡಗಿತು. ಮಲಹಾರರಾಗದ ಶೈತ್ಯದಿಂದ ತಾನ್‌ಸೇನನ ತನುವಿನಲ್ಲಾವಿರ್ಭವಿಸಿದ್ದ ದೀಪಕರಾಗದ ಔಷ್ಣ್ಯವು ಶಮನವಾಯಿತು. ಅವನ ನಿಸ್ತೇಜ ಶ್ಯಾಮಲವದನವು ಪದ್ಮರಾಗದಿಂದ ರಂಜಿಸಿತು.

ತಾನ್‌ಸೇನನ ಆನಂದಕ್ಕೆ ಮೇರೆಯಿಲ್ಲವಾಯಿತು. ಅವನು ಆ ತರುಣಿಯರನ್ನು ಬಹುವಾಗಿ ಸ್ತುತಿಸಿದನು. ಅವರಿಗೆ ತನ್ನ ಕೃತಜ್ಞತೆಯನ್ನು ಸಲ್ಲಿಸಿದನು. ಮನಸಾ ಅವರನ್ನು ಆಶೀರ್ವದಿಸಿದನು. “ನಿಮ್ಮ ಮಹೋಪಕಾರದ ಪ್ರತಿಫಲವನ್ನು ಹೇಗೆ ಸಲ್ಲಿಸಲಿ ?” ಎಂದು ಬೇಡಿಕೊಂಡನು. ಅದಕ್ಕವರು “ನಾವಿಬ್ಬರೂ ಸೋದರಿಯರಾಗಿರುತ್ತೇವೆ. ಮತ್ತು ಒಬ್ಬನನ್ನೇ ಪತಿಯಾಗಿ ಅಂಗೀಕರಿಸಿರುತ್ತೇವೆ. ತಂದೆಯ ಮನೆಯಲ್ಲಿ ಕೌಮಾರ್ಯಾವಸ್ಥೆಯಲ್ಲಿದ್ದಾಗಲೇ ಸಂಗೀತದಲ್ಲಿ ಹೆಚ್ಚಿನ ಅಭಿಜ್ಞತೆಯನ್ನು ಗಳಿಸಿದ್ದೆವು. ಪತಿಯ ಗೃಹವನ್ನು ಸೇರಿದ ಮೇಲೆ ಪ್ರೌಢಶಿಕ್ಷಣವನ್ನು ಪಡೆದೆವು. ನಮ್ಮ ಪತಿದೇವರು ಪರಸ್ಥಳಕ್ಕೆಹೋಗಿರುತ್ತಾರೆ. ಅವರ ಅಪ್ರತ್ಯಕ್ಷತೆಯಲ್ಲಿ ನಾವು ತಮ್ಮನ್ನು ಮನೆಗೆ ಕರೆದು ತಂದು ತಮ್ಮೆದುರಿನಲ್ಲಿ ಹಾಡಿದೆವು. ತಮ್ಮ ದುಸ್ಥಿತಿಯನ್ನು ನೋಡಿದ ಮೇಲೆ ಈರೀತಿಗೈಯ್ಯುವುದು ದೋಷವೆಂದು ಭಾವಿಸಲಿಲ್ಲ. ಅವರಲ್ಲಿಯೂ ತಮ್ಮಂತಹ ಅಸದೃಶ ವ್ಯಕ್ತಿತ್ವದ ಸೇವೆಯನ್ನು ಕೈಗೊಳ್ಳುವ ಸುಯೋಗವನ್ನು ಯಾರುತಾನೇ ಕಳೆದುಕೊಂಡಾರು ? ನಾವು ನಮ್ಮ ಪತಿದೇವರನ್ನು ಒಲಿಸಿಕೊಂಡು ಅವರ ಕ್ಷಮೆಯನ್ನು ಬೇಡುವೆವು. ನಮಗೆ ನಂಬಿಗೆಯಿದೆ. ಅವರು ನಮ್ಮನ್ನು ಮನ್ನಿಸುವರು. ತಮ್ಮಲ್ಲಿ ನಮ್ಮ ಪ್ರಾರ್ಥನೆಯೆಂದರೆ, ಈರ್ವ ಸ್ತ್ರೀಯರು ಮಲಹಾರವನ್ನು ಹಾಡಿ ತಮ್ಮನ್ನು ಗುಣಪಡಿಸಿದರೆಂಬ

ವಿಷಯವನ್ನು ಎಲ್ಲೂ ಬಹಿರಂಗಗೊಳಿಸಬಾರದು. ಇದೇ ತಾವು ನಮಗೆ ಸಲ್ಲಿಸಬೇಕಾಗಿರುವ ಪ್ರತಿಫಲ" ಎಂದುತ್ತರವಿತ್ತರು. ತಾನ್‌ಸೇನನು ಅವರಿಚ್ಛೆಯಂತೆಯೇ ನಡೆಯುವುದಾಗಿ ವಾಗ್ದಾನಗೈದು, ಪುನಃ ಅವರನ್ನು ಹರಸಿ ಅಲ್ಲಿಂದ ಹೊರಟನು.

ತಾನ್‌ಸೇನನ ಅಗಲಿಕೆಯಿಂದ ಬಾದಷಹನು ನಿರುತ್ಸಾಹಿಯಾದನು. ಅವನ ಆಸ್ಥಾನದ ಶೋಭೆಯೂ ಆನಂದವೂ ಅವನೊಂದಿಗೇ ಅದೃಶ್ಯವಾಯಿತು. ಮೊದಮೊದಲು ತಾನ್‌ಸೇನನ ವಿಷಯಕವಾದ ಸುದ್ದಿಯು ಬಾದಷಹನಿಗೆ ತಲಪುತ್ತಿತ್ತು. ಕ್ರಮಕ್ರಮೇಣ ಅದು ಸಂಪೂರ್ಣವಾಗಿಯೂ ನಿಂತುಹೋಯಿತು. ಬಾದಷಹನ ಮನದಲ್ಲಿ ವಿವಿಧಾಭಿಪ್ರಾಯಗಳು ಮೂಡುತ್ತ ಅವನ ಹೃದಯದಲ್ಲಿ ಆಂದೋಲನವನ್ನೆಬ್ಬಿಸಿದ್ದುವು. ತನ್ನಿಂದಲೇ ತಾನ್‌ಸೇನನಿಗೆ ದುರ್ಭರವಾದ ದುರ್ಗತಿಯು ಸಂಪ್ರಾಪ್ತವಾಯಿತೆಂದು ಪಶ್ಚಾತ್ತಾಪಪಡಲಾರಂಭಿಸಿದನು. ಕೊನೆಕೊನೆಗೆ ತಾನ್‌ಸೇನನ ನೆನಹಿನಿಂದ ವ್ಯಸ್ತಚಿತ್ತನಾಗಿ ಏಕಾಂತವಾಸವನ್ನು ಕೈಗೊಂಡಿದ್ದನು.

ಸಾಯಂಕಾಲದ ಸಮಯ. ಬಾದಷಹನು ಏಕಾಂಗನಾಗಿ ಕುಳಿತಿದ್ದನು. ಆಗ್ರಾಪಟ್ಟಣದ ಜಾಮಿಯಾ ಮಸೀದಿಯಿಂದ ಅಲ್ಲಾಹು ಅಕ್ಬರ್ ಸುನಾದವು ಪ್ರಭವಿಸುತ್ತ ಅನಿಲಪ್ರವಾಹಿನಿಯಲ್ಲಿ ತೇಲಿಹೋಗುತ್ತಿತ್ತು. ರಾಜಭವನದ ತಳಭಾಗದಲ್ಲಿ ಆಗ್ರಾಕೋಟೆಯ ಪ್ರಬಲಭಿತ್ತಿಯೊಂದಿಗೆ ಘರ್ಷಿಸುತ್ತ ಜಮುನಾ ತರಂಗಿಣಿಯು ತೀವ್ರಗತಿಯಿಂದ ಸಾಗಿಹೋಗುತ್ತಿದ್ದಳು. ನಯನಮನೋಹರ ದೃಶ್ಯವು ಕಣ್ಣಿಗೆಸೆಯುತ್ತಿತ್ತು. ಆದರೆ ಬಾದಶಹನ ಭಾಗಕ್ಕೆ ಅದು ಶೂನ್ಯವಾಗಿತ್ತು. ಅವನು ಗಭೀರವಾದ ಚಿಂತೆಯಲ್ಲಿ ತಾದಾತ್ಮ್ಯನಾಗಿದ್ದನು. ಹಠಾತ್ತನೇ ದ್ವಾರಪಾಲಕನು ಒಳಗೆ ಪ್ರವೇಶಿಸಿದನು. ಆತನ ಮುಖದ ಮೇಲೆ ಸಂತೋಷವಾರ್ತೆಯ ಚಿಹ್ನೆಗಳಿದ್ದು ಕಾಣುತ್ತಿದ್ದುವು. ಅವನು ತಂದ ಸುವಾರ್ತೆಯಿಂದ ಬಾದಷಹನ ವದನಾಂಬರದ ಮೇಲೆ ಹರ್ಷೇಂದುವು ಪ್ರಕಾಶಿಸತೊಡಗಿದನು. ದ್ವಾರಪಾಲಕನು ತಾನ್‌ಸೇನನ ಆಗಮನವಾರ್ತೆಯನ್ನು ತಂದಿದ್ದನು. ತಕ್ಷಣವೇ ತಾನ್‌ಸೇನನನ್ನು ಒಳಗೆ ಕರೆತರಲಾಜ್ಞೆಯಾಯಿತು. ತಾನ್‌ಸೇನನು ಒಳಗೆ ಪ್ರವೇಶಿಸಿದನು. ಬಾದಷಹನು ತಾನ್‌ಸೇನನ ಶಾಂತಿಯುತ ವದನವನ್ನು ಕಂಡು ಹರ್ಷೋತ್ಫುಲ್ಲನಾದನು. ತನ್ನ ಹಳೆಯ

ಸ್ನೇಹಿತನು ಪೂರ್ಣ ಗುಣಮುಖನಾದನಲ್ಲ, ಎಂಬ ಸಂತೋಷದೊಂದಿಗೆ ಹಿಂದೂಸ್ಥಾನದಲ್ಲಿ ಮಲಹಾರರಾಗವನ್ನು ಹಾಡುವವರು ಪ್ರತ್ಯಕ್ಷವಾಗಿದ್ದಾರೆಂಬ ವಿಷಯವೂ ದೃಢವಟ್ಟಿತು.

ತಾನ್‌ಸೇನನಿಗೆ ಕುಳಿತುಕೊಳ್ಳಲಾಜ್ಞಾಪಿಸಿ ಬಾದಷಹನು ಅತ್ಯಂತ ಪ್ರೀತಿಯಿಂದ "ಪೂರ್ಣಾರೋಗ್ಯಹೊಂದಿ ಸುಕ್ಷೇಮದಿಂದ ಹಿಂದಿರುಗಿದ ನಿಮ್ಮನ್ನು ನೋಡಿ, ನಾನು ಅಮಿತಾನಂದವನ್ನನುಭವಿಸುತ್ತಿದ್ದೇನೆ. ನಿಮ್ಮ ವ್ಯಾಧಿಯ ಶಮನದಿಂದ ಹಿಂದೂಸ್ಥಾನದಲ್ಲಿ ಮಲಹಾರರಾಗದ ಪ್ರವೀಣರು ಪ್ರತ್ಯಕ್ಷವಾಗಿದ್ದಾರೆಂದರಿತಂತಾಯಿತು. ನನಗೆ ತಿಳುಹಿರಿ. ಅವರು ಯಾರು? ಯಾವ ದೇಶವಾಸಿಗಳು? ಅವರನ್ನು ನನ್ನ ಆಸ್ಥಾನಕ್ಕೆ ಕರೆಸುವೆನು. ಅವರ ವಿದ್ಯಾನಿಪುಣತೆಗೆ ತಕ್ಕ ಪುರಸ್ಕಾರವೀಯುವೆನು. ನನ್ನ ಆಸ್ಥಾನವು ಸಕಲ ವಿದ್ಯಾವಿತ್ತಮರಿಂದ ರಂಜಿಸಲಿ" ಎಂದನು.

ಬಾದಷಹನ ಪ್ರಶ್ನೆಯಿಂದ ತಾನ್‌ಸೇನನು ವಿಲಕ್ಷಣವಾದ ಪೇಚಾಟದಲ್ಲಿ ಸಿಕ್ಕಿಬಿದ್ದನು. ಬಾದಷಹನಿಗೆ ನಿಜಾಂಶವನ್ನರುಹಲಾರ, ಅರುಹದಿರಲಾರ. ಹೇಳಿದರೆ ವಚನಭ್ರಷ್ಟನಾಗಬೇಕಾಗುವುದು. ಹೇಳದಿದ್ದರೆ ಪ್ರಭುದ್ರೋಹಿಯಾಗಬೇಕಾಗುವುದು. ಕೊನೆಗೆ ಬಹಳ ಹೊತ್ತಿನವರೆಗೂ ಯೋಚಿಸಿ "ಮಹಾಪ್ರಭು! ನನ್ನ ರುಜಾನಿವಾರಕನು ತಮ್ಮ ಆಸ್ಥಾನಕ್ಕೆ ಬರಲೂ, ತಮ್ಮಿದಿರಿನಲ್ಲಿ ಮಲಹಾರರಾಗವನ್ನು ಹಾಡಲೂ ಅಪೇಕ್ಷಿಸನು" ಎಂದನು.

"ಅದೇಕೆ?"

"ಒಂದು ನೈಸರ್ಗಿಕ ನಿರ್ಬಂಧದಿಂದ."

"ಆ ನಿರ್ಬಂಧವು ಓರ್ವ ಬಾದಷಹನ ಮನೋಭೀಷ್ಟವನ್ನು ತಡೆಗಟ್ಟಲಾರದು."

"ಹೀಗಾಗುವುದಾದರೆ, ನನ್ನ ಪ್ರಾಣದಾತನಿದಿರಿನಲ್ಲಿ ಜೀವನ ಮರಣದ ಪ್ರಶ್ನೆಯು ಎದ್ದುನಿಲ್ಲುವುದು."

"ಓಹೋ! ಇಂಥಾ ಕಠಿಣವಾದ ನಿರ್ಬಂಧವೇ?"

"ಹೌದು ಮಹಾಪ್ರಭು."

"ಆದರೆ ಈ ನಿರ್ಬಂಧದ ನೈಜಕಾರಣವಾದರೂ ಏನು?"

"ನಾನು ಕಾರಣವನ್ನು ರಹಸ್ಯವಾಗಿಡುವ ವಾಗ್ದಾನಗೈದಿರುವೆನು."

ತಾನ್‌ಸೇನನ ಉತ್ತರದಿಂದ ಬಾದಷಹನು ವಿಚಾರಮಗ್ನನಾದನು. ಸ್ವಲ್ಪ ಹೊತ್ತಿನ ತರುವಾಯ ತನ್ನ ಮುಖವನ್ನೆತ್ತಿ "ತಾನ್‌ಸೇನ್! ನಾನು ಭರವಸೆಯೀಯುತ್ತೇನೆ. ನಾನು ಯಾವ ವಿಧದಿಂದಲೂ ಬಲಾತ್ಕರಿಸೆನು. ನಿರ್ಬಂಧಿಸೆನು. ಆದರೆ ನೀವು ಇದೊಂದು ವಿಷಯವನ್ನು ಮಾತ್ರ ತಿಳುಹಿರಿ. ಆ ಮನುಷ್ಯನಿಗೆ ನನ್ನ ಆಸ್ಥಾನಕ್ಕೆ ಬರಲು ಇರುವ ಆತಂಕವೇನು?"

"ಮಹಾಪ್ರಭುಗಳ ನಿರ್ಮಲಾಂತಃಕರಣದ ಮೇಲೆ ನನಗೆ ಪೂರ್ಣ ಭರವಸೆಯಿದೆ. ನಾನೀ ಪ್ರಸಕ್ತಿಯನ್ನು ಗೌಪ್ಯವಾಗಿಡುತ್ತೇನೆಂದು ವಾಗ್ದಾನ ಗೈದು ಬಂದಿರುವೆನಾದರೂ, ಮಹಾ ಸನ್ನಿಧಿಯಲ್ಲಿ ಅದನ್ನು ನಿರೂಪಿಸುವೆನು. ಆದರೆ ಈ ವಿಷಯವು ಮೂರನೆಯವರಿಗೆ ಮಾತ್ರ ತಿಳಿಯಬಾರದು."

ಬಾದಷಹನು ಇತರರೆದಿರಿನಲ್ಲಿ ಈ ವಿಷಯವನ್ನು ಪ್ರಸ್ತಾಪಿಸುವುದಿಲ್ಲ ವೆಂದು ವಚನವಿತ್ತನು. ತಾನ್‌ಸೇನನು ಸಮಸ್ತ ವಿದ್ಯಮಾನವನ್ನೂ ವಿಶದೀ ಕರಿಸಿದನು. ಅಹಮದಾಬಾದ್ ನಗರದಲ್ಲಿ ಉಚ್ಚವಂಶದ ಈರ್ವ ಹಿಂದೂ ಸ್ತ್ರೀಯರು ಮಲಹಾರರಾಗವನ್ನು ಹಾಡಿದರೆಂಬ ಸುದ್ದಿಯನ್ನು ಕೇಳಿ ಬಾದ ಷಹನು ವಿಸ್ಮಿತನಾದನು.

ಅಕ್ಬರನು ಸ್ವತಃ ನ್ಯಾಯಪಕ್ಷಪಾತಿಯೂ, ಸುಗುಣಿಯೂ ಆಗಿದ್ದನು. ಮೇಲಾಗಿ ತಾನ್‌ಸೇನನಿಗೆ ವಚನವಿತ್ತಿದ್ದನು. ಆದ್ದರಿಂದ ಆ ಹಿಂದೂ ಸ್ತ್ರೀಯರನ್ನು ಆಸ್ಥಾನಕ್ಕೆ ಕರೆಸುವ ಯೋಚನೆಯನ್ನು ತೊರೆದನು. ಆದರೆ ಅವರ ಅನುಪಮ ಮನೋಜ್ಞ ಕೋಕಿಲ ವಾಣಿಗಳಿಂದ ಮಲಹಾರವನ್ನು ಕೇಳುವ, ಆ ರಾಗಶಕ್ತಿಯ ಅದ್ಭುತ ಪ್ರಭಾವವನ್ನು ಕಾಣುವ ಆಕಾಂಕ್ಷೆಯು ಆತನ ಮನೋಶಾಂತಿಯನ್ನು ಕಲಕಲಾರಂಭಿಸಿತು. ಅವನ ಮನೋವಾಹಿನಿ ಯಲ್ಲಿ ವಿವಿಧ ವಿಚಾರ ತರಂಗಗಳೇಳುತ್ತ ಸಾಗತೊಡಗಿದುವು. ಅವನಿಗೆ ಕೊನೆಗೊಂದು ಉಪಾಯವು ಹೊಳೆಯಿತು. ಆನಂದದ ಸಂಚಾಲನದಿಂದ ಅವನ ಮುಖಪದ್ಮವು ಅರಳಿತು. ಅವನು ಉತ್ಸಾಹಿತನಾಗಿ "ತಾನ್‌ಸೇನ್! ಬಾದಷಹನ ಇದಿರಿನಲ್ಲಿ ಆತನ ಪ್ರಜೆಗಳು ಮಕ್ಕಳಿಗೆ ಸಮಾನರಲ್ಲವೇ? ಪುರುಷ ನಾದವನು ಪುತ್ರನಾದರೆ, ಸ್ತ್ರೀಯಾದವಳು ಪುತ್ರಿಯು. ಆದ್ದರಿಂದ ಅಹಮದಾ ಬಾದ್ ನಗರದ ಆ ಈರ್ವ ಹಿಂದೂ ಸ್ತ್ರೀಯರು ನನ್ನ ಪುತ್ರಿಯರು. ನಡೆಯಿರಿ, ಅಹಮದಾಬಾದಿಗೆ ಹೋಗೋಣ. ಯಾವ ಪುತ್ರಿಯು ತಾನೇ ತನ್ನ ಪಿತನ

ಇದಿರಿನಲ್ಲಿ ನಾಚುವಳು? ಅವಕುಂಠನದಿಂದ ಮುಖವನ್ನು ಮರೆಸಿಕೊಳ್ಳು ವಳು? ನಾನು ಅವರ ಗಾನವಿದ್ಯಾನಿಪುಣತೆಯನ್ನು ಪರೀಕ್ಷಿಸುವೆನು. ಓರ್ವ ತಂದೆಯ ಹೃದಯದಿಂದ ಅವರನ್ನು ಪುರಸ್ಕರಿಸುವೆನು" ಎಂದನು. ತಾನ್ ಸೇನನು ಅಚ್ಚರಿಗೊಂಡು ತಟಸ್ಥನಾದನು. ಮರುದಿವಸ ಬಾದಷಹನೊಡನೆ ಅಹಮುದಾಬಾದಿಗೆ ಪ್ರಯಾಣಬೆಳೆಸಿದನು.

ಸಬರ್ಮತೀ ನದಿಯ ಅದೇ ತೀರದಲ್ಲಿ ಒಂದು ಭವ್ಯವಾದ ಗೂಡಾರವು ರಂಜಿಸುತ್ತಿದೆ. ಅದರ ಸುತ್ತಲೂ ಅನೇಕ ಸಣ್ಣ ಸಣ್ಣ ಗೂಡಾರಗಳು ಸೃಷ್ಟಿ ಸಲ್ಪಟ್ಟಿವೆ. ಅದೇ ಸುಪ್ರಭಾತದ ಹರ್ಷಪ್ರದ ಕಾಲ. ಹಕ್ಕಿಗಳ ಕಲಕಲ ನಾದವಾದ್ಯಗಳೊಂದಿಗೆ ಕೋಗಿಲೆಯು ಸುಮಧುರ 'ಕೂ! ಕೂ!' ರಾಗವನ್ನು ಹಾಡುತ್ತಿದೆ. ನವಯುವತಿಯರು ನಡು ಮತ್ತು ಶಿರಗಳ ಮೇಲೆ ಕೊಡಗಳನ್ನು ಧರಿಸಿಕೊಂಡು ವಿವಿಧ ಭಂಗಿಗಳಲ್ಲಿ ನದಿಯ ಕಡೆಗೆ ಸಾಗುತ್ತಿದ್ದಾರೆ. ಆ ಗೂಡಾ ರಗಳ ಸಮೀಪದಿಂದ ಓರ್ವ ಪುರುಷನು ಕುತೂಹಲವಿಶಿಷ್ಟನಾಗಿ ಅವರನ್ನು ದಿಟ್ಟಿಸುತ್ತ ಅವರಲ್ಲಿ ಯಾರನ್ನೋ ನೋಡಬಯಸುತ್ತಿದ್ದಾನೆ. ಆದರೆ ಪ್ರತಿ ಯೊಂದು ನಾರಿಯ ನೋಟದಲ್ಲಿಯೂ ನಿರಾಶನಾಗುತ್ತಿದ್ದಾನೆ. ನಿರುತ್ಸಾಹಿ ಯಾಗುತ್ತಿದ್ದಾನೆ. ಈ ನಿರೀಕ್ಷಣೆಯಲ್ಲಿಯೇ ಬಹಳ ಹೊತ್ತು ಕಳೆದುಹೋಯಿತು. ಒಮ್ಮಿಂದೊಮ್ಮೆ ದೂರದಿಂದ ನವಯುವತಿಯರಿಬ್ಬರು ಬರುತ್ತಿರುವಂತೆ ಗೋಚ ರಿಸಿದರು. ಅವನ ಹೃದಯವು ಉಬ್ಬಿತು. ಅವನ ಮುಖದ ಮೇಲೆ ಸಂತೋಷವು ಮೂಡಿತು. ಅವನು ಓಡಿಹೋಗಿ ಅವರ ಪಾದಗಳನ್ನು ಹಿಡಿದು ಚುಂಬಿಸಿದನು. ತಾನ್‌ಸೇನನ ಪುನರ್ದರ್ಶನದಿಂದ ಅವರು ಆನಂದವನ್ನು ಸೂಚಿಸಿದರು. ಬಂದ ಕಾರಣವನ್ನು ವಿಚಾರಿಸಿದರು. ತಾನ್‌ಸೇನನು ಬಾದಷಹನ ಆಗಮನ ವಾರ್ತೆಯನ್ನೂ, ಇತರ ಎಲ್ಲಾ ವಿಚಾರಗಳನ್ನೂ ತಿಳಿಸಿಬಿಟ್ಟನು. ಅದನ್ನು ಕೇಳುತಲೇ ಅವರ ಸರೋಜಾನನಗಳು ವಿಶುಷ್ಕವಾದುವು. ಅವರು ಚಿಂತಾ ಧಿಕ್ಯದಿಂದ ತಟಸ್ಥರಾಗಿ ನಿಂತುಕೊಂಡರು. ಸ್ವಲ್ಪ ಹೊತ್ತಿನ ತರುವಾಯ ಅವರಲ್ಲೋರ್ವಳು "ತಾನ್‌ಸೇನರೇ! ಹೀಗಾಗಬಾರದಾಗಿತ್ತು. ಈಗ ಆದು ದಾಯಿತು. ಭಗವದಿಚ್ಛೆಯು ಪೂರ್ಣಗೊಳ್ಳಲೇಬೇಕು. ನೀವು ನಿಶ್ಚಿಂತೆಯಿಂದ ನಿಮ್ಮ ಗೂಡಾರದಲ್ಲಿರಿ. ನಾವು ಮಧ್ಯಾಹ್ನದ ವೇಳೆಗೆ ಬಂದು ಬಾದಷಹನ ಇದಿರಿನಲ್ಲಿ ಮಲಹಾರವನ್ನು ಹಾಡುವೆವು" ಎಂದು ಹೇಳಿ ಹೊರಟುಹೋದರು.

ಇಷ್ಟು ಸುಲಭವಾಗಿ ತನ್ನ ಪ್ರಯತ್ನವು ಸಫಲವಾದುದಕ್ಕಾಗಿ ತಾನ್ ಸೇನನಿಗೆ ಅಮಿತಾನಂದವಾಯಿತು. ಅವನು ಹರ್ಷಚಿತ್ತದಿಂದ ಗೂಡಾರಕ್ಕೆ ಹಿಂದಿರುಗಿ ಬಾದಷಹನಿಗೆ ಜರಗಿದ ವಿದ್ಯಮಾನವನ್ನು ತಿಳಿಸಿದನು. ಬಾದ ಷಹನೂ ಕೂಡ ನಿರಾಯಾಸವಾಗಿ ತನ್ನ ಅಭೀಷ್ಟವು ಕೈಗೂಡುವಂತಾದುದನ್ನು ಕೇಳಿ ಆನಂದಿತನಾದನು.

ಮಧ್ಯಾಹ್ನದ ಸಮಯ. ದಿನಮಣಿಯು ತನ್ನ ಪೂರ್ಣ ತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದನು. ಸಬರ್ಮತೀ ನದಿಯ ತೀರದಲ್ಲಿದ್ದ ಗೂಡಾರಗಳ ಬಳಿಗೆ ಒಂದು ಪಲ್ಲಕ್ಕಿಯು ಬಂದು ನಿಂತಿತು. ಅದರೊಳಗಿನಿಂದ ಇಬ್ಬರು ನವ ಯುವತಿಯರು ಕರಗಳಲ್ಲಿ ತಂಬೂರಿಗಳನ್ನು ಹಿಡಿದುಕೊಂಡು ಇಳಿದರು. ತಾನ್‌ಸೇನನು ಅವರ ನಿರೀಕ್ಷಣಾಕಾಂಕ್ಷಿಯಾಗಿ ನಿಂತಿದ್ದನು. ಇಬ್ಬರನ್ನೂ ಬಾದಷಹನ ಬಳಿಗೆ ಕರೆದುಕೊಂಡು ಹೋದನು.

ಗೂಡಾರದಲ್ಲಿ ಬಾದಷಹನು ಸುಖಾಸನಕ್ಕೊರಗಿಕೊಂಡು ಕುಳಿತಿದ್ದನು. ಇಬ್ಬರನ್ನೂ ಕಾಣುತಲೇ ಬಹುವಾಗಿ ಸಂತೋಷಿಸಿದನು. ಆದರೆ ಮರುಕ್ಷಣ ದಲ್ಲಿಯೇ ಆತನಿಗೆ ಅತ್ಯಾಶ್ಚರ್ಯವಾಯಿತು. ಏಕೆಂದರೆ ಯುವತಿಯರಿಬ್ಬರೂ ಕರಗಳಲ್ಲಿ ಭರ್ಜಿಗಳನ್ನು ಹಿಡಿದುಕೊಂಡು ಹೋರಾಡಲು ಬಂದ ವೀರಕನ್ಯೆಯ ರಂತೆ ಗೋಚರಿಸುತ್ತಿದ್ದರು. ಆದರೂ ಬಾದಷಹನು ಕಾರಣವನ್ನು ವಿಚಾರಿಸದೆ ಅವರೀರ್ವರಿಗೂ ಕುಳಿತುಕೊಳ್ಳುವಂತೆ ಸನ್ನೆಗೈದನು. ಅನಂತರ ತನ್ನ ಸಾರ್ವಭೌಮಿಕ ವಾಣಿಯಿಂದ "ಪುತ್ರಿಯರೇ! ಅಭೀತರಾಗಿರಿ. ಗುರುವಿಗೆ ಆತನ ಶಿಷ್ಯರೂ, ಬಾದಷಹನಿಗೆ ಆತನ ಪ್ರಜೆಗಳೂ ಪುತ್ರಸಮಾನರು. ಪಿತನಿಗೆ ಪುತ್ರರನ್ನು ಕಾಣುತಲೇ ಎಷ್ಟು ಹರ್ಷವಾಗುವುದೋ, ನನಗೆ ನನ್ನ ಪ್ರಜೆಗಳ ಅಭ್ಯುದಯವನ್ನು ಕಾಣುತಲೇ ಅಷ್ಟು ಆನಂದವಾಗುವುದು. ನಾನು ನನ್ನ ಪುತ್ರಿಯರ ಗಾನಕಲಾಭಿಜ್ಞತೆಯನ್ನು ಅರಿಯಲು ಇಷ್ಟು ದೂರದ ಪ್ರಯಾಣ ವನ್ನು ಬೆಳೆಸಿಬಂದಿರುವೆನು" ಎಂದನು.

ಬಾದಷಹನು ತನ್ನ ಶುದ್ಧಾತ್ಮದಿಂದ ನುಡಿದ ಸುಭಾಷಿತವನ್ನು ಕೇಳಿ ಅವರ್‍ು ಶಾಂತಚಿತ್ತರಾದರು. ಮತ್ತು ನಿಶ್ಚಿಂತೆಯಿಂದ ಕುಳಿತುಕೊಂಡರು. ಅನಂತರ ತಮ್ಮ ಶಾರೀರಗಳನ್ನು ಸರಿಪಡಿಸಿಕೊಂಡು ತಂಬೂರಿಗಳನ್ನು ಹಿಡಿದರು. ಅವರ ಕೋಮಲವಾದ ಬೆರಳುಗಳು ತಂತುಗಳ ಮೇಲೆ ಚಲಿಸ

ಲಾರಂಭಿಸಿದುವು. ಆಸ್ಥಾನದ ವಾದ್ಯಗಾರರೂ ತಮ್ಮ ವಿವಿಧ ವಾದ್ಯಗಳ ಸುಸ್ವರಗಳಿಂದ ಸಂಗೀತಕ್ಕೆ ರಂಜನೆಯನ್ನೀಯತೊಡಗಿದರು. ಅತ್ಯಪೂರ್ವವಾದ ಮಧುರನಿನಾದವನ್ನು ಚೆಲ್ಲುತ್ತ ಸಂಗೀತವು ಪ್ರಾರಂಭವಾಯಿತು. ಸಬರ್ಮತೀ ತೀರದಿಂದ ಅದ್ಭುತ ಗಾನಮಾಧುರ್ಯವನ್ನು ಹೊತ್ತು ಅನಿಲ ತರಂಗಗಳು ಚಲಿಸಲಾರಂಭಿಸಿದುವು.

ವಾದ್ಯಗಳ ಮಧುರನಿಕ್ವಣಗಳನ್ನು ಭೇದಿಸಿಕೊಂಡು ಎರಡು ಚಿತ್ತಾಕರ್ಷಕ ಮಂಜುಳವಾಣಿಗಳು ಸಂಮೋಹನಾ ಮಂತ್ರವನ್ನು ಪ್ರಯೋಗಿಸುತ್ತಿದ್ದುವು. ಬಾದಷಹನು ಪ್ರಸ್ತರಖಚಿತ ಮೂರ್ತಿಯಂತೆ ನಿಸ್ಪಂದನಾದನು. ತಾನ್‌ಸೇನನ ಮೇಲುಂಟಾದ ಪರಿಣಾಮವು ವರ್ಣಿಸಲಸದಳವಾಗಿತ್ತು. ಆತನು ಈ ಹಿಂದೆಯೂ ಮಲಹಾರವನ್ನು ಕೇಳಿದ್ದನು. ಆದರೆ ಹಿಂದಿನ ಮಲಹಾರಕ್ಕೂ ಇಂದಿನದಕ್ಕೂ ಭೂವ್ಯೋಮಗಳ ಅಂತರವಿತ್ತು. ಅದು ಕೇವಲ ಓರ್ವ ರೋಗಿಯ ರುಜಾನಿವಾರಣೆಗಾಗಿ ಹಾಡಲ್ಪಟ್ಟಿದ್ದಿತು. ಆದರೆ ಇಂದಿನ ಮಲಹಾರವು ಸಹಸ್ರಾರು ರೋಗಿಗಳ ವ್ಯಾಧಿಗಳನ್ನು ಏಕಕಾಲದಲ್ಲಿ ಉಪಶಮನಗೈಯ್ಯಲು ಹಾಡಲ್ಪಡುತ್ತಿತ್ತು. ತರುಣಿಯರಿಬ್ಬರೂ ಅತ್ಯಾನಂದದಿಂದ ತಮ್ಮ ಗಾನಕಲಾವಿಚಕ್ಷಣತೆಯನ್ನು ಪ್ರದರ್ಶಿಸುತ್ತ ಆ ಜಗನ್ಮೋಹನಾರಾಗವನ್ನು ಹಾಡುತ್ತಿದ್ದ ವೈಖರಿಯನ್ನು ನೋಡಿದರೆ, ಅವರು ಇನ್ನೆಂದೆಂದಿಗೂ ಸಂಗೀತವನ್ನು ಹಾಡುವುದೇ ಇಲ್ಲವೋ! ಎಂಬಂತೆ ವಿದಿತವಾಗುತ್ತಿತ್ತು. ಸ್ವಲ್ಪ ಹೊತ್ತಿನ ತರುವಾಯ ಪ್ರಕೃತಿಯಲ್ಲಿ ವಿಚಿತ್ರವಾದ ಪರಿವರ್ತನೆಯು ಕಂಡು ಬಂದಿತು. ಕಾಲಮೇಘಗಳ ಆಚ್ಛಾದನೆಯಿಂದ ಅಪರಾಹ್ಣದ ಆತಪದ ಧಗೆಯು ಕುಂಠಿತವಾಯಿತು. ತಪ್ತಮಾರುತವು ಶೀತಲವಾಯುವಿನಲ್ಲಿ ಸಂಸಕ್ತವಾಯಿತು. ಪುನಃ ಮಳೆಯ ತುಂತುರುಗಳು ಕಾಣಿಸಿಕೊಂಡುವು. ಹೇಗೆಹೇಗೆ ಮಲಹಾರವು ತಾರಕಸ್ಥಾಯಿಯಲ್ಲಿ ಏರಿಏರಿಹೋಗುತ್ತಿತ್ತೋ, ಹಾಗೆಯೇ ಮಳೆಯೂ ತೀಕ್ಷ್ಣವಾಗಿ ವರ್ಷಿಸುತ್ತಿತ್ತು. ಮಳೆಯೂ ಕೂಡ ತನ್ನ ಬಿಂದುವಾದ್ಯಗಳೊಂದಿಗೆ ಸಂಗೀತದೊಡನೆ ಸಹಕರಿಸಲಾರಂಭಿಸಿತು. ಸಂಗೀತವು ಸುಶ್ರಾವ್ಯವಾಗಿಯೂ, ಪ್ರಭಾವಯುತವಾಗಿಯೂ ಇದ್ದಿತು. ಅಂದಿನ ಸಂಗೀತವು ಬಾದಷಹನ ಭಾಗಕ್ಕೆ ಮಂತ್ರದ ಪ್ರಯೋಗದಂತಿತ್ತು. ಅವನ ಶ್ರವಣೇಂದ್ರಿಯಗಳು ಪುನೀತವಾದುವು. ಅವನು ಆ ಗಾನಶಕ್ತಿಯಲ್ಲಿ ಪರಮಾತ್ಮನ ಅದ್ಭುತಲೀಲೆಯನ್ನು ಕಂಡನು.

ಸಂಗೀತವು ಮುಗಿಯಿತು. ಬಾದಷಹನು ಹರ್ಷದ ಉದ್ವೇಗದಲ್ಲಿ ಅವರನ್ನು ಬಹುವಾಗಿ ಪ್ರಶಂಸಿಸಿದನು. ಅವರ ಗಾನವಿದ್ಯಾಪ್ರಭಾವಕ್ಕೆ ಮೆಚ್ಚಿ ಒಂದು ದೊಡ್ಡ ಜಹಗೀರನ್ನು ಬಹುಮಾನವಾಗಿ ಕೊಟ್ಟನು. ಮತ್ತು ಅವರ ಗೌರವಾರ್ಥವಾಗಿ ಸ್ವತಃ ತಾನೇ ಪಲ್ಲಕ್ಕಿಯವರೆಗೂ ನಡೆದುಬಂದನು. ಅವರೀರ್ವರೂ ಪಲ್ಲಕ್ಕಿಯಲ್ಲಿ ಕುಳಿತು ಹೊರಟುಹೋದ ಅನಂತರ ತಾನ್ ಸೇನನೊಡನೆ ಗೂಡಾರಕ್ಕೆ ಹಿಂದಿರುಗಿದನು.

ಬಾದಷಹನು ಇನ್ನೂ ಗೂಡಾರವನ್ನು ನೇರಿರಲಿಲ್ಲ. ಅಷ್ಟರಲ್ಲಿಯೇ ಒಂದು ಹೃದಯವಿದ್ರಾವಕ ಆರ್ತನಾದವನ್ನು ಕೇಳಿ ಬೆಚ್ಚಿಬಿದ್ದನು. ಹಿಂದಿರುಗಿ ನೋಡಲು ಆ ಯುವತಿಯರ ಪಲ್ಲಕ್ಕಿಯು ಒಂದು ಕಡೆ ಇಡಲ್ಪಟ್ಟಿದ್ದಿತು. ಬೋಯಿಗಳು ದಿಗ್ಭ್ರಾಂತರಾಗಿ ಓಡಿಹೋಗುತ್ತಿದ್ದರು. ಬಾದಷಹನೂ, ತಾನ್‌ಸೇನನೂ ತೀವ್ರಗತಿಯಿಂದ ಓಡಿ ಪಲ್ಲಕ್ಕಿಯ ಬಳಿಗೆ ಬಂದರು. ಆದರೆ ಅಲ್ಲೇನನ್ನು ನೋಡುತ್ತಾರೆ? ಹೃದಯಭೇದಕ ನಯನಭೀಕರ ದೃಶ್ಯ!

ಕಣ್ಣೆದಿರಿನಲ್ಲಿ ಒಂದು ಭಯಾನಕವಾದ ನೋಟವು ಎಸಗುತ್ತಿತ್ತು. ಪಲ್ಲಕ್ಕಿಯ ಒಳಭಾಗವೆಲ್ಲಾ ರಕ್ತದಿಂದ ತೊಯ್ದುಹೋಗಿದ್ದಿತು. ಎರಡು ರಕ್ತಪ್ಲಾವಿತ ಪುಷ್ಪತನುಗಳು ಅಸುವಳಿದು ಮಲಗಿದ್ದುವು. ಅಲ್ಲಿಯೇ ಒಂದು ಕಾಗದದ ಚೂರು ದೃಷ್ಟಿಗೆ ಬಿದ್ದಿತು. ಅದನ್ನು ಬಾದಷಹನು ಎತ್ತಿಕೊಂಡನು. "ಪತಿಯಾಜ್ಞಾವಿರುದ್ಧ ನಡೆಯುವುದರ ದುಷ್ಪರಿಣಾಮ" ಎಂದು ಬರೆದಿದ್ದಿತು.

ಪೂರ್ಣ ವಿದ್ಯಮಾನವನ್ನರಿಯಲು ನಾವಕಾಶವಾಗಲಿಲ್ಲ. ಅಷ್ಟರಲ್ಲಿಯೇ ಆ ಯುವತಿಯರ ಪತಿಯೂ ಗಾಬರಿಗೊಂಡು ಅಲ್ಲಿಗೆ ಓಡಿಬಂದನು. ಆತನ ಕರದಲ್ಲಿಯೂ ಒಂದು ಪತ್ರವಿದ್ದಿತು. ಅದನ್ನು ಆ ತರುಣಿಯರು ಮನೆಯಿಂದ ಬರುವಾಗ ಬರೆದಿಟ್ಟು ಬಂದಿದ್ದರು. ಅದರಲ್ಲಿ ಅವರು "ಪತಿದೇವಾ! ಪಾಪ ಕಾರ್ಯದಲ್ಲಿ ಪ್ರವೃತ್ತವಾಗುವ ಈ ಶರೀರಗಳು ಪುನಃ ತಮ್ಮ ಸೇವೆಗಾಗಿ ಹಿಂದಿರುಗಲಾರವು. ಬಾದಷಹನ ಸಮ್ಮುಖದಲ್ಲಿ ಮಲಹಾರವನ್ನು ಹಾಡ ಬೇಕಾದ ಕಠಿಣಪ್ರಸಂಗವು ಒದಗಿದೆ. ನಮ್ಮ ಮಹತ್ಪಾಪವನ್ನು ಮನ್ನಿಸಿರಿ. ಅಂತ್ಯಪ್ರಣಾಮ" ಎಂದು ಬರೆದಿದ್ದರು.

ಬಾದಷಹನೂ, ತಾನ್‌ಸೇನನೂ ಬಹುವಾಗಿ ರೋದಿಸಿದರು. ಈರ್ವ ಯುವತಿಯರಿಗೂ ಇಂಥಾ ದುರ್ಗತಿಯು ಸಂಪ್ರಾಪ್ತವಾದೀತೆಂದು ಅವರು

ಸ್ವಪ್ನದಲ್ಲಿಯೂ ತಿಳಿದಿರಲಿಲ್ಲ. ಬಾದಷಹನು ಈ ಮಹದನರ್ಥಕ್ಕೆ ತಾನೇ ಕಾರಣನೆಂದು ಭಾವಿಸಿಕೊಂಡು ಅನುತಾಪಪಡಲಾರಂಭಿಸಿದನು. ಮತ್ತು ತರುಣಿಯರ ದುರ್ಮರಣಕ್ಕಾಗಿ ತುಂಬಾ ಶೋಕಪಟ್ಟನು. ಆದರೆ ಕಾಲವು ಮೀರಿದನಂತರ ಯಾರೇನುಮಾಡಬಲ್ಲರು ? ಬಾದಷಹನು ಆ ರಮಣಿಯರ ಸ್ಮರಣಾರ್ಥವಾಗಿ ಒಂದು ಸುಂದರ ಭವನವನ್ನು ಕಟ್ಟಿಸಿದನು. ಅದಕ್ಕೆ ಸಂಗೀತ ಮಂದಿರವೆಂದು ಹೆಸರಿಟ್ಟನು. ತಾನ್‌ಸೇನನೂ ಆ ರಮಣಿಯರ ಸ್ಮರಣಾರ್ಥ ವಾಗಿ ಸಂಗೀತದಲ್ಲಿ ಒಂದು ಶಿಸ್ತನ್ನು ರೂಢಿಗೆ ತಂದನು. ಈ ಶಿಸ್ತಿನರೀತ್ಯಾ ಎಲ್ಲಿಯವರೆಗೆ ಈ ಜಗತ್ತಿನಲ್ಲಿ ಸಂಗೀತವು ಚಿರಸ್ಥಾಯಿಯಾಗಿರಬಲ್ಲದೋ! ಅಲ್ಲಿಯವರೆಗೂ ಆ ತರುಣಿಯರ ಹೆಸರೂ ಚಿರಸ್ಥಾಯಿಯಾಗಿರಬಲ್ಲದು. ಅವರಲ್ಲಿ ಓರ್ವಳ ಹೆಸರು "ತಾಸಿ." ಮತ್ತೋರ್ವಳ ಹೆಸರು "ನಾನಿ." ಈ ಹೆಸರು ಗಳನ್ನು ಜೀವಂತವಾಗಿರಿಸಲು ತಾನ್‌ಸೇನನು "ಸಂಗೀತಾರಂಭದಲ್ಲಿ ಪ್ರತಿ ಯೋರ್ವ ಗಾಯಕನೂ 'ತೋಂ ತಾನಾ ನಾನಾ' ಎಂದು ರಾಗಲಾಪನೆಗೈಯ್ಯ ಬೇಕೆಂಬ ವಿಷಯವನ್ನು ರೂಢಿಗೆ ತಂದನು. ಗಾಯಕರು ಇಂದೂ ಕೂಡ ಗಾನಕಲಾಚತುರೆಯರಾದ ತರುಣಿಯರ ಸ್ಮರಣಾರ್ಥವಾಗಿ ತಾನ್‌ಸೇನನ ಆಜ್ಞೆ ಯನ್ನು ಪರಿಪಾಲಿಸುತ್ತಿರುವರು.

# ಕರ್ಣಾವತಿ*

"ಏನು! ಚಾಂದ್‌ಖಾನ್ ಚಿತೋಡಿನ ಕೋಟೆಯಲ್ಲಿ ರಕ್ಷಣೆಯನ್ನು ಪಡೆದಿದ್ದಾನೆಯೇ? ನನ್ನ ಸಹೋದರನಾಗಿದ್ದು ನನ್ನನ್ನು ಸಿಂಹಾಸನದಿಂದು ರುಳಿಸಿ, ತಾನೇ ರಾಜ್ಯಾಧಿಪತಿಯಾಗಬೇಕೆಂದು ಪಿತೂರಿಯನ್ನು ನಡೆಸಿದ ದ್ರೋಹಿಗೆ, ಚಿತೋಡಿನವರು ಆಶ್ರಯವನ್ನು ಕೊಟ್ಟಿದ್ದಾರೆಯೇ?" ಬಹಾದುರ್ ಷಹ ಕ್ಷಣಕಾಲ ತಟಸ್ಥನಾದನು. ಅವನ ಮುಖವು ಕೆಂಪೇರಿತು. ಅವನ ಹುಬ್ಬುಗಳು ಗಂಟಿಕ್ಕಿದುವು. ಅವನು ಕ್ರೋಧಪರವಶನಾಗಿ ಆರ್ಭಟಿಸಲಾರಂಭಿಸಿದನು. "ಮುಲ್ಲೂಖಾನ್! ಈ ಪ್ರಕರಣ ನನ್ನ ಅಧಿಕಾರಕ್ಕೆ ಉಗ್ರ ಪ್ರತಿಭಟನೆಯಂತಿದೆ. ನನ್ನ ಕೀರ್ತಿ ಗೌರವಗಳಿಗೆ ಕಳಂಕದಂತಿದೆ. ಪೂರ್ವ ವಿದ್ವೇಷವನ್ನು ಕೆರಳಿಸುತ್ತಿದೆ. ಮಾದುಹೋಗಿದ್ದ ವ್ರಣದಲ್ಲಿ ಈಗ ಯಾತನೆಯು ಕಂಡುಬರುತ್ತಿದೆ. ಸೊಕ್ಕಿದ ಚಿತೋಡಿನವರಿಗೆ ಅವಸಾನಕಾಲವು ಸನ್ನಿಹಿತವಾಯಿತೆಂದು ಭಾವಿಸಿಕೊಳ್ಳಿ. ಪ್ರತೀಕಾರಕ್ಕೆ ಇದೇ ಸಕಾಲ. ಸಮ್ಮ ಸೈನಿಕರಿಗೆ ಸಿದ್ಧತೆಯ ಆಜ್ಞೆಯನ್ನು ಕೊಡಿರಿ. ಈ ದಿನವೇ ಧಾಳಿ ನಡೆಸಲು ಚಿತೋಡಿನ ಕಡೆಗೆ ಹೊರಡಬೇಕಾಗಿದೆ."

"ಆದರೆ ಮಹಾಪ್ರಭು! ಚಿತೋಡಿನವರು ಕೆಚ್ಚೆದೆಯ ಶೂರರು. ಪ್ರತಿಭಟನಾ ಸಮರ್ಥರು. ಜೀವದ ಹಂಗುದೊರೆದು ಹೋರಾಡುವುದರಲ್ಲಿ ಇತಿಹಾಸ ಪ್ರಸಿದ್ಧರು. ಮೇಲಾಗಿ ಕೋಟೆಯೂ ಬಹಳ ಭದ್ರವಾಗಿದೆ. ಹೋರಾಟವು ಸುಲಭಸಾಧ್ಯವಲ್ಲ. ವಿಜಯಪ್ರಾಪ್ತಿಗಾಗಿ ದೀರ್ಘಕಾಲ ಬೇಕಾಗುವುದು. ವಿಜಯಲಾಭವೂ ಕೂಡ ಸಂದಿಗ್ಧವಾದುದೇ."

ಬಹಾದುರನು ವ್ಯಂಗ್ಯವಾಗಿ ನಗುತ್ತ "ಮುಲ್ಲೂಖಾನ್! ನೀವು ಶತ್ರುವಿನ ಸಾಮರ್ಥ್ಯವರ್ಣನೆಯಲ್ಲಿ ಸಮ್ಮವರನ್ನು ಸಂಪೂರ್ಣವಾಗಿಯೂ ಮರೆತಿರುವಿರಿ. ನಿಮ್ಮ ಬಹಾದುರನು ರಣಕಂಠೀರವನೆಂದು ತಿಳಿದುಕೊಳ್ಳಿ. ಆತನ ಒಬ್ಬೊಬ್ಬ ಸೈನಿಕನೂ ಸಮರಶಾರ್ದೂಲನೆಂದು ಭಾವಿಸಿಕೊಳ್ಳಿ. ನಾನು ಚಿತೋಡಿನವರನ್ನು ರಣರಂಗದಲ್ಲಿ ತಳವೂರಿ ನಿಲ್ಲಲೂ ಕೂಡ ಆಸ್ಪದಕೊಡುವುದಿಲ್ಲ. ಇನ್ನು

*ಮುಜಫ್ಫರ್ ಹುಸೇನ್ (Muzaffar Hussain)ರವರ ಲೇಖನಿಯ ಆಧಾರದಿಂದ.

ಕೋಟೆಯ ವಿಚಾರ – ಅದು ಎಷ್ಟೇ ಭದ್ರವಾಗಿರಲೊಲ್ಲದೇಕೆ? ನಮ್ಮ ಸಹಾಯಕ್ಕಾಗಿ ಪೋರ್ಚುಗೀಸರ ಫಿರಂಗಿದಳವು ಸಂಸಿದ್ಧವಾಗಿ ನಿಂತಿದೆ. ನಿಮಗೆ ಭರವಸೆಯಿರಲಿ. ವಿಜಯವು ನಮ್ಮ ಪಾಲಿನದು. ನೀವು ಸಂಪೂರ್ಣವಾಗಿಯೂ ನಿರ್ಭೀತರಾಗಿರಿ."

ಹಠಾತ್ತನೇ ಸಾಧುಶ್ರೇಷ್ಠರೂ, ಕರುಣಾಶೀಲರೂ, ವಿಶ್ವಬಂಧುಗಳೂ, ಬಹಾದುರನ ಧಾರ್ಮಿಕ ಗುರುಗಳೂ ಆದ ಶೇಖ್‌ಸಾಹೇಬ್ ಔಲಿಯಾರವರು ಪ್ರವೇಶಿಸಿದರು. ಬಹಾದುರ್‌ಷಹನು ಭಕ್ತಿಯಿಂದ ವಂದಿಸಿ ಗುರುಗಳನ್ನು ಕರೆತಂದು ಉನ್ನತಾಸನದ ಮೇಲೆ ಕೂರಿಸಿ ಪಕ್ಕದಲ್ಲಿಯೇ ಕೈಗಳನ್ನು ಕಟ್ಟಿಕೊಂಡು ತಲೆಯನ್ನು ತಗ್ಗಿಸಿ ನಿಂತನು. ಗುರುಗಳು ಶಿಷ್ಯನ ಕಡೆಗೆ ತಿರುಗಿ "ಬಹಾದುರ್! ನನ್ನ ಹಿತೋಪದೇಶವು ನಿನ್ನ ಗಮನದಲ್ಲಿರುವುದೇ? ನನ್ನಾಜ್ಞೆಯನ್ನು ನೀನು ಪರಿಪಾಲಿಸುತ್ತಿರುವೆಯಾ?" ಎಂದು ಪ್ರಶ್ನಿಸಿದರು.

"ಗು ರು ವ ರೇ ಣ್ಯ! ತಮ್ಮ ಹಿತೋಪದೇಶವು ಅನುಕರಣಯೋಗ್ಯವು. ತಮ್ಮಾಜ್ಞೆಯು ನನಗೆ ಶಿರೋಧಾರ್ಯವು. ನಾನು ಸದಾ ತಮ್ಮಾಜ್ಞಾನುವರ್ತಿಯಾಗಿಯೇ ನಡೆಯುತ್ತಿರುವೆನು" ಎಂದು ವಿನಮ್ರನಾಗಿ ಉತ್ತರವನ್ನು ಕೊಟ್ಟನು.

"ಹಾಗಾದರೆ ನಿಸ್ಸಹಾಯಕ ಚಿತೋಡಿನ ಮೇಲೇಕೆ ಧಾಳಿ ನಡೆಸುವ ಹವಣಿಕೆಯಲ್ಲಿರುವೆ?"

"ಇದು ವ್ಯಾವಹಾರಿಕ ವಿಚಾರವು. ಪರರಾಜ್ಯಗಳ ಸೂಕ್ಷ್ಮಾಸೂಕ್ಷ್ಮ ಪರಿಸ್ಥಿತಿಯನ್ನರಿತುಕೊಂಡು ವಿಸ್ತರಣಕಾರ್ಯವನ್ನು ಕೈಗೊಳ್ಳುವುದೇ ರಾಜಕೀಯ ರಹಸ್ಯವು. ಇದು ಜಗದಾದಿಯಿಂದಲೂ ನಡೆಯುತ್ತಲೇ ಬಂದಿದೆ. ಜಗದಾಂತ್ಯದವರೆಗೂ ನಡೆಯುತ್ತಲೇ ಹೋಗಬೇಕಾಗಿದೆ."

"ಅವರೆ ರಾಜ್ಯವಿಸ್ತರಣ ಕಾರ್ಯವು ಯುದ್ಧದಿಂದಲೇ ತೀರ್ಮಾನವಾಗಬೇಕಲ್ಲವೇ?"

"ನಿಶ್ಚಯ. ಯುದ್ಧಾಸಕ್ತಿಯೇ ರಾಜತ್ವದ ಸಲ್ಲಕ್ಷಣವು. ಯುದ್ಧವೇ ರಾಜನ ಅಭಿರುಚಿಯು. ಯುದ್ಧಕೇಳಿಯಲ್ಲಿಯೇ ರಾಜನಿಗೆ ಆಪ್ಯಾಯನವು. ಆದ್ದರಿಂದ ರಾಜನಾದವನು ಯುದ್ಧವನ್ನು ಮಾಡಲೇಬೇಕು. ಇದು ರಾಜಧರ್ಮವು."

"ಭೇಷ್! ಬಹಾದುರ್, ನೀನು ರಾಜಧರ್ಮವನ್ನು ಚನ್ನಾಗಿ ಅರಿತು ಕೊಂಡಿರುವೆ. ಯುದ್ಧದಲ್ಲಿಯೇ ರಾಜನಿಗೆ ಅಭಿರುಚಿಯಿರುವುದಾದರೆ, ಯುದ್ಧ ಕೇಳಿಯಲ್ಲಿಯೇ ರಾಜನು ಆಪ್ಯಾಯನವನ್ನು ಕಾಣುವುದಾದರೆ ಬಾಧಕವಿಲ್ಲ. ಆದರೆ ರಾಜನು ತನ್ನ ಆಸಕ್ತಿಗಾಗಿ ಮಾಡುವ ಯುದ್ಧದ ಪರಿಣಾಮವೇನು ಬಲ್ಲೆಯಾ? ಅಸಂಖ್ಯಾತ ನಿರಪರಾಧಿಗಳು ನಿಷ್ಕಾರಣವಾಗಿ ವಧಿಸಲ್ಪಡುವರು. ನಿರ್ದೋಷಿಗಳ ರಕ್ತವು ಪ್ರವಾಹದಂತೆ ಹರಿಯುವುದು. ಪ್ರಶಾಂತ ನಗರಗಳು ಪ್ರಳಯಾಗ್ನಿಗಾಹುತಿಯಾಗುವುವು. ಮನಾಹ್ಲಾದಕರ ಸುಂದರೋದ್ಯಾನಗಳು ಸ್ಮಶಾನಸದೃಶವೆನಿಸುವುವು. ಜನಗಳಿಗೂ, ಜೀವರಾಶಿಗಳಿಗೂ ಪ್ರಾಣಾಧಾರ ವಾದ ಬೆಳೆಗಳು ನಾಶಹೊಂದುವುವು. ಘೋರವಾದ ಕ್ಷಾಮವು ಮೈದೋರಿ ತನ್ನ ವಿಷಭರಿತ ವಿಕರಾಲ ನಖರಗಳಿಂದ ಜನತೆಯ ಹೃದಯವನ್ನು ಪರಚಿ ವಕ್ಷರುಧಿರವನ್ನು ಪಾನಮಾಡುವುದು. ಕಂಠನಾಳವನ್ನು ಕಿತ್ತು ಪ್ರಾಣವಾಯು ವನ್ನು ಸೇವನೆಮಾಡಿಬಿಡುವುದು. ಭಯ! ವಿಪ್ಲವ! ಆರ್ತನಾದ! ಆಕ್ರಂದನ! ಕೊಲೆ! ಸುಲಿಗೆ! ದರೋಡೆ! ಎಲ್ಲೆಲ್ಲಿಯೂ ಸರ್ವನಾಶವೇ ಪ್ರಳಯಭಯಂಕರ ವಿಗಡನಾಟ್ಯವಾಡುವುದು. ನೋಡಿದೆಯಾ ಬಹಾದುರ್! ರಾಜನು ಯುದ್ಧ ಕೇಳಿಯನ್ನು ಬಯಸಿ ಪರಮಾತ್ಮನ ಸುಂದರ ಸೃಷ್ಟಿಯಲ್ಲಿ ಎಂತಹ ಅನ್ಯಾಯ ವನ್ನು ಮಾಡುವನು."

"ಇದು ಅಪರಿಹಾರ್ಯವು, ಹೀಗಾಗಲೇಬೇಕಾಗಿದೆ. ಹೀಗಾಗುತ್ತಲೇ ಬಂದಿದೆ."

"ಮೂರ್ಖಾ! ರಾಜನು ಪರಮಾತ್ಮನ ಪ್ರತಿನಿಧಿಯು. ಭಗವದಾಶಯ ವನ್ನು ಹೊತ್ತು ಅದನ್ನು ಪರಿಪೂರ್ಣಗೊಳಿಸಲು ಅವತರಿಸಿರುವ ಮಹಾನು ಭಾವನು. ಆದ್ದರಿಂದ ತ್ರಿಭುವನರಕ್ಷಕ ಪರಮಾತ್ಮನು ನಿಖಿಲ ಮಾನವ ಕುಲವನ್ನು ಯಾವ ಕೃಪಾಪೂರ್ಣ ದೃಷ್ಟಿಯಿಂದ ಅವಲೋಕಿಸುತ್ತಿರುವನೋ, ಅದೇ ದಯಾರ್ದ್ರ ದೃಷ್ಟಿಯಿಂದ ನೀನೂ ಸಕಲ ಮಾನವರನ್ನು ಕಾಣಬೇಕು. ರಾಜ್ಯಸೂತ್ರಗಳನ್ನು ತನ್ನ ಕೈಯಲ್ಲಿ ಹಿಡಿದಿರುವವನು ಜಾತಿ, ಮತ, ಪಂಥಗಳ ವಿಭೇದದಿಂದಲೂ, ಕ್ರೋಧ, ದ್ವೇಷ, ನಿರ್ದಯೆ, ಪ್ರತೀಕಾರದ ದೋಷ ದಿಂದಲೂ, ಸಂಪೂರ್ಣವಾಗಿಯೂ ವಿಹೃತನಾಗಿರಬೇಕು. ನೀನು ಶಾಂತಿ ಪಾಲನೆಗಾಗಿ ಜನ್ಮಧಾರಣಮಾಡಿರುವೆ. ಶಾಂತಿರಕ್ಷಣೆಯೇ ನಿನ್ನ ಜೀವನದ

ಉಪಲಕ್ಷ್ಯವಾಗಿರಬೇಕು. ಪರಮಾತ್ಮನು ನಿನ್ನನ್ನು ಯಾವ ಮಹಾತ್ಕಾರ್ಯ ಸಾಧನೆಗಾಗಿ ಸೃಜಿಸಿದ್ದಾನೆಯೋ, ಅದರ ಘನತೆಯನ್ನು ಅರಿತುಕೊಂಡು ಅದರ ಪರಿಪೂರ್ಣತೆಗಾಗಿ ಶ್ರಮಿಸು. ಚಿತೋಡಿನ ಮೇಲೆ ಧಾಳಿಯನ್ನು ನಡೆಸುವ ದುರಭಿಲಾಷೆಯನ್ನು ಮೊದಲು ಹೃದಯದಿಂದ ಕಿತ್ತುಹಾಕು."

"ಗುರುವರೇಣ್ಯ! ತಾವಿರುವುದು ಧಾರ್ಮಿಕ ಜಗತ್ತಿನಲ್ಲಿ. ಅಲ್ಲಿ ಸಾತ್ವಿಕ ಜೀವನ, ಶಾಂತಿಪಾಲನ, ಋಜುಮಾರ್ಗಾನುಕರಣ, ತತ್ವಾಧ್ಯಾಪನ, ಪಾರಮಾರ್ತ್ಮಿಕ ವಿಚಾರಮಥನ ಎಲ್ಲವೂ ಸಾಧ್ಯವು. ಆದರೆ ನಾವಿರುವುದು ವ್ಯಾವಹಾರಿಕ ಜಗತ್ತಿನಲ್ಲಿ. ಇಲ್ಲಿ ಉತ್ತಮಾಧಮ ಕೃತಿಗಳೆಲ್ಲವೂ ಸಮಾನವೆಂದು ಭಾವಿಸಲ್ಪಡುವುವು. ರಾಜ್ಯತಂತ್ರದ ಹಿತದೃಷ್ಟಿಯಿಂದ ಶಾಂತಿಯನ್ನೂ ಸ್ಥಾಪಿಸಬೇಕಾಗುತ್ತದೆ. ಯುದ್ಧವನ್ನೂ ಮಾಡಬೇಕಾಗುತ್ತದೆ."

"ಹಾಗಾದರೆ ನೀನು ಯುದ್ಧಾಭಿಲಾಷೆಯನ್ನು ತೊರೆಯುವುದಿಲ್ಲವೇ? ಚಿತೋಡಿನ ಮೇಲಣ ಧಾಳಿಯನ್ನು ನಿಲ್ಲಿಸುವುದಿಲ್ಲವೇ?"

"ಚಿತೋಡ್! ಚಿತೋಡ್ ಎಂದೊಡನೆಯೇ ನನ್ನ ಹೃದಯದಲ್ಲೇನು ಕ್ರಾಂತಿಯುಂಟಾಗುತ್ತದೆಯೋ, ಅದನ್ನು ತಾವು ಅರಿಯಲಾರಿರಿ. ಅದರ ಆವೇಗವನ್ನು ಸ್ವತಃ ನಾನೇ ತಡೆಯಲಾರದವನಾಗಿದ್ದೇನೆ. ಅಬ್ಬಾ! ಚಿತೋಡಿನ ಹಿಂದೂಗಳು ನಮಗುಂಟುಮಾಡಿರುವ ಅನ್ಯಾಯ! ಪಡಿಸಿರುವ ಅಪಮಾನ! ಮರೆಯಲು ಸಾಧ್ಯವೇ? ರಾಣಾಸಂಗ ನನ್ನ ಪೂಜ್ಯ ಪಿತರಾದ ಮುಬಾರಕ್ ಷಹರನ್ನು ಸೋಲಿಸಿ ಬಂಧನದಲ್ಲಿಟ್ಟ ವಿಚಾರ, ಅವರು ಬಂಧನದಲ್ಲಿಯೇ ಕೊರಗಿ ಕೊರಗಿ ನತ್ತ ವಿಚಾರ ತಮಗೇನೂ ತಿಳಿಯದಿಲ್ಲ. ಆ ಪ್ರಸಂಗವನ್ನು ಸ್ಮರಿಸಿಕೊಂಡೆನಾದರೆ, ಈಗಲೂ ನನಗೆ ಪ್ರಜ್ಞೆಯು ಶೂನ್ಯವಾದಂತಾಗುತ್ತದೆ. ಪ್ರತೀಕಾರದ ಜ್ವಾಲೆ ನನ್ನ ಹೃದಯದಲ್ಲಾವಿರ್ಭವಿಸಿ ನನ್ನ ಸರ್ವಾಂಗವನ್ನೂ ದಹಿಸುತ್ತದೆ. ನಾನು ಇದರ ಸೇಡನ್ನು ತೀರಿಸಿಕೊಳ್ಳದಿರುವೆನೇ? ಎದೆ ಚಾಚಿ ನಿಂತಿರುವ ಚಿತೋಡಿನ ಕೋಟೆಯನ್ನು ನಾನು ಭೂಶಾಯಿಗೊಳಿಸುವೆನು. ಚಿತೋಡಿನವರ ಉನ್ನತ ಸೌಧಗಳನ್ನೆಲ್ಲಾ ಧೂಳೀಧೂಸರಿತಗೊಳಿಸುವೆನು. ಅವರ ಮಂದಿರಗಳ ಒಂದೊಂದು ಕಲ್ಲನ್ನೂ ಕೂಡ ಕಿತ್ತು ಬಿಸುಡುವೆನು. ಚಿತೋಡಿನ ಭೂಮಿಯಲ್ಲಿ ಪ್ರಳಯವನ್ನೇ ಎಬ್ಬಿಸುವೆನು. ಭೂಪಟದಿಂದಲೇ ಚಿತೋಡಿನ ಹೆಸರನ್ನು ಅಳಿಸಿಬಿಡುವೆನು."

“ಪ್ರಜ್ಞೆಗೆಟ್ಟು ಹುಚ್ಚನಂತೆ ಮಾತಾಡಬೇಡ ಬಹಾದುರ್, ರಾಣಾಸಂಗ ಸಮಾನಬಲರಾದ ಮುಬಾರಕ್‌ಷಹರನ್ನು ರಣರಂಗದಲ್ಲಿ ಇದಿರಿಸಿದನು. ವೀರ ಸಹಜವಾದ ಹೋರಾಟವನ್ನು ನಡೆಸಿದನು. ಆದರೆ ನಿನ್ನಂತೆ ರಾಕ್ಷಸೀ ಮಹತ್ವಾಕಾಂಕ್ಷೆಯಿಂದ ಇದಿರಾಳಿಯ ನಿಸ್ಸಹಾಯಕ ಸೂಕ್ಷ್ಮಪರಿಸ್ಥಿತಿಯಲ್ಲಿ ಪ್ರಬಲ ಧಾಳಿಯನ್ನು ನಡೆಸಲು ಯತ್ನಿಸಲಿಲ್ಲವಲ್ಲ? ನಗರಗಳನ್ನು ಅಗ್ನಿಗಾಹುತಿ ಮಾಡುವಂಥ ಪೈಶಾಚಿಕ ಮನೋಭಾವವನ್ನು ತಾಳಲಿಲ್ಲವಲ್ಲ?”

“ನನಗರಿವಾಗಲೊಲ್ಲದು? ತಾವು ಮುಸಲ್ಮಾನರು. ಇಸ್ಲಾಂ ಧರ್ಮದ ಪರಿಪಾಲಕರು. ಚಿತೋಡಿನವರು ಹಿಂದೂಗಳು. ತಾವೇಕೆ ಅವರ ಪಕ್ಷಪಾತಿಗಳಾಗುವಿರಿ? ನಾನಂತೂ ಅವರನ್ನು ಅವರ ಧರ್ಮದ ಸಹಿತ ಮೂಲೋತ್ಪಾಟನ ಮಾಡಬೇಕೆಂದಿರುವೆನು.”

“ನಾವು ಮುಸಲ್ಮಾನರಾದರೇನು? ಚಿತೋಡಿನವರು ಹಿಂದೂಗಳಾದರೇನು? ಸರ್ವರನ್ನೂ ಸೃಜಿಸಿದ ಪರಮಾತ್ಮನು ಒಬ್ಬನೇ ಎಂಬುದನ್ನು ಮರೆತೆಯಾ? ‘ಯಾವ ಮುಸಲ್ಮಾನನು ಜಿಮ್ಮಿ (ಮುಸಲ್ಮಾನೇತರರು) ಗಳನ್ನು ಹಿಂಸಿಸುತ್ತಾನೆಯೋ, ಅವನು ನನ್ನನ್ನು ಹಿಂಸಿಸಿದಂತೆ’ ಎಂದು ಮೊಹಮ್ಮದ್ ಪೈಗಂಬರ್‌ರವರು ಸೂಚಿಸಿರುವ ಪರಾಮರ್ಶವನ್ನು ಗಮನದಲ್ಲಿಡು. ‘ದೈವಾನುಗ್ರಹದಿಂದ ಧರ್ಮಸಂಸ್ಥಾಪಕರನ್ನು ಪಡೆಯದಿರುವ ಯಾವ ಜನಪದವೂ ಜಗತ್ತಿನಲ್ಲಿಲ್ಲ. ಸರ್ವ ಧರ್ಮಸಂಸ್ಥಾಪಕರೂ ಪರಮಾತ್ಮನಿಂದಲೇ ಅವತೀರ್ಣರಾದವರು. ಆದ್ದರಿಂದ ಆ ಎಲ್ಲ ಧರ್ಮಸಂಸ್ಥಾಪಕರಲ್ಲಿಯೂ ಗೌರವವನ್ನು ತೋರಿಸಿ, ಸಕಲ ಧರ್ಮಾನುಯಾಯಿಗಳೊಡನೆಯೂ ಸೋದರವಾತ್ಸಲ್ಯದಿಂದ ನಡೆಯಬೇಕು’ ಎಂದು ಮೊಹಮ್ಮದ್‌ಪೈಗಂಬರ್‌ರವರು ಬೋಧಿಸಿಲ್ಲವೇ? ‘ಹೇ ಮೊಹಮ್ಮದ್! ನಿನಗೆ ನನ್ನಿಂದ ಅನುಗ್ರಹಿಸಲ್ಪಟ್ಟಿರುವ ಇಸ್ಲಾಂ ಧರ್ಮದಲ್ಲಿಯೂ, ಇತರರಿಗೆ ಕರುಣಿಸಲ್ಪಟ್ಟಿರುವ ಧರ್ಮಗಳಲ್ಲಿಯೂ ಗೌರವವನ್ನಿಟ್ಟು, ಅವೆಲ್ಲವೂ ನನ್ನಿಂದಲೇ ಅವತೀರ್ಣವಾದುವುಗಳೆಂದು ಯಾರು ನಂಬುತ್ತಾರೆಯೋ, ಅವರೇ ನಿಜವಾದ ಮುಸಲ್ಮಾನರು’ ಎಂದು ಚತುರ್ದಶಭುವನಸಂಪೂಜಿತ ಅಲ್ಲಾಃ ಪೂಜ್ಯಗ್ರಂಥವಾದ ಖುರಾನಿನ ಮುಖೇನ ಅನುಜ್ಞೆಯನ್ನು ಸೂಚಿಸಿಲ್ಲವೇ? ‘ಅನ್ಯಮತ ಸಹಿಷ್ಣುತೆಯನ್ನು ತೋರಿಸಬೇಕು. ಅನ್ಯ ಧರ್ಮೀಯರ ಆರಾಧನಾ ಸ್ವಾತಂತ್ರ್ಯಕ್ಕೆ ಭಂಗ ತರಕೂಡದು.

ಭಗವದ್ಭಕ್ತರು ಮಂದಿರಗಳಲ್ಲಿ ದೈವಧ್ಯಾನದಲ್ಲಿ ತಾದಾತ್ಮ್ಯರಾಗಿರುತ್ತಾರೆ. ಅವರ ದೈವಧ್ಯಾನಾಸಕ್ತಿಗೆ ಆತಂಕವನ್ನುಂಟುಮಾಡಬಾರದು. ಅನ್ಯಮತ ಬೋಧಕರನ್ನೂ, ಗುರುಗಳನ್ನೂ ಅವಹೇಳನಮಾಡಬಾರದು. ತಿರಸ್ಕಾರದೃಷ್ಟಿಯಿಂದ ನೋಡಬಾರದು. ಅವರ ಪೂಜ್ಯಗ್ರಂಥಗಳನ್ನು ನಿಕೃಷ್ಟವಾಗಿ ಕಾಣಬಾರದು. ಅವರ ಆರಾಧನಾಮಂದಿರಗಳಿಂದ ಮಣ್ಣನ್ನಾಗಲೀ, ಕಲ್ಲನ್ನಾಗಲೀ ಕೀಳಬಾರದು. ಇಂತಹ ಅನುಚಿತ ವರ್ತನೆಗಳನ್ನು ಮಾಡುವವನು ಮುಸಲ್ಮಾನನೇ ಅಲ್ಲ. ಅವನು ದೈವದ್ರೋಹಿಯು. ಅವನು ನನ್ನ ಕೃಪಾದೃಷ್ಟಿಯಿಂದ ಕಳಚಿಬೀಳುವನು' ಎಂದು ಮೊಹಮ್ಮದ್‌ಪೈಗಂಬರ್‌ರವರು ಎಚ್ಚರಿಕೆಯನ್ನು ಸೂಚಿಸಿಲ್ಲವೇ ? ಕ್ರೂರ ಕರ್ಮಿಗಳ ವಿಚಾರವಂತಿರಲಿ. 'ಅಶುದ್ಧ ವಚನಗಳನ್ನಾಡುವವನು ಮುಸಲ್ಮಾನನಲ್ಲ' ಎಂದು ಪೂಜ್ಯಗ್ರಂಥ ಖುರಾನ್ ಸಾರುತ್ತಿಲ್ಲವೇ ? ಚಿತೋಡಿನವರನ್ನು ಅವರ ಧರ್ಮದ ಸಹಿತ ಮೂಲೋತ್ಪಾಟನ ಮಾಡಬೇಕೆಂದಿರುವ ಅಭೀಷ್ಟವನ್ನು ವ್ಯಕ್ತಗೊಳಿಸಿರುವೆ. ಬಹಾದುರ್ ! ವಿದ್ವೇಷದ ಹಾಗೂ ಪ್ರಕೋಪದ ಅಮಲಿನಲ್ಲಿ ಯುಕ್ತಾಯುಕ್ತ ವಿಮರ್ಶನ ಚೇತನವನ್ನೂ ಕಳೆದುಕೊಳ್ಳಬೇಡ. ಇದುವರೆಗೆ ಯಾರೂ ಧರ್ಮನಾಶನ ಕಾರ್ಯದಲ್ಲಿ ಕೃತರಾಗಲಿಲ್ಲ. ಏಕೆಂದರೆ ಧರ್ಮವು ಅವಧ್ಯವು, ಅಜೀರ್ಣವು, ಅವಿನಶ್ವರವು, ದುರ್ದಮನೀಯವು, ಚಿರಂತನವು. ಅದು ಎಂದೂ ಮಾನವಸತ್ತೆಗೆ ಅಧೀನವಾಗದು. ಧರ್ಮದ ಮೇಲೆ ನಡೆಯುವ ಧಾಳಿಯು ಪತಂಗಾಭಿಯೋಗದಂತೆ ವ್ಯರ್ಥವು. ಅಪ್ರಯೋಜಕವು, ಆತ್ಮಹತ್ಯೋಪಮಾನವು. ಚಂದ್ರನ ಅಮೃತ ಕಿರಣದಂತೆ ಪ್ರಶಾಂತವಾಗಿರುವ ಧರ್ಮದ ಮೇಲೆ ಧಾಳಿಯು ನಡೆದರೆ, ಅದು ಸೂರ್ಯನ ಚಂಡಕಿರಣಗಳಂತೆ ಪ್ರಖರವೂ, ದುರ್ನಿರೀಕ್ಷ್ಯವೂ ಆಗುತ್ತ ಹೋಗುವುದು. ಜಗತ್ತಿನಲ್ಲಿರುವ ಸರ್ವಧರ್ಮಾನುಗಾಮಿಗಳೂ ಗಮನಿಸಬೇಕಾದ ಅಂಶ[illegible]ದರೆ, ಅವರು ಮೊದಲು ಮಾನವಧರ್ಮಾನುವರ್ತಿಗಳಾಗಬೇಕು. ಮಾನವಧರ್ಮದ ಪ್ರತೀಕರಾಗಿ, ಅನಂತರ ವಿಶಿಷ್ಟ ಧರ್ಮಪರಿಪಾಲನಾಸಕ್ತರಾಗಬೇಕು. ಆದ್ದರಿಂದ ಬಹಾದುರ್ ! ನೀನು ಮೊದಲು ಮಾನವ ಧರ್ಮಮೂರ್ತಿ[illegible] ತರುವಾಯ ಇಸ್ಲಾಂಧರ್ಮದ ದಿವ್ಯಾಂಬರವನ್ನು ಧಾರಣಮಾಡು. ಇಸ್ಲಾಮಿನ ಉದಾತ್ತ ತತ್ವರತ್ನಮಾಲಾಪನ್ನನಾಗು. ಆಗ ಪರಮಾತ್ಮನು [illegible]ಲ್ಲಿ ಪ್ರಸನ್ನನಾಗುವನು. ಗುರುದೇವನು ಸಂಪ್ರೀತ

ನಾಗುವನು. ಅನಂತರ ವಿಶ್ವಜೀವಿಗಳೆಡೆಗೆ ದೃಷ್ಟಿಯನ್ನು ಹರಿಸಿನೋಡು. ಏನು ನಿನ್ನ ಮನವು ಚಿತೋಡಿನ ಮೇಲೆ ಧಾಳಿಯನ್ನು ನಡೆಸಬೇಕು, ಚಿತೋಡಿನವರನ್ನು ಮೂಲೋತ್ಪಾಟನಮಾಡಬೇಕು, ಅವರ ಧರ್ಮವನ್ನು ಉಧ್ವಸ್ತಗೊಳಿಸಬೇಕೆಂದು ಆಶಿಸುವುದೇ? ಇಲ್ಲ, ಎಂದಿಗೂ ಇಲ್ಲ. ಹೇಳು ಬಹಾದುರ್! ಏನು ಯೋಚಿಸುತ್ತಿರುವೇ?"

ಬಹಾದುರನು ತಲೆಯನ್ನು ತಗ್ಗಿಸಿಕೊಂಡು ಕ್ಷಣಕಾಲ ತಟಸ್ಥನಾಗಿ ನಿಂತನು. ಏನನ್ನು ಯೋಚಿಸಿಕೊಂಡನೋ, ಮುಖವೆತ್ತಿ ಶೇಖ್‌ಸಾಹೇಬರನ್ನು ನೋಡುತ್ತ "ಗುರುವರೇಣ್ಯ! ತಮ್ಮ ಹಿತೋಪದೇಶವು ಶಿಷ್ಟಮಾನ್ಯವು. ತಮ್ಮ ದಿವ್ಯ ಜ್ಞಾನಪ್ರಬೋಧದಿಂದ ನನ್ನ ಅಜ್ಞಾನವು ಅಳಿಯಿತು. ನನ್ನ ಅಂತಃ ಚಕ್ಷುಗಳು ಉನ್ಮೀಲನವಾದುವು. ತಮ್ಮ ಹಿತೋಕ್ತಿಯಂತೆ ನಡೆಯುತ್ತೇನೆ. ನಾನು ಚಿತೋಡಿನ ಮೇಲೆ ಧಾಳಿಯನ್ನು ನಡೆಸುವುದಿಲ್ಲ. ತಾವು ನಿಶ್ಚಿಂತ ರಾಗಿರಿ" ಎಂದನು.

ಶೇಖ್‌ಸಾಹೇಬರ ಮುಖವು ಅರಳಿತು. ಅವರು ಹರ್ಷವದನರಾಗಿ ತಮ್ಮ ಪೀಠದಿಂದೇಳುತ್ತ, ಆಶೀರ್ವಾದದ ಹಸ್ತವನ್ನೆತ್ತಿ "ಮಗನೇ! ನಿನಗೆ ಸರ್ವ ಶುಭಮಂಗಳಗಳೂ ಸಂಪ್ರಾಪ್ತವಾಗಲಿ. ನಿನ್ನ ಸರ್ವಾಭೀಷ್ಟಗಳಲ್ಲಿಯೂ ಸಿದ್ಧಿಯುಂಟಾಗಲಿ" ಎಂದು ಆಶೀರ್ವದಿಸಿ ಹೊರಟರು. ಪುನಃ ಹಿಂದಿರುಗಿ "ಚಿತ್ತಚಾಂಚಲ್ಯದಿಂದ ಅನುಚಿತಕಾರ್ಯಕ್ಕೆ ಕೈಹಾಕಬೇಡ. ಚಿತೋಡಿನ ಮೇಲೆ ಉಪಪ್ಲವವನ್ನು ನಡೆಸುವ ಅನಿಷ್ಟಯೋಚನೆಗೆ ಮನವನ್ನು ಸೂರೆಗೊಡಬೇಡ. ಎಚ್ಚರಿಕೆ! ಚಿತೋಡಿನ ನಾಶದಲ್ಲಿಯೇ ನಿನ್ನ ಸರ್ವನಾಶವೂ ಹೆಣೆದುಕೊಂಡಿದೆಯೆಂಬುದನ್ನು ಮರೆಯಬೇಡ" ಎಂದು ಹೇಳಿ ಹೊರಟು ಹೋದರು.

ಬಹಾದುರನು ಉದ್ವಿಗ್ನನಾದನು. ಅವನ ಮನದಲ್ಲಿ ವಿವಿಧ ವಿಚಾರ ತರಂಗಗಳೆದ್ದುವು. ಅವನ ಭಾವನೆಗಳು ಗುರಿತಪ್ಪಿ ಓಡತೊಡಗಿದುವು. ಅವನು ತಟಸ್ಥನಾದನು. ದೀರ್ಘಕಾಲಾನಂತರ ಅವನಿಗೆ ತನ್ನ ಹೃದಯದ ಮೇಲೆ ಸ್ವಾಮ್ಯವುಂಟಾಯಿತು. ಅವನ ಗುರಿಯು ಸ್ಪಷ್ಟವಾಯಿತು. ಅವನು ಸೇನಾಪತಿಯ ಕಡೆಗೆ ತಿರುಗಿ "ಮುಲ್ಲೂಖಾನ್! ನನಗಿರುವ ಶಕ್ತಿಸಾಮರ್ಥ್ಯಗಳ ನೆರವಿನಿಂದ ನಾನು ದೆಹಲಿಯ ಸಿಂಹಾಸನವನ್ನೂ ಜೈಸಬಲ್ಲೆನು. ಆದರೆ ನನ್ನ

ಮಾರ್ಗದಲ್ಲಿ ಚಿತೋಡ್ ವಿಘ್ನದಂತೆ ನಿಂತಿದೆ. ಎಲ್ಲಿಯವರೆಗೆ ನನ್ನ ಪ್ರಗತಿ ಪಥದಲ್ಲಿ ನಿಂತಿರುವ ಈ ಕಂಟಕಗಿರಿಯನ್ನು ನಾನು ತೊಡೆದುಹಾಕುವುದಿಲ್ಲವೋ, ಅಲ್ಲಿಯವರೆಗೂ ನನ್ನ ಬೃಹದಾಕಾಂಕ್ಷೆಯು ಫಲಿಸದು. ಆದ್ದರಿಂದ ನಾನು ಚಿತೋಡಿನ ಮೇಲೆ ಧಾಳಿಯನ್ನು ನಡೆಸುವ ದೃಢಸಂಕಲ್ಪವುಳ್ಳನಾಗಿರುವೆನು. ಸೇನೆಗಳಿಗೆ ಸಿದ್ಧತೆಯ ಆಜ್ಞೆಯನ್ನು ಕೊಡಿರಿ. ನಾವು ಈ ದಿನವೇ ಚಿತೋಡಿನ ಕಡೆಗೆ ಹೊರಡಬೇಕಾಗಿದೆ" ಎಂದನು.

* * * *

ರಾತ್ರಿ ಹತ್ತುಘಂಟೆಯ ಸಮಯ. ರಾಣಿ ಕರ್ಣಾವತಿ ಮಂತ್ರಾಲೋಚನಾಮಂದಿರದಲ್ಲಿ ಶತಪಥ ತಿರುಗುತ್ತಿದ್ದಾಳೆ. ದುಃಖ, ಸಂತಾಪ, ಕಳವಳ, ಪ್ರಕೋಪದ ಚಿಹ್ನೆಗಳು ಅವಳ ಮುಖಮುದ್ರೆಯ ಮೇಲೆ ಸುಳಿಸುಳಿದು ಅದೃಶ್ಯವಾಗುತ್ತಿವೆ. ಹೃದಯವು ಪ್ರಕ್ಷುಬ್ಧವಾಗಿದೆ. ಚಿತ್ತದ ಶಾಂತಿಯು ವಿಲುಪ್ತವಾಗಿದೆ. ಭಯಾನಕ ಭವಿತವ್ಯದ ಮಹೋಗ್ರಚಿತ್ರ ಅವಳ ನಯನ ಫಲಕದ ಮೇಲೆ ಅಂಕಿತವಾಗುತ್ತ, ಅವಳನ್ನು ವಿವಶಳನ್ನಾಗಿ ಮಾಡುತ್ತಿದೆ. ಅವಳು ಶ್ರಾಂತಳಾದಳು. ದೀರ್ಘವಾದ ನಿಟ್ಟುಸಿರನ್ನು ಬಿಟ್ಟಳು. ಸಮೀಪದಲ್ಲಿದ್ದ ಸುಖಾಸನಕ್ಕೊರಗಿಕೊಂಡು ವ್ಯಸ್ತಮನವನ್ನು ಸಂತೈಸಿಕೊಂಡಳು. ಆದರೇನು? ಅಲ್ಲಿಯೂ ಚಿತ್ತಶಾಂತಿಯಿಲ್ಲ. ಸುಖಾಸನವು ಅಗ್ನಿಪೀಠದಂತೆ ತಾಪದಾಯಕವಾಯಿತು. ಅವಳು ಪುನರಪಿ ಮೇಲೆದ್ದಳು. ನಿಧಾನವಾಗಿ ಹೆಜ್ಜೆಯನ್ನಿಕ್ಕುತ್ತ, ತನ್ನ ಪತಿಯ ಭಾವಚಿತ್ರದಿಂದ ಅಲಂಕೃತವಾಗಿದ್ದ ಗೋಡೆಯ ಸಮೀಪಕ್ಕೆ ಬಂದಳು. ಮುಖವನ್ನು ಮೇಲಕ್ಕೆತ್ತಿ ಪೂರ್ಣನೇತ್ರಗಳಿಂದ ಭಾವಚಿತ್ರವನ್ನು ನೋಡುತ್ತ "ಮಹಾರಾಣ! ನನ್ನ ಮನೋವಲ್ಲಭ! ನಿನಗೆ ನಾನು ಸಾಟಿಯೇ? ನೀನು ರಣಕಂಠೀರವ! ರಾಜ್ಯಧುರಮಾತಂಗ! ನಾನು ಅಬಲೆ. ನೀನು ಹೊರುತ್ತಿದ್ದ ಪರ್ವತೋಪಮಾನಧುರೆಯನ್ನು ನನ್ನ ದುರ್ಬಲ ಬಾಹುಗಳು ಹೊರಬಲ್ಲುವೇ ಪ್ರಭು! ಈ ಪ್ರಳಯ ಪ್ರಸಾರ ಪರೀಕ್ಷೆಯಲ್ಲಿ ಹೇಗೆ ತೇರ್ಗಡೆಗಾಣಲಿ? ಈ ದುರ್ಧರ ಸಂಕಷ್ಟದಿಂದ ಹೇಗೆ ರಾಜ್ಯವನ್ನು ಸಂರಕ್ಷಿಸಿಕೊಳ್ಳಲಿ?" ಅವಳ ನೇತ್ರಗಳು ಅಶ್ರುಜಲಪೂರ್ಣವಾದುವು. ಮಸ್ತಕವು ದುರ್ಭರವಾಯಿತು. ಅವಳು ತನ್ನ ತಲೆಯನ್ನು ತಗ್ಗಿಸಿಕೊಂಡು ತಟಸ್ಥಳಾದಳು. ಅವಳ ನಯನಗಳು ನಿಮೀಲಿತವಾದುವು.

ಸೇನಾಪತಿಗಳಾದ ರಾಮಸಿಂಗ್ ಮತ್ತು ದಿಲೇರ್‌ಸಿಂಗ್ ಪ್ರವೇಶಿಸಿದರು. "ಮಹಾರಾಣಿಯವರಿಗೆ ಶುಭವಾಗಲಿ" ಎನ್ನುತ್ತ ತಲೆಯನ್ನು ತಗ್ಗಿಸಿಕೊಂಡು ನಿಂತರು.

ಮಹಾರಾಣಿ ಜಾಗ್ರತಳಾದಳು. ತನ್ನ ಮನೋವಿಹ್ವಲವನ್ನು ಮರೆ ಮಾಚಿಕೊಂಡು "ಬನ್ನಿ, ಬನ್ನಿ. ನಾನು ನಿಮ್ಮ ನಿರೀಕ್ಷಣೆಯಲ್ಲಿಯೇ ಇದ್ದೆನು. ಈಗ ಯುದ್ಧದ ಸ್ವರೂಪವು ಹೇಗಿದೆ?" ಎಂದು ಪ್ರಶ್ನಿಸಿದಳು.

"ಪ್ರಾಣಹಾನಿಯೊಂದರ ವಿನಹ ಮತ್ತಾವ ಪ್ರಯೋಜನವೂ ಕಾಣುತ್ತಿಲ್ಲ. ಗೆಲ್ಲುವ ಭರವಸೆಗಳೆಲ್ಲವೂ ಅಳಿದುಹೋಗಿವೆ. ನಾನಂತೂ ಸಂಪೂರ್ಣವಾಗಿಯೂ ನಿರಾಶನಾಗಿದ್ದೇನೆ" ಎನ್ನುತ್ತ ದಿಲೇರ್‌ಸಿಂಗ್ ನಿಟ್ಟುಸಿರನ್ನು ಬಿಟ್ಟನು.

ಕರ್ಣಾವತಿಯ ಕಣ್ಣುಗಳರಳಿದುವು. ಕೆಂಡದಂತೆ ಕೆಂಪೇರಿದುವು. ಪ್ರಕೋಪದ ಆವೇಗದಲ್ಲಿ ತುಟಿಗಳು ಕಂಪಿಸಿಹೋದುವು. ಅವಳು ಆವೇಶ ಯುಕ್ತಳಾಗಿ ಘರ್ಜಿಸಲಾರಂಭಿಸಿದಳು. "ನಿರಾಶೆ! ಮೇವಾಡದ ಇತಿಹಾಸದಲ್ಲಿ ವಿನೂತನ ಶಬ್ದ! ನಿಮ್ಮಿಂದ ನನಗೆ ಈ ನಿರೀಕ್ಷಣೆಯಿರಲಿಲ್ಲ ದಿಲೇರ್? ಹಾಗಾದರೆ ನಿಮ್ಮ ಸಂಕಲ್ಪ! ದೃಢಪ್ರತಿಜ್ಞೆ! ಅನದೃಶ ರಾಷ್ಟ್ರಭಕ್ತಿ! ವೀರ್ಯೋತ್ಸಾಹ! ಎಲ್ಲವೂ ಮಣ್ಣುಮುಕ್ಕಿಹೋಯಿತೇ? ಈಗ ಪ್ರಾಣಾಭಿ ಮಾನವು ಬಾಧಿಸುತ್ತಿದೆಯಲ್ಲವೇ? ಹೋರಾಟದಿಂದ ತಪ್ಪಿಸಿಕೊಳ್ಳಲು ನಿರಾಶೆ ಯನ್ನು ಸೂಚಿಸುತ್ತಿರುವಿರಲ್ಲವೇ?"

"ನನಗೆ ಪ್ರಾಣಾಭಿಮಾನವು ಬಾಧಿಸುತ್ತಿಲ್ಲ. ಹೋರಾಟದಿಂದ ತಪ್ಪಿಸಿ ಕೊಳ್ಳಲು ನಾನು ನಿರಾಶೆಯನ್ನು ಸೂಚಿಸುತ್ತಿಲ್ಲ. ವಸ್ತುಸ್ಥಿತಿಯನ್ನು ವಿವರಿಸಿದೆನು."

"ಧೈರ್ಯಗೆಡಬೇಡಿ, ಭಗವಂತನ ಮೇಲೆ ಭರವಸೆಯಿಡಿ. ನಿಮ್ಮ ಕತ್ತಿ ಗಳನ್ನು ನಂಬಿ. ನಿಮ್ಮ ಪೂರ್ವಿಕರನ್ನು ಸ್ಮರಿಸಿಕೊಂಡು ಧೈರ್ಯೋತ್ಸಾಹ ದಿಂದ ಮುಂದಡಿಯಿಡಿ. ಪರಿಸ್ಥಿತಿ ತಿಳಿಗೊಳ್ಳುವುದು. ವಿಜಯವು ನಮ್ಮ ಪಾಲಿನದಾಗುವುದು."

"ಮನುಷ್ಯನು ಮನುಷ್ಯನನ್ನಿದಿರಿಸಿ ಹೋರಾಡುವಾಗ, ನಮ್ಮ ಶಕ್ತಿ ಸಾಮರ್ಥ್ಯಗಳನ್ನು ಪ್ರದರ್ಶಿಸಬಲ್ಲೆವು. ಕತ್ತಿಗೆ ಕತ್ತಿಯಿಂದ ಉತ್ತರವನ್ನು ಕೊಡಬಲ್ಲೆವು. ಆದರೆ ಬಲವಾದ ಫಿರಂಗಿಗಳು ನಮ್ಮನ್ನು ಇದಿರಿಸುವಾಗ,

ನಾವು ಹೇಗೆ ತಾನೇ ಉತ್ತರವೀಯಬಲ್ಲೆವು? ಬಹಾದುರನ ಬೆಂಬಲಕ್ಕೆ ಪೋರ್ಚುಗೀಸರ ಫಿರಂಗಿದಳವೇ ಬಂದು ನಿಂತಿದೆ. ಅದರ ಪ್ರಳಯಭಯಂಕರ ಪ್ರಹರಗಳಿಂದ ಕೋಟೆಯ ಪ್ರಬಲಭಿತ್ತಿಗಳೂ ಕಂಪಿಸಿ ಹೋಗುತ್ತಿವೆ. ಇನ್ನು ನಮ್ಮ ಸಾಮಾನ್ಯ ಯೋಧರ ಅವಸ್ಥೆಯೇನೆಂಬುದನ್ನು ತಾವೇ ಊಹಿಸಿಕೊಳ್ಳಬಹುದು."

ರಾಣಿಯು ಪ್ರಸ್ತರಖಚಿತ ಮೂರ್ತಿಯಂತೆ ತಟಸ್ಥಳಾದಳು. ಅವಳ ಪ್ರಕೋಪ, ಆವೇಶ, ಆವೇಗ, ವೀರ್ಯೋತ್ಸಾಹಗಳೆಲ್ಲವೂ ಒಮ್ಮೆಯೇ ತಣ್ಣಗಾಗಿ ಹೋದುವು. ಅವಳು ಕುಗ್ಗಿದ ಸ್ವರದಲ್ಲಿ "ಈ ದುರ್ವಿಪತ್ತು ಬೇರೆ ಪ್ರಾಪ್ತವಾಯಿತೇ? ಹಾಗಾದರೆ ಈ ದುರ್ಭವಸನ್ನಿವೇಶದಿಂದ ಪಾರಾಗುವ ಮಾರ್ಗ?" ಎಂದು ಪ್ರಶ್ನಿಸಿದಳು.

"ನಮ್ಮ ಸ್ವಶಕ್ತಿಯಿಂದ ಇದನ್ನು ಪರಿಹರಿಸಲಾಗುವುದಿಲ್ಲ. ಅನ್ಯರು ನಮಗೆ ಬೆಂಬಲವೀಯಲೇಬೇಕು. ಹೊರಗಿನ ಸಹಾಯವು ಲಭಿಸದಿದ್ದಲ್ಲಿ, ಈ ವಿಪತ್ತು ಪರಿಹೃತವಾಗಲಾರದು."

"ನಾನೂ ಇದನ್ನೇ ಯೋಚಿಸುತ್ತಿದ್ದೇನೆ. ಆದರೆ ನಮಗೆ ಈ ಸಂದರ್ಭದಲ್ಲಿ ಯಾರು ಬೆಂಬಲ ನೀಡಬಲ್ಲರು?"

"ಇದನ್ನು ಮಹಾರಾಣಿಯವರೇ ಸೂಚಿಸಬೇಕು."

"ಸನ್ನಿವೇಶವು ಅತ್ಯಂತ ವಿಷಮವು" ಎಂದು ರಾಮ್‌ಸಿಂಗ್ ನುಡಿದನು. "ಯೋಚಿಸಲೂಕೂಡ ವ್ಯವಧಾನವಿಲ್ಲ. ಬುದ್ಧಿಗೆ ಸಂಪೂರ್ಣವಾಗಿಯೂ ಮಂಕು ಕವಿದುಹೋಗಿದೆ. ಆದರೆ ಈ ನಿರಾಶಾಂಧಕಾರದಲ್ಲಿಯೂ ಆಶಾಕಿರಣವೊಂದು ಗೋಚರಿಸುತ್ತಿದೆ. ದೆಹಲಿಯ ಚಕ್ರವರ್ತಿಯಿಂದ........"

"ಹೌದು, ಹೌದು. ನಾವು ದೆಹಲಿಯ ಚಕ್ರವರ್ತಿಯಿಂದೇಕೆ ಸಹಾಯವನ್ನು ಬಯಸಬಾರದು?" ಮಹಾರಾಣಿ ರಾಮ್‌ಸಿಂಗನ ನುಡಿಗೆ ಸಮರ್ಥನೆಯಿತ್ತಾಯುತ್ತ ಹೇಳಿದಳು.

ದಿಲೇರ್ ವಿಸ್ಮಿತನಾದನು. "ಏನು ಮೊಗಲ್ ಚಕ್ರವರ್ತಿಯಿಂದ! ಹುಮಾಯೂನನಿಂದ! ಮುಸಲ್ಮಾನ್ ಚಕ್ರವರ್ತಿಯು ನಮಗೆ ಸಹಾಯಕನಾಗಬಲ್ಲನೇ? ನಾವು ಹಿಂದೂಗಳು. ಬಹಾದುರನು ಮುಸ್ಲಿಮನು. ಹುಮಾಯೂನನು ಸ್ವಧರ್ಮೀಯನ ವಿರುದ್ಧ ನಮಗೇಕೆ ಬೆಂಬಲವೀಯುವನು? ಇದು ಊಹೆಗೂ ನಿಲುಕದ ವಿಚಾರ. ನನಗಂತೂ ವಿಶ್ವಾಸವೇ ಇಲ್ಲ."

"ನನಗೆ ಹುಮಾಯೂನ್ ಚಕ್ರವರ್ತಿಯ ಸಹಾಯತೆಯಲ್ಲಿ ದೃಢವಿಶ್ವಾಸ ವಿದೆ." ರಾಮಸಿಂಗ್ ತನ್ನ ಅಭಿಪ್ರಾಯವನ್ನು ಬಲಗೊಳಿಸಿಕೊಂಡನು. "ಈ ವಿಪತ್ಕಾಲದಲ್ಲಿ ಮೊಗಲ್ ಚಕ್ರವರ್ತಿಯು ನಮಗೆ ಸಹಾಯ ಮಾಡಿಯೇ ಮಾಡುವನು."

"ಯಾವ ಉದ್ದೇಶದಿಂದ ಹೇಳುತ್ತಿರುವೇ ?"

"ನಾನು ಕೇಳಿ ಅರಿತಿದ್ದೇನೆ. ಚಕ್ರವರ್ತಿಯು ವಿಶಾಲ ಮನೋಭಾವನೆ ಯುಳ್ಳವನು. ಕರುಣಾದ್ರ್ರಹೃದಯಿ. ಪರಮತಸಹಿಷ್ಣುವು. ವಿಪದ್ಗ್ರಸ್ತರ ಸಂಕಟನಿವಾರಕನು. ಹಿಂಸಾತ್ಮಕರ ಶತ್ರುವು."

"ನಾನೂ ಇದನ್ನೆಲ್ಲಾ ಬಲ್ಲೆನು. ಆದರೂ ಆತನು ಮುಸಲ್ಮಾನನು. ಆತನು ನಮಗೆ ಸಹಾಯಮಾಡುವ ವಿಚಾರವಂತೂ ಸಂದಿಗ್ಧವಾದುದೇ."

"ಆತನು ಮುಸಲ್ಮಾನನಾದರೇನು ? ನಾವು ಹಿಂದೂಗಳಾದರೇನು ?" ರಾಣಿಯು ತನ್ನ ಅಭಿಪ್ರಾಯವನ್ನು ಸೂಚಿಸಲಾರಂಭಿಸಿದಳು. "ಸತ್ಯ, ಧರ್ಮ, ದಯೆಯನ್ನು ಪಾಲಿಸಿಕೊಂಡು ಹೋಗುವ ಭಗವದ್ಭಕ್ತರು, ಜಾತೀಯತೆಗೆ ಪ್ರಾಧಾನ್ಯವನ್ನು ಕೊಡುವುದಿಲ್ಲ. ಸರ್ವಭೂತಗಳಲ್ಲಿಯೂ ಅನುಕಂಪನವುಳ್ಳ ಧರ್ಮಾತ್ಮರು, ಸಮಸ್ತ ಮಾನವರನ್ನೂ ಸಹೋದರರಂತೆ ಭಾವಿಸುವರು. ವೈಪಜ್ಞತೆಯನ್ನು ಬಲ್ಲ ಮಹಾತ್ಮರು ದುಃಖಿತರ, ವಿಪದ್ಗ್ರಸ್ತರ ಸಂಕಟ ನಿವಾರಣೆಗಾಗಿ ಶ್ರಮಿಸುವರೇ ವಿನಹ ಜಾತೀಯತೆಗಾಗಿ ಶ್ರಮಿಸುವುದಿಲ್ಲ. ಮತೀಯ ಪಕ್ಷಪಾತದಿಂದಲೂ, ಅನ್ಯ ಮತದ್ವೇಷದಿಂದಲೂ ಸಂಪೂರ್ಣ ವಾಗಿಯೂ ಅಲಿಪ್ತನಾಗಿರುವ ಹುಮಾಯೂನನು ನಮ್ಮ ದುಸ್ಥಿತಿಯನ್ನರಿತು ಕೊಳ್ಳುವನು. ಆದ್ದರಿಂದ ನನ್ನ ಆತ್ಮವು ಸಾಕ್ಷ್ಯವೀಯುತ್ತಿದೆ. ಮೊಗಲ್ ಚಕ್ರವರ್ತಿಯು ನಮಗೆ ನಿಶ್ಚಯವಾಗಿಯೂ ಸಹಾಯಮಾಡುವನು."

ದಿಲೇರ್ ಪುನಃ ತನ್ನ ಅಸಮಾಧಾನವನ್ನು ವ್ಯಕ್ತಗೊಳಿಸಿದನು. "ಬಹಾದುರ್‌ಷಹ ಮುಸಲ್ಮಾನನಲ್ಲವೇ ? ಹುಮಾಯೂನನ ಸ್ವಧರ್ಮಿಯ ನಲ್ಲವೇ ?"

"ಇದು ನಿಶ್ಚಯವೇ. ಆದರೂ ಹುಮಾಯೂನನು ನಮ್ಮ ದುಃಖ ಸಂಕಟಗಳನ್ನೂ, ಬಹಾದುರನ ದೌರ್ಜನ್ಯವನ್ನೂ ಮಾನವೀಯತೆಯ ದೃಷ್ಟಿ ಯಿಂದ ತುಲನೆಮಾಡುವನೇ ವಿನಹ ಜಾತೀಯ ದೃಷ್ಟಿಯಿಂದ ತುಲನೆಮಾಡ್ಡ

6

ವುದಿಲ್ಲ. ಆದ್ದರಿಂದ ನಮಗೆ ಸಹಾಯಮಾಡುವ ವಿಷಯದಲ್ಲಿ ಚಕ್ರವರ್ತಿಗೆ ಮತೀಯ ಪ್ರಶ್ನೆಯು ಪೀಡಿಸಲಾರದು. ಇದು ನನ್ನ ಅಂತರಾತ್ಮನ ನುಡಿಯು. ನೀವು ಸಂಶಯಕ್ಕಾಸ್ಪದವೀಯಬೇಡಿ. ಪ್ರಮಾಣಿಸಿ ನೋಡುವ ಅವಕಾಶವೇ ಈಗ ಒದಗಿದೆ."

"ಬಹುಶಃ ಮಹಾರಾಣಿಯವರ ಊಹೆಯು ಸತ್ಯವಾಗಿರಬಹುದು." ದಿಲೇರ್ ಸಮಾಧಾನದಿಂದ ನುಡಿದನು.

"ಹಾಗಾದರೆ ನೀವೀರ್ವ ದೇಶಭಕ್ತರೂ ಮೊಗಲ್ ಚಕ್ರವರ್ತಿಯ ಬಳಿಗೆ ಹೋಗಬೇಕು. ಅಂದರೆ ಈ ದಿನವೇ ಪ್ರಯಾಣವನ್ನು ಬೆಳೆಸಬೇಕು. ಒಂದು ಘಳಿಗೆಯನ್ನೂ ವ್ಯೋಲುಮಾಡಕೂಡದು. ಸನ್ನಿವೇಶವು ವಿನಾಶಕಾರಕವಾಗಿದೆ. ನಿಮ್ಮ ಕಾರ್ಯವು ಸಫಲವಾಗಬೇಕಾದರೆ, ಚಕ್ರವರ್ತಿಯ ಸನ್ನಿಧಿಯಲ್ಲಿ ವಿನಯದಿಂದ ಇಂದಿನ ಸೂಕ್ಷ್ಮಪರಿಸ್ಥಿತಿಯನ್ನು ವಿವರಿಸಬೇಕು. ಹೃದಯಂಗಮ ವಾಗುವಂತಹ ಪರಿಣಾಮಕಾರಿ ವಾಕ್ಯಗಳಿಂದ ಸಹಾಯವನ್ನು ಬೇಡಬೇಕು. ನಾನು ಪತ್ರವನ್ನೂ ಬರೆದುಕೊಡುತ್ತೇನೆ."

ಸೇನಾಪತಿಗಳೀರ್ವರೂ ಆಜ್ಞಾಪಾಲಕರಂತೆ ರಾಣಿಯ ಇದಿರಿನಲ್ಲಿ ಶಿರಬಾಗಿ ವಂದಿಸಿದರು. ಅನಂತರ ದಿಲೇರ್ ತನ್ನ ಗಂಭೀರ ವದನವನ್ನೆತ್ತಿ ಭರವಸೆಯಿತ್ತನು. "ಮಹಾರಾಣಿಯವರ ಆಜ್ಞೆಯನ್ನು ದೈವಾಜ್ಞೆಯಂತೆ ಪರಿಪಾಲಿಸಲು ಸಿದ್ಧರಿದ್ದೇವೆ. ನಾವು ಈಗ ಹೊರಡುವೆವಾದರೂ ಕ್ಷಿಪ್ರದಲ್ಲಿಯೇ ಸೈನ್ಯಸಹಿತ ಹಿಂದಿರುಗಿಬರುವೆವು. ಅದುವರೆಗೂ ಸರ್ವಸಾಹಸದಿಂದಲೂ ಆತ್ಮರಕ್ಷಣೆಯನ್ನು ಮಾಡಿಕೊಳ್ಳಬೇಕು. ಯೋಧರ ಮನಸ್ಸಿನಲ್ಲಿ ಯಾವ ರೀತಿಯಲ್ಲಿಯೂ ನಿರುತ್ಸಾಹವುಂಟಾಗದಂತೆ ಧೈರ್ಯವನ್ನು ತುಂಬುತ್ತಿರ ಬೇಕು."

"ನೀವು ನಿಶ್ಚಿಂತರಾಗಿ ಪ್ರಯಾಣವನ್ನು ಬೆಳೆಸಿರಿ. ನಾನು ನಗರ ರಕ್ಷಣೆಯ ಸರ್ವಸಿದ್ಧತೆಗಳನ್ನೂ ನಡೆಸುತ್ತೇನೆ. ಸೇನೆಯ ಸೂತ್ರಧಾರಿತ್ವವನ್ನು ನನ್ನ ಕೈಗಳಲ್ಲಿ ತೆಗೆದುಕೊಳ್ಳುತ್ತೇನೆ. ನನ್ನ ಕರದಲ್ಲಿ ಖಡ್ಗವು ಮಿಂಚುತ್ತಿರುವ ವರೆಗೂ ಕೋಟೆಯನ್ನು ಭೇದಿಸುವ ಶತ್ರುವಿನ ಪ್ರಯತ್ನವನ್ನು ಮಣ್ಣುಗೂಡಿಸಿ ಬಿಡುತ್ತೇನೆ."

ಬಂಗಾಳದ ಕಾಡಿನಲ್ಲಿ ಹುಮಾಯೂನನು ತನ್ನ ಸೇನೆಯ ಸಹಿತ ರಾಣ್ಯವನ್ನು ಹೂಡಿದ್ದಾನೆ. ಇದು ಬಂಗಾಳದ ಶೇರ್‌ಷಹ ಸೂರಿಯ ಮೇಲೆ ಹುಮಾಯೂನನ ಎರಡನೆಯ ಧಾಳಿ. ಮೊದಲನೇ ಧಾಳಿಯಲ್ಲಿ ಸ್ವತಃ ಹುಮಾಯೂನನೇ ಪರಾಜಿತನಾಗಿ, ಯಮುನಾನದಿಯಲ್ಲಿ ಧುಮುಕಿ ಅತ್ಯಂತ ಪ್ರಯಾಸದಿಂದ ದಡವನ್ನು ಸೇರಿ ಪ್ರಾಣರಕ್ಷಣೆ ಮಾಡಿಕೊಂಡಿದ್ದನು. ಅದರ ಪ್ರತೀಕಾರಕ್ಕಾಗಿ ಹುಮಾಯೂನನು ಈಗ ದ್ವಿತೀಯ ಅಭಿಯೋಗವನ್ನು ಕೈಗೊಂಡಿದ್ದಾನೆ. ಆತನಿಗೆ ವಿಜಯಪರಂಪರೆ ಪ್ರಾಪ್ತವಾಗುತ್ತಿದೆ. ಹುಮಾಯೂನನು ಗೂಡಾರದಲ್ಲಿ ಕುಳಿತು ಸರ್ದಾರ್ ಖೇಮ್‌ಸಿಂಗ್, ಸರ್ದಾರ್ ಅನುರ್‌ಸಿಂಗ್, ಸಾದುಲ್ಲಾಖಾನ್, ಅಲೀಗೌಹರ್, ಹೈದರ್‌ಮಿರ್ಜಾ ಮೊದಲಾದ ಧುರವಿಕ್ರಾಂತರೂ, ಯುದ್ಧಕಲಾವಿಚಕ್ಷಣರೂ ಆದ ಸೇನಾಪತಿಗಳೊಂದಿಗೆ ವಿಚಾರವಿನಿಮಯಮಾಡುತ್ತಿದ್ದಾನೆ. "ಈಗಂತೂ ಶೇರ್‌ಷಹ ಸೋಲಿನ ಮೇಲೆ ಸೋಲನ್ನು ಕಾಣುತ್ತಿದ್ದಾನೆ. ಆತನಿಗೆ ತಳವೂರಿ ನಿಲ್ಲಲೂ ನಾವು ಆಸ್ಪದ ಕೊಡಬಾರದು. ಆತನ ಆಶ್ರಯಸ್ಥಾನಗಳನ್ನೆಲ್ಲಾ ಮೊದಲು ಭಗ್ನಗೊಳಿಸಬೇಕು" ಎಂದು ಹುಮಾಯೂನನು ತನ್ನ ಆಶಯವನ್ನು ವ್ಯಕ್ತಗೊಳಿಸಿದನು.

"ಕಳೆದ ಯುದ್ಧದಲ್ಲಿ ಶೇರ್‌ಷಹ ಕೃತ್ರಿಮದಿಂದ ನಮ್ಮನ್ನು ಸೋಲಿಸಿದ್ದನು. ಈಗ ಅದರ ಸೇಡನ್ನು ತೀರಿಸಿಕೊಳ್ಳಲು ಸಕಾಲವಾಗಿದೆ" ಎಂದು ಅಲೀಗೌಹರ್ ನುಡಿದನು.

"ಆದರೂ ಆ ಯುದ್ಧದಲ್ಲಿ ನಾವು ಸೋತೂ ಗೆದ್ದಿದ್ದೇವೆ. ಶೇರ್‌ಷಹನು ಗೆದ್ದೂ ಸೋತಿದ್ದಾನೆ. ರಾತ್ರಿಯ ಗಭೀರಾಂಧಕಾರದಲ್ಲಿ ನಮ್ಮ ಸೈನಿಕರು ಗಾಢನಿದ್ರಾಪರವಶರಾಗಿ ಮಲಗಿದ್ದಾಗ, ಶೇರ್‌ಷಹನು ಕಳ್ಳನಂತೆ ಬಂದು ನಮ್ಮ ಸೈನ್ಯದ ಮೇಲೆ ಬಿದ್ದನು. ನಮ್ಮ ಮದ್ದಿನ ಸಂಗ್ರಹಕ್ಕೆ ಬೆಂಕಿಯಿಟ್ಟನು. ವೀರರಿಗೆ ಜಿಹಾಸೆಯನ್ನು ಹುಟ್ಟಿಸುವಂತಹ ಅವನ ಈ ಕೃತ್ರಿಮವು ಸಾಹಸವೆನಿಸಿಕೊಳ್ಳುವುದೇ? ಅವನ ಗೆಲುವು ಗೆಲುವೆನಿಸಿಕೊಳ್ಳುವುದೇ?"

"ಈಗ ನಾವು ಉಪೇಕ್ಷೆಮಾಡದೆ ಹೋರಾಟವನ್ನು ಮುಂದುವರಿಸಿದರೆ, ಶೇರ್‌ಷಹನ ಶಕ್ತಿಯನ್ನು ಸಂಪೂರ್ಣವಾಗಿಯೂ ನಿಗ್ರಹಿಸಬಹುದು." ಸರ್ದಾರ್ ಖೇಮ್‌ಸಿಂಗ್ ತನ್ನ ಅಭಿಪ್ರಾಯವನ್ನು ಸೂಚಿಸಿದನು. "ನಮಗೆ ಇದುವರೆಗಿದ್ದ ತೊಂದರೆಯೆಂದರೆ, ಕಾಮ್ರಾನ್ ಮಿರ್ಜಾರವರದು. ಅವರು

ಮೇಲಿಂದ ಮೇಲೆ ನಮ್ಮ ಸೈನ್ಯದ ವಿರುದ್ಧ ಧಾಳಿಯನ್ನು ನಡೆಸುತ್ತಲೇ ಇದ್ದರು. ಭಗವದನುಗ್ರಹದಿಂದ ಅವರು ನೆನ್ನೆಯ ಯುದ್ಧದಲ್ಲಿಯೇ ಸೋತು ಸೆರೆಸಿಕ್ಕಿದ್ದಾರೆ. ಅವರಿಂದ ಪ್ರಾಪ್ತವಾಗುತ್ತಿದ್ದ ವಿಪತ್ತು ಬಹುಮಟ್ಟಿಗೂ ನಿವರ್ತಿತವಾಗಿದೆ. ಈಗ ನಾವು ನಿರುಪಾಧಿಕವಾಗಿ ಶೇರ್‌ಷಹನೊಬ್ಬನ ಮೇಲೆಯೇ ಹೋರಾಟವನ್ನು ನಡೆಸಬಹುದು."

"ಬಾಬರನ ಕತ್ತಿಯ ಝಳವು ಕಣ್ಮರೆಯಾದೊಡನೆಯೇ, ದೆಹಲಿಯ ಸಿಂಹಾಸನವನ್ನುರುಳಿಸಲು ದೇಶದ ಮೂಲೆ ಮೂಲೆಗಳಲ್ಲಿ ಶತ್ರುಗಳು ಹುಟ್ಟಿಕೊಂಡರು. ಹೊರಗಿನ ಶತ್ರುಗಳಿಗಿಂತ ರಾಜಕುಮಾರ ಕಾಮ್ರಾನನ ಪ್ರತಿಭಟನೆಯೇ ಉಗ್ರವಾಗಿತ್ತು. ಅವನು ತನ್ನ ಅವ್ಯಾಹತವಾದ ಧಾಳಿಯ ದೆಸೆಯಿಂದ, ನಮ್ಮ ಇದಿರಿನಲ್ಲಿ ವಿವಿಧರೀತಿಯ ಪೀಡನೆಗಳನ್ನು ತಂದೊಡ್ಡಿದನು. ಪೂಜ್ಯ ತಂದೆಯವರು ಅವಸಾನಕಾಲದಲ್ಲಿ 'ತಮ್ಮಂದಿರನ್ನು ದಯಾರ್ದ್ರ ದೃಷ್ಟಿಯಿಂದ ಕಾಣಬೇಕು. ಅವರ ಮನಸ್ಸಿಗೆ ವೇದನೆಯನ್ನುಂಟುಮಾಡಬಾರದು' ಎಂದು ಉಪದೇಶಿಸಿದ್ದುದರಿಂದ, ನಾನು ಅವರ ವಾಕ್ಯ ಪರಿಪಾಲನೆಗಾಗಿ ಕಾಮ್ರಾನ್‌ಮಿರ್ಜಾನ ಸರ್ವಾಪರಾಧಗಳನ್ನೂ ಮನ್ನಿಸುತ್ತ ಬಂದೆನು. ಇಷ್ಟಾದರೂ ಅವನ ಮನವು ಪರಿವರ್ತಿತವಾಗಲಿಲ್ಲ. ಅವನು ನಮ್ಮ ಸಾಮ್ರಾಜ್ಯವನ್ನು ಉಧ್ವಸ್ತಗೊಳಿಸುವ ಮಹದಾಶಯವುಳ್ಳವನಾಗಿಯೇ ಉಳಿದನು. ಕಾಮ್ರಾನ್ ನಮ್ಮ ವಂಶದ ಕೀರ್ತಿಗೌರವಗಳ ಧೂಮಕೇತುವು. ಅವನ ದುರ್ವರ್ತನೆಯಿಂದ ನನ್ನ ಹೃದಯವು ವ್ಯಸ್ತವಾಗುತ್ತಿರುವುದು. ನನ್ನ ಸರ್ವಾಂಗವೂ ವಿದಗ್ಧವಾಗುತ್ತಿರುವುದು. ನನ್ನ ಮನೋವೇದನೆಯು ಅಸಹನೀಯವಾಗುತ್ತಿರುವುದು. ಇನ್ನು ನಾನು ಅವನನ್ನು ಜೀವದಿಂದಿರಗೊಡುವುದಿಲ್ಲ. ನನ್ನ ಮಾರ್ಗದ ಈ ಮುಳ್ಳನ್ನು ನಿರಂತರಕ್ಕಾಗಿ ತೊಡೆದುಹಾಕಿಬಿಡುವೆನು" ಎಂದವನೇ ಬಾಗಿಲಲ್ಲಿದ್ದ ಕಾವಲುಗಾರರ ಕಡೆಗೆ ತಿರುಗಿ "ಕಾಮ್ರಾನ್‌ಮಿರ್ಜಾನನ್ನು ಕರೆದುತನ್ನಿ" ಎಂದು ಆಜ್ಞಾಪಿಸಿದನು. ಕಾವಲುಗಾರರು ನಮಸ್ಕರಿಸಿ ಹೊರಟು ಹೋದರು. "ಈಗ ನಾನು ಯಾರನ್ನೂ ಲಕ್ಷಿಸುವವನಲ್ಲ. ಯಾರ ವಾಕ್ಯವನ್ನೂ ಗಮನಿಸುವವನಲ್ಲ. ಹೆಚ್ಚೇಕೆ? ನನ್ನನ್ನು ಹೆತ್ತು ಹೊತ್ತು ಸಾಕಿ ಸಲಹಿದ ಜನ್ಮದಾತೆಯಾದ ತಾಯಿಯೇ ಬಂದು ಪ್ರತಿಭಟಿಸಲಿ. ನನಗೆ ಈ ಮಹಾಸಾಮ್ರಾಜ್ಯವನ್ನು ಕರುಣಿಸಿದ ಪೂಜ್ಯಪಿತನೇ ಬಂದು ವಿರೋಧಿಸಲಿ.

ನಾನು ಮಾತ್ರ ನನ್ನ ಛಲವನ್ನು ಬಿಡುವವನಲ್ಲ. ಕಾಮ್ರಾನನ ಶಿರವನ್ನು ವಿಚ್ಛೇದಿಸದೆ ಶಾಂತಮನಸ್ಕನಾಗುವವನಲ್ಲ" ಎಂದು ಆರ್ಭಟಿಸಲಾರಂಭಿಸಿದನು.

ಕಾವಲುಗಾರರು ಕಾಮ್ರಾನನನ್ನು ಕರೆದು ತಂದು ಹುಮಾಯೂನನ ಇದಿರಿನಲ್ಲಿ ನಿಲ್ಲಿಸಿದರು. ಕಾಮ್ರಾನ್ ಕೈಗಳನ್ನು ಕಟ್ಟಿಕೊಂಡು ಅಧೋವದನನಾಗಿ ನಿಂತನು. ಆತನ ಕಣ್ಣುಗಳಿಂದ ಬಾಷ್ಪವಾರಿಯು ಧಾರೆಧಾರೆಯಾಗಿ ಸುರಿಯಲಾರಂಭಿಸಿತು. ಅವನ ಮುಖವು ಅನುತಾಪದ ಆವರಣದಿಂದ ಆಚ್ಛಾದಿತವಾಯಿತು. ಹುಮಾಯೂನನು ಕಾಮ್ರಾನನನ್ನು ನೋಡುತಲೇ ಕ್ರೋಧಾವಿಷ್ಟನಾದನು. ಆತನ ಕೆಂಗಣ್ಣುಗಳಿಂದ ರೋಷಾಗ್ನಿಯ ಕಿಡಿಗಳು ಹಾರಲಾರಂಭಿಸಿದುವು. ಅವನು ವಿವಶನಾಗಿ ಆರ್ಭಟಿಸುತ್ತ "ಕಾಮ್ರಾನ್! ಕಾಮ್ರಾನ್! ನೀನು ನನ್ನ ಅದೃಷ್ಟವನ್ನು ಪತನಗೊಳಿಸುತ್ತಿರುವ ಉತ್ಪಾತವು. ನನ್ನ ಹೃದಯವನ್ನು ಘಾತಿಸುತ್ತಿರುವ ತೀಕ್ಷ್ಣಬಾಣವು. ನನ್ನ ನೇತ್ರಗಳನ್ನು ಕುಕ್ಕುತ್ತಿರುವ ದುಷ್ಟಕಂಟಕವು" ಎಂದವನೇ ಒರೆಯಿಂದ ಖಡ್ಗವನ್ನೆಳೆದು ಕೆರಳಿದ ಹೆಬ್ಬುಲಿಯಂತೆ ಪೀಠದಿಂದೆದ್ದು ಹಾರಿಬಂದನು. "ಈಗ ನಾನು ನಿನ್ನನ್ನು ನಿಗ್ರಹಿಸದೆ ಬಿಡುವವನಲ್ಲ. ನಿನ್ನ ರಕ್ತದಲ್ಲಿ ಈ ಕತ್ತಿಯನ್ನು ತೋಯಿಸದೆ ಹಿಂದಿರುಗುವವನಲ್ಲ" ಎನ್ನುತ್ತ ಕಾಮ್ರಾನನ ಕಂಠಭಾಗವನ್ನು ಅಂಗಿಯ ಸಹಿತ ಎಡಗೈಯ ಮುಷ್ಟಿಯಿಂದ ಒತ್ತಿಹಿಡಿದು, ಶಿರವಿಚ್ಛೇದನೆಗಾಗಿ ಖಡ್ಗವನ್ನು ಮೇಲೆತ್ತಿದನು. ಕಾಮ್ರಾನ್ ತನ್ನ ಮ್ಲಾನವದನವನ್ನೆತ್ತಿ ಅಶ್ರುಜಲಪೂರ್ಣ ನಯನಗಳಿಂದ ಅಣ್ಣನನ್ನು ದಿಟ್ಟಿಸಿದನು. ಪರಸ್ಪರ ಸಹೋದರರ ನೇತ್ರದೃಷ್ಟಿಯು ಸಂಸಕ್ತವಾಯಿತು. ಹುಮಾಯೂನನ ತನುವಿನಲ್ಲಿ ವಿದ್ಯುತ್ಪರಿವರ್ತನೆಯಾಗಿಹೋಯಿತು. ಅವನ ಕಾದ ಕಬ್ಬಿಣದಂತಹ ಕೋಪವು ಕ್ಷಣಾರ್ಧದಲ್ಲಿ ಮಂಜುಗಡ್ಡೆಯಂತೆ ಶೀತಲವಾಯಿತು. ಸೋದರ ವಾತ್ಸಲ್ಯದ ಮನೋಜ್ಞಚಿತ್ರವು ನಯನಫಲಕದ ಮೇಲೆ ಅಂಕಿತವಾಯಿತು. ದೇಹವು ಪುಲಕಿತವಾಗಿ ನಯನಭಾಂಡವು ಬಾಷ್ಪಜಲಭರಿತವಾಯಿತು. ಕರವು ಕಂಪಿಸಿ ಖಡ್ಗವು ಕಳಚಿಹೋಯಿತು. ಅವನು ಭ್ರಾತೃಪ್ರೇಮೋನ್ಮತ್ತನಾಗಿ ತಮ್ಮನನ್ನು ಬಾಚಿ ತಬ್ಬಿಕೊಂಡನು. ಅನಂತರ ಪ್ರೇಮಭರದಿಂದ ತಮ್ಮನ ಶಿರಸ್ಸಿನ ಮೇಲೂ ಕಪೋಲಗಳ ಮೇಲೂ ಕರವನ್ನು ನೇವರಿಸುತ್ತ "ನನ್ನ ಪ್ರಿಯ

ಸಹೋದರಾ! ನಿನಗೆ ಸಾಮ್ರಾಜ್ಯದ ಅಭಿಲಾಷೆಯಿದೆಯೇ? ಆದ್ದರಿಂದಲೇ ವಿಪಕ್ಷೀಯರೊಡನೆ ಸೇರಿಕೊಂಡು ನಮ್ಮ ವಿರುದ್ಧ ಹೋರಾಡಿದೆಯಲ್ಲವೇ? ನಮ್ಮ ರಾಜ್ಯದ ಸೂಕ್ಷ್ಮ ಪರಿಸ್ಥಿತಿಯಲ್ಲಿ ನೀನು ಸರ್ವಸಾಹಸದಿಂದ ನಮ್ಮ ಪರವಾಗಿ ಹೋರಾಡುವುದು ನಿನ್ನ ಆದ್ಯ ಕರ್ತವ್ಯವಾಗಿತ್ತು. ಆದರೆ ನೀನು ವಿರುದ್ಧವಾಗಿ ವರ್ತಿಸಿದೆ. ನಿನಗೆ ಸಾಮ್ರಾಜ್ಯವನ್ನಾಳಬೇಕೆಂಬ ಅಭೀಷ್ಟವಿದ್ದಲ್ಲಿ ನಿರಾಂತಕನಾಗಿ ನನ್ನ ಸಿಂಹಾಸನವನ್ನೇರಿ ಕುಳಿತುಕೋ. ನಾನು ಆತ್ಮ ಸಂತೋಷದಿಂದ ನಿನಗೆ ನನ್ನ ಪದವಿಯನ್ನು ಅರ್ಪಿಸುತ್ತೇನೆ. ನನಗೇನೂ ರಾಜ್ಯವನ್ನಾಳಬೇಕೆಂಬ ಆಕಾಂಕ್ಷೆಯಿಲ್ಲ. ನಾನು ಸಾರ್ವಭೌಮ ಪದವಿಯನ್ನು ತೊರೆದು ನಿನಗೆ ಬೆಂಬಲಿಗನಾಗಿದ್ದುಕೊಂಡು ರಾಜ್ಯರಕ್ಷಣಾಕಾರ್ಯದಲ್ಲಿ ನಿರತನಾಗುವೆನು. ಬಾ! ನನ್ನ ಪೀಠದ ಮೇಲೆ ಕುಳಿತುಕೋ. ಬಾ! ಅದೇಕೆ ಹಿಂಜರಿಯುತ್ತಿರುವೆ?" ಎಂದು ಎಳಿದನು.

ಕಾಮ್ರಾನ್ ಹಿಂದಕ್ಕೆ ಸರಿಯುತ್ತ "ಅಣ್ಣಾ! ನನ್ನ ಅಪರಾಧವನ್ನು ಮನ್ನಿಸಿರಿ. ದೆಹಲಿಯ ಸಿಂಹಾಸನದ ಬಾಧ್ಯತೆಯು ತಮ್ಮ ಪಾಲಿನದು. ತಾವೋರ್ವರೇ ಆ ಸಿಂಹಾಸನವನ್ನೇರಲು ಅರ್ಹರೂ, ಸಮರ್ಥನೀಯರೂ ಆದವರು. ನನಗೆ ಸಿಂಹಾಸನವು ಬೇಕಿಲ್ಲ. ಇನ್ನು ಮೇಲೆ ತಮ್ಮ ರಾಜ್ಯದ ವಿರುದ್ಧ ಒಂದು ಹೆಜ್ಜೆಯನ್ನಾದರೂ ಎತ್ತಿಡಲೊಲ್ಲೆನು. ತಮ್ಮ ರಾಜ್ಯದ ರಕ್ಷಣೆಗಾಗಿ ತ್ರಿಕರಣಪೂರ್ವಕವಾಗಿ ಶ್ರಮಿಸುವೆನು" ಎಂದನು.

"ಕಾಮ್ರಾನ್! ನೀನು ನನ್ನ ಪೂಜ್ಯಪಿತನ ಹೃತ್ಚಂದ್ರನಾಗಿರುವೆ. ನನ್ನ ನೇತ್ರತಾರನೂ, ಅಮಿತಭಾಗ್ಯನೂ ಆಗಿರುವೆ. ಇಂದು ನೀನು ಪುನರಪಿ ನನಗೆ ಸಹೋದರನಾಗಿ ಲಭಿಸಿದ್ದು, ಅಖಂಡ ಭೂಮಂಡಲದ ಮಹಾ ಸಾಮ್ರಾಜ್ಯವೇ ನನಗೆ ಲಭಿಸಿದಂತಾಯಿತು. ಸಹೋದರ! ವಂಶದ ಕೀರ್ತಿಯನ್ನೂ, ಮಾತಾಪಿತರ ಗೌರವವನ್ನೂ ಕಾಪಾಡಬೇಕೆಂದು ಇಚ್ಛಿಸುವ ಸಹೋದರರು ಎಂದೂ ಬೇರ್ಪಡಲು ಆಶಿಸಬಾರದು. ಒಗ್ಗಟ್ಟಿನ ಶಕ್ತಿಯು ಅಜೇಯವಾದುದು. ಒಗ್ಗಟ್ಟಾಗಿರುವ ಅಣ್ಣ ತಮ್ಮಂದಿರನ್ನು ಕಂಡೊಡನೆಯೇ ಶತ್ರುಗಳು ದೂರದೂರ ಸರಿದುಹೋಗುವರು. ಪರಸ್ಪರ ದ್ವೇಷಾಸೂಯೆಗಳಿಂದ ಅಗಲಿಹೋಗುವ ಅಣ್ಣ ತಮ್ಮಂದಿರ ಮೇಲೆ ಶತ್ರುಗಳು ಬಿದ್ದು ಒಬ್ಬೊಬ್ಬರನ್ನಾಗಿ ನಿಗ್ರಹಿಸಿಬಿಡುವರು. ಅವಿಭಕ್ತ ಕುಟುಂಬದಿಂದ ಬೇರ್ಪಡುವ ಅಣ್ಣತಮ್ಮಂದಿರ ಮೇಲೆ ಪಿತೃಗಳ

ಶಾಪವಿರುವುದರಿಂದ ಅವರು ಅಪಯಶಸ್ಸನ್ನೂ, ಪರಾಭವವನ್ನೂ, ದುಃಖ ಸಂಕಟಗಳನ್ನೂ ಕಾಣುತ್ತಲೇ ಹೋಗುವರು."

"ಅಣ್ಣಾ! ನಾನು ತಮ್ಮ ವಿಶಾಲ ಮನೋಭಾವನೆಯನ್ನು ಅರ್ಥಮಾಡಿ ಕೊಳ್ಳಲಾರದೆಹೋದೆನು. ತಮ್ಮ ಘನವ್ಯಕ್ತಿತ್ವವನ್ನು ಅರಿಯದೆ ನನ್ನ ದುರ್ವರ್ತನೆಯಿಂದ, ಮಹಾತ್ಮರಾದ ತಮ್ಮ ಮನಸ್ಸಿಗೆ ವೇದನೆಯನ್ನುಂಟು ಮಾಡಿದೆನು. ಅಜ್ಞಾನದಿಂದ ಮಾಡಿದ ಅಪರಾಧಕ್ಕಾಗಿ ತುಂಬಾ ಅನುತಾಪ ಪಡುತ್ತಿದ್ದೇನೆ. ಈಗ ತಮ್ಮ ಸನ್ನಿಧಿಯಲ್ಲಿ ಪ್ರಮಾಣಗೈಯುತ್ತೇನೆ. ತಮ್ಮ ಸಾಮ್ರಾಜ್ಯದ ಕಲ್ಯಾಣಕ್ಕಾಗಿ ನನ್ನ ಜೀವಿತವನ್ನೇ ಮುಡುಪಾಗಿಟ್ಟಿದ್ದೇನೆ."

"ಭಗವಂತನು ನಿನಗೆ ಮಂಗಳವನ್ನುಂಟುಮಾಡಲಿ. ಈಗ ನಿನ್ನ ಸಹ ಕಾರದಿಂದ ನಾನು ನನ್ನ ಶತ್ರುಗಳನ್ನೆಲ್ಲಾ ಸುಲಭವಾಗಿ ಭೂಗತಮಾಡಬಲ್ಲೆನು. ಸರ್ದಾರ್ ಖೇಮ್‌ಸಿಂಗ್, ಈದಿನ ಸೈನಿಕರಿಗೆಲ್ಲಾ ಸಂತೋಷಸಮಾರಂಭವನ್ನು ಏರ್ಪಡಿಸೋಣ. ತಾನು ಅತ್ಯಂತ ಪ್ರೀತನಾಗಿದ್ದೇನೆ. ಹರ್ಷೋತ್ಫುಲ್ಲ ಮನಸ್ಕನಾಗಿದ್ದೇನೆ."

"ಅಗತ್ಯವಾಗಿ ಏರ್ಪಡಿಸಲೇಬೇಕು ಪ್ರಭು!" ಖೇಮ್‌ಸಿಂಗ್ ವಿನಯ ದಿಂದುತ್ತರವಿತ್ತನು.

ಕಾವಲುಗಾರನು ಪ್ರವೇಶಿಸಿ "ಮಹಾಪ್ರಭು! ಮೇವಾಡದಿಂದ ಇಬ್ಬರು ರಜಪೂತ ಸರದಾರರು ಬಂದು ತಮ್ಮ ಸಂದರ್ಶನಕ್ಕಾಗಿ ಕಾದು ನಿಂತಿದ್ದಾರೆ" ಎಂದನು.

"ಅವರನ್ನು ಗೌರವದಿಂದ ಒಳಗೆ ಕರೆದುಕೊಂಡು ಬಾ" ಎಂದು ಹುಮಾ ಯೂನನು ಆಜ್ಞಾಪಿಸಿದನು. ದಿಲೇರ್‌ಸಿಂಗ್ ಮತ್ತು ರಾಮ್‌ಸಿಂಗ್ ಪ್ರವೇಶಿಸಿ ಭಕ್ತಿಯಿಂದ ಶಿರಬಾಗಿ ಚಕ್ರವರ್ತಿಗೆ ವಂದಿಸಿದರು. ಚಕ್ರವರ್ತಿಯ ಸೂಚನೆ ಯಂತೆ ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡರು.

"ವೀರರೇ! ನಿಮಗೆ ಸುಸ್ವಾಗತವು. ಏನು ನೀವು ಮೇವಾಡದಿಂದ ಬಂದಿರುವಿರಾ?" ಎಂದು ಹುಮಾಯೂನನು ಪ್ರಶ್ನಿಸಿದನು.

"ಹೌದು ಮಹಾಪ್ರಭು! ನಮ್ಮಿರ್ವರನ್ನೂ ನಮ್ಮ ಮಹಾರಾಣಿಯವರು ತಮ್ಮ ಸನ್ನಿಧಿಗೆ ಕಳುಹಿಸಿರುತ್ತಾರೆ." ದಿಲೇರ್ ವಿನಮ್ರನಾಗಿ ಉತ್ತರವಿತ್ತನು.

"ನಿಮ್ಮ ರಾಜ್ಯದ ಸ್ಥಿತಿಯು ಹೇಗಿದೆ?"

"ಮಹಾಪ್ರಭು! ಏನು ಅರಿಕೆಮಾಡಿಕೊಳ್ಳೋಣ? ನಮ್ಮ ಮಹಾರಾಣಾ ಇಹಲೋಕವನ್ನು ತ್ಯಜಿಸಿದ ವಿಚಾರ ತಮಗೆ ಗೊತ್ತೇಯಿದೆ. ಅಯ್ಯೋ! ಶತ್ರುಗಳು ಅವರಿಗೆ ವಿಷಪ್ರಾಶನಗೊಳಿಸಿದರು." ದಿಲೇರನ ಕಣ್ಣುಗಳಿಂದ ಎರಡು ಹನಿಗಳು ತೊಟ್ಟಿಕ್ಕಿದುವು.

"ಆಃ! ರಾಣಾಸಂಗ ಧೀರೋದಾತ್ತರಾಗಿದ್ದರು." ಹುಮಾಯೂನ್ ನಿಟ್ಟುಸಿರಿಡುತ್ತ ಹೇಳಿದನು.

ದಿಲೇರ್ ಪರಿಸ್ಥಿತಿಯನ್ನು ವಿವರಿಸಲಾರಂಭಿಸಿದನು. ಮಹಾರಾಣಾರವರ ಅನಂತರ ಆರು ವರ್ಷದ ರಾಜಕುಮಾರ ಉದಯಸಿಂಗನಿಗೆ ಸಿಂಹಾಸನಾ ರೋಹಣವಾಯಿತು. ಆದರೆ ಮಹಾರಾಣಿಯವರೇ ರಾಜ್ಯಾಡಳಿತವನ್ನು ನೋಡುತ್ತಿದ್ದಾರೆ. ನಮ್ಮ ರಾಜ್ಯದ ಇಂಥ ಸೂಕ್ಷ್ಮಪರಿಸ್ಥಿತಿಯನ್ನರಿತು ಕೊಂಡು, ಗುಜರಾತಿನ ಬಹಾದುರ್‌ಷಹ ರಾಜ್ಯವನ್ನು ವಿಸ್ತರಿಸುವ ದುರಾಶೆ ಯಿಂದ, ಪ್ರಬಲವಾದ ಸೈನ್ಯದೊಂದಿಗೆ ನಮ್ಮ ರಾಜ್ಯದ ಮೇಲೆ ಅಭಿಯೋಗ ವನ್ನು ನಡೆಸಿದ್ದಾನೆ. ಮಹಾಪ್ರಭು! ಅನಾಥ ಶಿಶುಗಳ ಮೇಲೂ, ಅಬಲೆ ಯರಾದ ವಿಧವಾಸ್ತ್ರೀಯರ ಮೇಲೂ ಧಾಳಿ ನಡೆಸುವುದು ಪೌರುಷವೇ? ಮಾನವತ್ವವೇ?"

"ಪೌರುಷವೂ ಅಲ್ಲ, ಮಾನವತ್ವವೂ ಅಲ್ಲ." ಹುಮಾಯೂನ್ ರೋಷ ಗೊಂಡು ಹೇಳಿದನು. "ಇದು ಓರ್ವ ಹೇಡಿಯ ನೀಚಕೃತ್ಯವು. ವಶುವರ್ತ ನೆಯು. ವೀರಪುರುಷನ ಖಡ್ಗವು ಯುದ್ಧಕಾಲದಲ್ಲಿ ರಣಾಂಗಣದಲ್ಲಿ ಮಿಂಚು ವುದು. ವೀರಾಗ್ರಣಿಗಳ ಮೇಲೆ ಮಾತ್ರ ಪ್ರಯೋಗಿಸಲ್ಪಡುವುದು. ಅಸತ್ಯ, ಅಧರ್ಮ, ಅನ್ಯಾಯ, ಅವ್ಯವಸ್ಥೆ, ಅರಾಜಕತೆ, ಹಿಂಸೆ, ದೌರ್ಜನ್ಯ ಮೊದಲಾದ ದುಷ್ಟಶಕ್ತಿಗಳ ನಿಗ್ರಹಕ್ಕಾಗಿ ಹೋರಾಡುವುದು. ಜಗತ್ತಿನಲ್ಲಿ ಶಾಂತಿಯನ್ನೂ, ಸಂಮೋದವನ್ನೂ, ಸುವ್ಯವಸ್ಥೆಯನ್ನೂ ನೆಲೆಗೊಳಿಸುವ ಸಲುವಾಗಿ ಶ್ರಮಿಸು ವುದು. ಆದರೆ ಹೇಡಿಯ ಖಡ್ಗವು ಶಾಂತಿಕಾಲದಲ್ಲಿ ಮಿಂಚುವುದು. ಹಸುಳೆಗಳ ಮೇಲೆ, ಅಬಲೆಯರ ಮೇಲೆ, ನಿರಪರಾಧಿಗಳ ಮೇಲೆ ಮಾತ್ರ ಪ್ರಯೋಗಿಸ ಲ್ಪಡುವುದು. ಸತ್ಯ, ಅಹಿಂಸೆ, ಧರ್ಮ, ಶಾಂತಿ, ಸುವ್ಯವಸ್ಥೆ, ಸೌಜನ್ಯಗಳ ವಿರುದ್ಧ ಹೋರಾಡುವುದು. ಜಗತ್ತಿನ ಶಾಂತಿಯನ್ನು ಕಲಕಿ ಹಾಹಾಕಾರ ವನ್ನೆಬ್ಬಿಸಲು ಶ್ರಮಿಸುವುದು. ಭಗವಂತನು ಮಾನವರಿಗೆ ಪದವಿಯನ್ನು

ಕೊಡುವನಾದರೆ, ಶಕ್ತಿಸಾಮರ್ಥ್ಯಗಳನ್ನು ಅನುಗ್ರಹಿಸುವನಾದರೆ, ಸಿರಿಸಂಪದ ಗಳನ್ನು ಕರುಣಿಸುವನಾದರೆ 'ದುಃಖಿತರ ದುಃಖಶಮನಗೈಯಿರಿ. ನಿರಾಶ್ರಿತರಿಗೆ ಆಶ್ರಯವನ್ನು ಕೊಡಿರಿ. ನಿರ್ಗತಿಕರಿಗೆ ಗತಿಯನ್ನು ತೋರಿಸಿರಿ' ಎಂಬ ಮಹಾ ದಾಶಯದಿಂದ. ಆದರೆ ದುರಾಶಾಪೀಡಿತರಾಗಿ ಭಗವದಾಶಯವನ್ನು ಭಗ್ನ ಗೊಳಿಸುವ ಮಾನವರು, ಮೃಗಗಳಿಗಿಂತಲೂ ಕೀಳಾದವರು."

ರಾಮಲಿಂಗನ ಮುಖವು ಅರಳಿತು. ಅವನು ಆನಂದದ ಭರದಲ್ಲಿ "ಮಹಾಪ್ರಭುಗಳ ತೇಜಸ್ಸು ಜಗದ್ವ್ಯಾಪಿಯಾಗಲಿ" ಎಂದನು.

ದಿಲೇರ್ ವಸ್ತುಸ್ಥಿತಿಯನ್ನು ಪುನಃ ವಿವರಿಸಲಾರಂಭಿಸಿದನು. "ಮಹಾ ಪ್ರಭು! ನಾವು ಜೀವದ ಹಂಗುತೊರೆದು ವೀರಾವೇಶದಿಂದ ಹೋರಾಡಿದೆವು. ನಮ್ಮ ಕತ್ತಿಗಳಿಂದ ಶತ್ರುಗಳ ಹೃದಯಗಳನ್ನು ಭೇದಿಸಿದೆವು. ಅವರ ರುಂಡ ಮುಂಡಗಳನ್ನು ಚೆಲ್ಲಾಡಿದೆವು. ಆದರೂ ಕರ್ಕಶಹೃದಯದ ಆ ಬಲಿಷ್ಠ ಸೈನಿಕರನ್ನು ಹಿಡಿದಟ್ಟದೆಹೋದೆವು. ಪೋರ್ಚುಗೀಸರ ಪ್ರಬಲವಾದ ಫಿರಂಗಿಗಳ ಹೊಡೆತಕ್ಕೆ ಪ್ರತ್ಯುತ್ತರವೀಯುವ ಚೈತನ್ಯ ನಮ್ಮಲ್ಲಿರಲಿಲ್ಲ ಪ್ರಭು!"

"ಪೋರ್ಚುಗೀಸರ ಫಿರಂಗಿಗಳ ಹೊಡೆತ!" ಹುಮಾಯೂನ್ ಆಶ್ಚರ್ಯ ದಿಂದ ಸೇನಾಧಿಪತಿ ಹೈದರ್‌ಮಿರ್ಜಾನಕಡೆಗೆ ತಿರುಗಿದನು. "ಹೈದರ್‌ಮಿರ್ಜಾ! ವ್ಯಾಪಾರಕ್ಕಾಗಿ ಬಂದ ಪೋರ್ಚುಗೀಸರು ಈಗ ರಾಜಕೀಯಕ್ಕೇಕೆ ಇಳಿದಿದ್ದಾರೇ? ಸ್ಥಳೀಯ ಕಲಹಗಳಲ್ಲೇಕೆ ಪ್ರಧಾನಪಾತ್ರ ವಹಿಸುತ್ತಿದ್ದಾರೇ? ಅದೇಕೆ ತಮ್ಮ ಮದ್ದುಗುಂಡುಗಳಿಂದ ಅಸಂಖ್ಯಾತ ಹಿಂದೂಸ್ಥಾನೀಯರ ರಕ್ತವನ್ನು ಹರಿಸುತ್ತಿದ್ದಾರೇ?"

ವಯೋವಂತನೂ, ಜ್ಞಾನಶ್ರೇಷ್ಠನೂ ಆದ ಹೈದರ್‌ಮಿರ್ಜಾ ಸಮಾಧಾನ ದಿಂದ ಉತ್ತರವಿತ್ತನು. "ಸಾಮ್ರಾಜ್ಯದಾಹ! ಧನಾಕಾಂಕ್ಷೆ! ಪರಸ್ಪರ ಹಿಂದೂ ಸ್ಥಾನೀಯರು ಅಹರ್ನಿಶಿಯೂ ಹೋರಾಡುತ್ತ ಶಕ್ತಿಗುಂದಿದ ಮೇಲೆ, ಈ ದೇಶದ ಆಡಳಿತ ಮತ್ತು ಸಂಪತ್ತು ತಮ್ಮ ಪಾಲಿನದಾಗುವುದೆಂದು ವಿದೇಶೀಯ ವ್ಯಾಪಾರಿಗಳು ಅರಿತಿದ್ದಾರೆ. ಆದ್ದರಿಂದಲೇ ಅವರು ಸ್ಥಳೀಯ ರಾಜಕೀಯದಲ್ಲಿ ನೇರವಾದ ಪಾತ್ರವನ್ನು ವಹಿಸುತ್ತಿದ್ದಾರೆ. ಅಪರಾಧವಾದರೂ ಅವರದ್ದೇನಿದೆ? ಅಪಾರವಾದ ಧನವನ್ನು ತೆತ್ತು, ಅವರ ಫಿರಂಗಿಗಳನ್ನು ಸ್ವಾಗತಿಸುತ್ತಿರುವವರು ನಾವೇ ಅಗಿರುವವಲ್ಲವೇ?"

“ಆಗಲಿ, ಆಗಲಿ. ಈಗ ಪೋರ್ಚುಗೀಸರಿಗೆ ಸರಿಯಾದ ಉತ್ತರವನ್ನು ಕೊಡಬೇಕಾಗಿದೆ.” ಹುಮಾಯೂನನು ದಿಲೇರನ ಕಡೆಗೆ ತಿರುಗಿ “ದಿಲೇರ್ ಸಿಂಗ್, ಈಗ ಯುದ್ಧದ ಸ್ವರೂಪವು ಹೇಗಿದೆ” ಎಂದು ಪ್ರಶ್ನಿಸಿದನು.

ದಿಲೇರ್ ನಮ್ರತೆಯಿಂದ ಉತ್ತರವಿತ್ತನು. “ಶತ್ರುವು ರಾಜಧಾನಿಯನ್ನು ಮುತ್ತಿದ್ದಾನೆ. ದಿಜ್ಞ್ಮೂಢರಾದ ಮಹಾರಾಣಿಯವರು ಸಹಾಯಾರ್ಥವಾಗಿ ನಮ್ಮನ್ನು ತಮ್ಮ ಸನ್ನಿಧಿಗೆ ಕಳುಹಿಸಿರುತ್ತಾರೆ. ಜೊತೆಯಲ್ಲಿ ಮಹಾರಾಣಿಯವರ ಪತ್ರವನ್ನೂ ತಂದಿರುತ್ತೇವೆ.”

“ಎಲ್ಲಿ, ಪತ್ರವನ್ನು ಕೊಡಿ.”

“ಮಹಾಪ್ರಭುಗಳಿಗೆ ಶುಭವಾಗಲಿ” ಎನ್ನುತ್ತ ದಿಲೇರ್ ಪತ್ರವನ್ನು ಹುಮಾಯೂನನ ಮುಂದಿಟ್ಟನು.

ಹುಮಾಯೂನನು ಪತ್ರವನ್ನು ಬಿಚ್ಚಿ ಸರ್ದಾರ್ ಖೇಮ್‌ಸಿಂಗನ ಕೈಗೆ ಕೊಟ್ಟು ಓದುವಂತೆ ಸೂಚಿಸಿದನು. ಖೇಮ್‌ಸಿಂಗ್ ಪತ್ರವನ್ನು ಓದಲುಪಕ್ರಮಿಸಿದನು.

“ಮಹಾರಾಜಾಧಿರಾಜ ಹುಮಾಯೂನ್ ಸಾರ್ವಭೌಮರ ಸನ್ನಿಧಾನದಲ್ಲಿ ರಾಣಿ ಕರ್ಣಾವತಿಯ ಅನಂತ ಪ್ರಣಾಮಗಳು. ಮಹಾಪ್ರಭು! ತಮ್ಮ ಕೀರ್ತಿ ಚಂದ್ರಿಕೆಯು ಲೋಕವನ್ನೆಲ್ಲಾ ಬೆಳಗಲಿ. ತಮ್ಮ ಧರ್ಮಸಾಮ್ರಾಜ್ಯವು ಜಗದ್ವ್ಯಾಪಿಯಾಗಲಿ. ನನ್ನ ಈ ಪತ್ರವು ಸರಿಯಾಗಿ ರಾಖೀಹಬ್ಬದ ದಿವಸ* ತಮ್ಮ ದಿವ್ಯ ಸನ್ನಿಧಿಯಲ್ಲಿ ತಲಪುವುದು. ನಾನು ಇದರೊಂದಿಗೇನೇ ಒಂದು ರಕ್ಷಾಬಂಧನವನ್ನೂ ಕಳುಹಿಸಿರುತ್ತೇನೆ. ನಮ್ಮ ಹಿಂದೂ ಜನಾಂಗದಲ್ಲಿ, ಅದರಲ್ಲಿಯೂ ರಾಜಪುತ್ರ ವರ್ಗದಲ್ಲಿ ಒಂದು ಪುರಾತನ ಪದ್ಧತಿಯು ರೂಢಿಯಲ್ಲಿದೆ. ಹಬ್ಬದ ದಿವಸ ಸೋದರಿಯರು ತಮ್ಮ ಸೋದರರ ಬಾಹುಗಳಿಗೆ ರಕ್ಷಾಬಂಧನಗಳನ್ನು ಕಟ್ಟುತ್ತಾರೆ. ಆದರೆ ಯಾವ ನಿರ್ಭಾಗ್ಯಸ್ತ್ರೀಗೆ ಒಡಹುಟ್ಟಿದವರಿಲ್ಲವೋ! ದೂರ ಸಂಬಂಧದ ಸೋದರರೂ ಆಕೆಯ ಭಾಗಕ್ಕೆ ಲಭ್ಯರಾಗಿರುವುದಿಲ್ಲವೋ! ಅಂತಹ ದುರದೃಷ್ಟವಂತೆಯು ಕನ್ಯೆಯಾಗಿರಲಿ, ಸುಮಂಗಲಿಯಾಗಿರಲಿ, ವಿಧವೆಯಾಗಿರಲಿ ತಾನು ಮೆಚ್ಚಿದ ವೀರ ಸತ್ಪುರುಷನ ಬಾಹುವಿಗೆ

---

* ಉತ್ತರ ಹಿಂದೂಸ್ಥಾನದಲ್ಲಿ ಇದಕ್ಕೆ ಸಲೋಸೋ ಎನ್ನುತ್ತಾರೆ. ಪಂಜಾಬಿನಲ್ಲಿ ಇಖ್ಡೀಬಂಧನ್ ಎನ್ನುತ್ತಾರೆ.

ಬಂಧನವನ್ನು ಕಟ್ಟುತ್ತಾಳೆ. ಇಲ್ಲವೇ ಆತನ ಬಳಿಗೆ ಕಳುಹಿಸಿಕೊಡುತ್ತಾಳೆ."

ಹುಮಾಯೂನ್ ಆಶ್ಚರ್ಯಾನ್ವಿತನಾದನು. ಆನಂದದ ವೇಗದಲ್ಲಿ "ಭೇಷ್! ಸ್ವರ್ಗಸದೃಶ ಹಿಂದೂಸ್ಥಾನದ ಒಂದೊಂದು ಪದ್ಧತಿಯೂ ಶ್ಲಾಘನೀಯವಾಗಿದೆ" ಎಂದನು.

ಖೇಮ್‌ಸಿಂಗ್ ಪುನಃ ಪತ್ರವನ್ನು ಮುಂದುವರಿಸಿದನು. "ರಕ್ಷಾಬಂಧನವನ್ನು ಅಂಗೀಕರಿಸಿದ ಅನಂತರ, ಆ ಸ್ತ್ರೀಯನ್ನು ತನ್ನ ಒಡಹುಟ್ಟಿದ ತಂಗಿಯೆಂದು ಭಾವಿಸಿ ಆಕೆಗೆ ಸರ್ವವಿಧವಾದ ಸಾಹಾಯ್ಯವನ್ನೂ, ಸಂರಕ್ಷಣೆಯನ್ನೂ ನೀಡುವುದು ವೀರಪುರುಷನ ಪ್ರಥಮಕರ್ತವ್ಯವಾಗುತ್ತದೆ. ಸಂದರ್ಭವು ಒದಗಿಬಂದಾಗ ಆ ಧೀರೋದಾತ್ತ ಮಾನವಶ್ರೇಷ್ಠನು ತನ್ನ ತಂಗಿಯ ಸಲುವಾಗಿ ತನು, ಮನ, ಧನ, ಪ್ರಾಣಗಳನ್ನು ತೃಣವೆಂದೆಣಿಸುತ್ತಾನೆ. ಅವನು ಒಮ್ಮೆಯಾದರೂ ತನ್ನ ತಂಗಿಯೊಡನೆ ಸಂಭಾಷಿಸದಿದ್ದರೂ, ಅವಳ ಮುಖವನ್ನು ನೋಡದಿದ್ದರೂ, ಅವಳ ಸಲುವಾಗಿ ತನ್ನ ಸರ್ವಸ್ವವನ್ನೂ ಉತ್ಸರ್ಗಗೈಯ್ಯಲು ಸಿದ್ಧನಾಗುತ್ತಾನೆ. ವೀರಾಗ್ರಣಿಗಳ ಅಧಿದೇವತೆ! ಹುಮಾಯೂನ್ ಚಕ್ರೇಶ್ವರಾ! ನಾನು ತಮ್ಮಲ್ಲಿಗೆ ಈ ರಕ್ಷಾಬಂಧನವನ್ನು ಕಳುಹಿಸಿರುತ್ತೇನೆ. ತಾವು ನನ್ನ ಈ ಅಲ್ಪ ಅರ್ಪಣೆಯನ್ನು ಪರಿಗ್ರಹಿಸುವಿರೆಂದು ನಂಬಿರುತ್ತೇನೆ. ಇಂದಿನಿಂದ ತಾವು ನನ್ನ ಪೂಜ್ಯ ಅಗ್ರಜರು. ನಾನು ತಮ್ಮ ಅನುಜಾತೆಯು. ಹೇ ಅಣ್ಣಾ ಹುಮಾಯೂನ್! ಇಂದು ವಿಧವೆಯಾದ ತಮ್ಮ ನಿರ್ಗತಿಕ, ನಿರಾಶ್ರಿತ ಸಹೋದರಿ ಕರ್ಣಾವತಿಯು ತನ್ನ ಅನಾಥ ಶಿಶುವಿನೊಂದಿಗೆ ದಾರುಣವಿಪತ್ತಿಗೆ ಗುರಿಯಾಗಿದ್ದಾಳೆ. ಬಲಿಷ್ಠ ಶತ್ರುವು ರಾಜಧಾನಿಯನ್ನು ನಾಲ್ಕು ದಿಕ್ಕಿನಿಂದಲೂ ಮುತ್ತಿರುತ್ತಾನೆ. ಆತನು ನಮ್ಮ ರಾಜ್ಯವನ್ನು ಮಾತ್ರವೇ ಅಪಹರಿಸಲಾಶಿಸುತ್ತಿಲ್ಲ, ನಮ್ಮ ಮಾನಪ್ರಾಣಗಳನ್ನೂ ಸೂರೆಗೈಯಲು ಯತ್ನಿಸುತ್ತಿದ್ದಾನೆ. ಹೇ ವೀರವಿಕ್ರಮ! ತಾವು ತಮ್ಮ ವಿಪದ್ಗ್ರಸ್ತೆಯಾದ ಸೋದರಿಯನ್ನೂ, ನಿರಾಧಾರಿ ಸೋದರಳಿಯನನ್ನೂ ಸಂರಕ್ಷಿಸಲಾರಿರಾ? ನನಗಂತೂ ತಮ್ಮ ಸಹಾಯತೆಯ ಮೇಲೆ ಪ್ರಬಲವಾದ ಭರವಸೆಯಿದೆ."

ವಿಸ್ಮಿತವದನನಾಗಿ ಪತ್ರದ ಒಂದೊಂದು ನುಡಿಗೂ ಮೆಚ್ಚಿಗೆಯನ್ನು ಸೂಚಿಸಿ, ತಲೆದೂಗುತ್ತಿದ್ದ ಹುಮಾಯೂನನು ಪತ್ರದ ಒಕ್ಕಣೆಯು ಮುಗಿ

ದೊಡನೆಯೇ ಸಂತುಷ್ಟಾಂತರಂಗನಾದನು. ಅವನ ಮುಖವು ಅರಳಿತು. ನಯನಗಳು ವಿಕಸನಗೊಂಡುವು. ಅವನು ಹರ್ಷಾಧಿಕ್ಯದಿಂದ "ಆಃ! ರಾಣಿ ಕರ್ಣಾವತಿ ಎಂಥಾ ಸುಜ್ಞಳು! ಮತ್ತು ಎಂತಹ ದೂರದೃಷ್ಟಿಯುಳ್ಳವಳು! ನಾನು ಆಕೆಯ ಉದಾತ್ತಹೃದಯದಿಂದ ತುಂಬಾ ಸಂಪ್ರೀತನಾಗಿರುತ್ತೇನೆ. ನಾನು ಇಂದಿನಿಂದ ಆಕೆಯನ್ನು ನನ್ನ ಸಹೋದರಿಯಾಗಿ ಅಂಗೀಕರಿಸಿರುತ್ತೇನೆ" ಎಂದವನೇ ರಾಮ್‌ಸಿಂಗ್, ದಿಲೇರ್‌ಸಿಂಗರ ಕಡೆಗೆ ತಿರುಗಿ "ಎಲ್ಲಿ, ರಕ್ಷಾಬಂಧನ ವನ್ನು ತೆಗೆಯಿರಿ. ಅದನ್ನು ನನ್ನ ಕೈಗೆ ಕಟ್ಟಿರಿ" ಎಂದು ಹಸ್ತವನ್ನು ನೀಡಿದನು. ರಜಪೂತ ಸರದಾರರ ಉದ್ದೇಶವು ಫಲಿಸಿತು. ಅವರು ಪೂರ್ಣ ಕಾಮರಾದರು. ಆನಂದೋಲ್ಲಾಸದಿಂದ ರಕ್ಷಾಬಂಧನವನ್ನು ತೆಗೆದರು. ಮುತ್ತು ವಜ್ರಗಳಿಂದ ರಚಿತವಾಗಿದ್ದ ಬಂಧನವನ್ನು ಹುಮಾಯೂನನ ಕೈಗೆ ಕಟ್ಟಿದರು. "ಈ ರಕ್ಷಾಬಂಧನವು ಮಹಾಪ್ರಭುಗಳಿಗೆ ಶುಭವನ್ನುಂಟುಮಾಡಲಿ" ಎಂದು ಹಾರೈಸಿದರು.

ಹುಮಾಯೂನನು ರಕ್ಷಾಬಂಧನದಿಂದ ಅಲಂಕೃತವಾದ ತನ್ನ ಕರವನ್ನು ನೋಡುತ್ತ "ಸಭ್ಯ ರಜಪೂತರೇ! ಈಗ ನೀವು ನಿಶ್ಚಿಂತರಾಗಿ ವಿಶ್ರಾಂತಿಯನ್ನು ತೆಗೆದುಕೊಳ್ಳಿರಿ. ನಾಳೆಯೇ ನಮ್ಮ ಸೇನೆಗಳು ಚಿತೋಡಿನ ಕಡೆಗೆ ತೆರಳುವುವು. ನಾನೂ ಕೂಡ ನನ್ನ ವೀರ ಸೋದರಿಯ ಸಹಾಯಕ್ಕಾಗಿ ಕ್ಷಿಪ್ರವಲ್ಲಿಯೇ ಹೊರಡುವೆನು" ಎಂದನು.

ಈಗ ದಿಲೇರನ ಆನಂದಕ್ಕೆ ಪಾರವೆಲ್ಲಿದೆ? ಅವನು ಕೃತಕೃತ್ಯನಾಗಿದ್ದಾನೆ. ಸಿದ್ಧಕಾಮನಾಗಿದ್ದಾನೆ. ಅವನ ಹೃದಯವು ಉಬ್ಬಿಹೋಗಿದೆ. ಅವನು ಮುಕ್ತ ಕಂಠದಿಂದ ಹುಮಾಯೂನನನ್ನು ಹೊಗಳುತ್ತ "ಮಹಾಪ್ರಭುಗಳ ಕೀರ್ತಿ ಭಾಸ್ಕರನು ದೇದೀಪ್ಯಮಾನವಾಗಿ ರಾರಾಜಿಸಲಿ. ಸಾರ್ವಭೌಮರ ಸುಗುಣಾ ವಳಿಗಳನ್ನು ನಾವು ಎಷ್ಟು ಕೇಳಿದ್ದೇವೋ ಅದಕ್ಕಿಂತ ಶತಪಾಲು ಅಧಿಕವಾಗಿ ಪ್ರಮಾಣಿಸಿ ಅರಿತೆವು. ವಿಪದ್ಗ್ರಸ್ತರನ್ನೂ, ನಿರಾಶರನ್ನೂ ಸಂರಕ್ಷಿಸುವುದೇ ನಿಜವಾದ ವೀರತ್ವವು. ಭಾರತದ ಅಖಂಡ ಸಾಮ್ರಾಜ್ಯದ ಅರ್ಹತೆಯೂ, ಬಾಧ್ಯತೆಯೂ ಹುಮಾಯೂನ್ ಭುವನಾಧಿನಾಥರಿಗೆ ಮಾತ್ರವೇ ಸಲ್ಲತಕ್ಕದ್ದು. ಮಹಾಪ್ರಭುಗಳು ನಮ್ಮ ರಾಜ್ಯವನ್ನೂ, ಮಾನಪ್ರಾಣಗಳನ್ನೂ ಸಂರಕ್ಷಿಸುವ ರೆಂಬ ವಿಚಾರದಲ್ಲಿ ಈಗ ನನಗೆ ಪೂರ್ಣ ಭರವಸೆಯುಂಟಾಯಿತು" ಎಂದನು.

ರಜಪೂತ ಸರದಾರನ ವಚನಗಳನ್ನು ಕೇಳಿ ಹುಮಾಯೂನ್ ಪ್ರೀತನಾದನು. ಮುಂದಹಾಸನವನ್ನು ವ್ಯಕ್ತಗೊಳಿಸಿದನು. ಮತ್ತೊಮ್ಮೆ ರಾಮ್‌ಸಿಂಗ್, ದಿಲೇರ್‌ಸಿಂಗರಿಬ್ಬರೂ ಭಕ್ತಿಯಿಂದ ವಂದಿಸಿ ಚಕ್ರವರ್ತಿಯ ಗೂಡಾರದಿಂದ ಹೊರಟರು.

ಇದುವರೆಗೆ ಜರಗಿದ ವಿದ್ಯಮಾನವನ್ನೆಲ್ಲಾ ಪೂರ್ಣಗಮನದಿಂದ ನಿರೀಕ್ಷಿಸುತ್ತಿದ್ದ ಸೇನಾಪತಿ ಅಲೀಗೌಹರ್, ತನ್ನ ಆಸನದಿಂದ ಎದ್ದುನಿಂತು "ಏನು, ಮಹಾಪ್ರಭುಗಳು ನಿಶ್ಚಯವಾಗಿಯೂ ಚಿತೋಡಿನ ಕಡೆಗೆ ಪ್ರಯಾಣವನ್ನು ಬೆಳೆಸುವರೇ?" ಎಂದು ಕೇಳಿದನು.

"ನಿಶ್ಚಯವಾಗಿಯೂ, ಅಗತ್ಯವಾಗಿಯೂ" ಎಂದು ಹುಮಾಯೂನ್ ಉತ್ತರವನ್ನು ಕೊಟ್ಟನು.

"ಆದರೆ"........

"ಆದರೇನು?"

"ಬಹಾದುರ್‌ಷಹ ಇಸ್ಲಾಂ ಧರ್ಮೀಯನು. ಅವನ ವಿರುದ್ಧ ನಾವೇಕೆ ಹೋರಾಡಬೇಕು?"

"ದುಷ್ಟನೂ, ಪರಮ ನೀಚಸ್ವಭಾವದವನೂ ಆದ ಬಹಾದುರ್‌ಷಹನು ಇಸ್ಲಾಂಧರ್ಮದ ಅನುಯಾಯಿಯೇ? ಇಸ್ಲಾಮಿನ ಧಾರ್ಮಿಕ ನಿಬಂಧನೆಗಳನ್ನು ಅರಿತಿರುವನೇ? ಅಬಲಾಸ್ತ್ರೀಯರ ಮೇಲೆ, ನಿರ್ದೋಷ ಹಸುಳೆಗಳ ಮೇಲೆ, ದಿಕ್ಕಿಲ್ಲದ ಅನಾಥರ ಮೇಲೆ ಧಾಳಿನಡೆಸುವುದು ಎಲ್ಲಿಯ ಇಸ್ಲಾಂಧರ್ಮವು? ಇಸ್ಲಾಂಧರ್ಮವು ಇದನ್ನೇ ಬೋಧಿಸುತ್ತಿದೆಯೇ? 'ಒಬ್ಬ ನಿರಪರಾಧಿಯನ್ನು ಕೊಲ್ಲುವವನು, ಭೂತದಲ್ಲಿರುವ ಸಮಸ್ತ ಮಾನವರನ್ನೂ ಕೊಂದ ಪಾಪಕ್ಕೆ ಗುರಿಯಾಗುವನು' ಎಂದು ಇಸ್ಲಾಂಧರ್ಮವು ಎಚ್ಚರಿಸುತ್ತಿಲ್ಲವೇ? 'ಒಬ್ಬ ನಿರಪರಾಧಿ ಮಾನವನ ಪ್ರಾಣರಕ್ಷಣೆಮಾಡಿದವನು, ಭೂಮಂಡಲದಲ್ಲಿರುವ ಸಮಸ್ತ ಮಾನವರ ಪ್ರಾಣರಕ್ಷಣೆಮಾಡಿದ ಪುಣ್ಯಕ್ಕೆ ಭಾಜನನಾಗುವನು' ಎಂದು ಇಸ್ಲಾಂಧರ್ಮವು ಸಾರುತ್ತಿಲ್ಲವೇ?"

"ಚಿತೋಡಿನವರು ಹಿಂದೂಗಳು. ನಾವೇಕೆ ಅವರ ಪಕ್ಷವನ್ನು ವಹಿಸಬೇಕು? ನಿಷ್ಕಾರಣವಾಗಿ ಓರ್ವ ಮುಸಲ್ಮಾನನೊಡನೆ ಹೋರಾಡುವಂಥ ಶ್ರಮವನ್ನೂ, ಕಷ್ಟವನ್ನೂ ಏಕೆ ಸ್ವಾಗತಿಸಬೇಕು?"

"ಜಾತೀಯತೆಯನ್ನೇ ಪ್ರಧಾನಧ್ಯೇಯವಾಗಿಟ್ಟುಕೊಂಡು ಪ್ರತಿಭಟಿಸು ಪವನು ದೇವದ್ರೋಹಿಯೆನಿಸಿಕೊಳ್ಳುವನು. ಭೇದಬುದ್ಧಿಯುಳ್ಳವರು ಸಕಲ ವಿದ್ಯಾಭಿಜ್ಞರಾಗಿರಲಿ, ಭಗವದ್ಭಕ್ತರಾಗಿರಲಿ, ತಪೋನಿಷ್ಠೆಯುಳ್ಳವರಾಗಿರಲಿ, ಉನ್ನತ ಪೀಠಾಧಿಪತಿಗಳಾಗಿರಲಿ ಪರಮಾತ್ಮನ ಕೃಪಾದೃಷ್ಟಿಯಿಂದ ಕಳಚಿ ಬೀಳುವರು. ಸರ್ವರಕ್ಷಕನಾದ ಭಗವಂತನು ಎಲ್ಲರನ್ನೂ ಏಕದೃಷ್ಟಿಯಿಂದ ನೋಡುತ್ತಿರುವನು ಎಂಬುದನ್ನು ಮರೆಯಬೇಡಿರಿ. ಪರಮಾತ್ಮನು ಯಾವ ನೊಬ್ಬ ನಿರಪರಾಧಿ ಮಾನವನ ವಧೆಯನ್ನೂ ಸೈರಿಸಲಾರನು. ಚಿತೋಡಿ ನವರು ಹಿಂದೂಗಳಾದರೇನು, ಮಾನವರಲ್ಲವೇ? ಹಿಂಸಾಪೀಡಿತರಲ್ಲವೇ? ಸಹಾಯ ಸಹಾನುಭೂತಿಗೆ ಅರ್ಹರಾದವರಲ್ಲವೇ? ಇಂಥವರಿಗೆ ನಕಾಲದಲ್ಲಿ ಸಹಾಯನೀಡುವುದು ನಮ್ಮ ಆದ್ಯಕರ್ತವ್ಯವಲ್ಲವೇ? ನಮ್ಮ ಇಸ್ಲಾಂಧರ್ಮವೂ 'ವಿಪದ್ಗ್ರಸ್ತರ ಸಂಕಟನಿವಾರಣೆಗೈಯಿರಿ' ಎಂದು ಸಾರಿಸಾರಿ ಹೇಳುತ್ತಿಲ್ಲವೇ?"

ಇದುವರೆಗೆ ಆಲೀಗೌಹರ್ ಮತ್ತು ಹುಮಾಯೂನರ ಸಂಭಾಷಣೆಗಳನ್ನು ತೀವ್ರಾಸಕ್ತಿಯಿಂದ ಕೇಳುತ್ತಿದ್ದ ಸೇನಾಪತಿ ಅಮರ್‌ಸಿಂಗ್ ಹುಮಾಯೂನನ ಸತ್ಯವಚನದಿಂದ ಚಕಿತನಾದನು. ಆಕರ್ಷಿತನಾದನು. ಭಾವನೆಗಳ ಆವೇಗದಲ್ಲಿ ವಿವಶನಾಗಿ ಎದ್ದುನಿಂತು, ತನ್ನ ಮನೋಭಿಪ್ರಾಯವನ್ನು ಸೂಚಿಸಲಾರಂಭಿಸಿದನು. "ಜಗದ್ರಕ್ಷಕನಾದ ಪರಮಾತ್ಮನು ಸ್ತೋತ್ರಾರ್ಹನು. ಎಂಥಾ ವಿಶಾಲ ಮನೋಭಾವನೆ! ಎಂತಹ ಉಚ್ಚಧ್ಯೇಯ! ನಿಷ್ಪಕ್ಷಪಾತ ಹೃದಯವೆಂದರೆ ಹೀಗಿರಬೇಕು. ಜಗತ್ತಿನಲ್ಲಿ ಯಾವ ಶಕ್ತಿಯೂ ನಿರತ್ಯಯವಾದುದಲ್ಲ. ಯಾವ ಪ್ರಭುತ್ವವೂ ಚಿರಸ್ಥಾಯಿಯಾದುದಲ್ಲ. ಆದರೆ ಆಯಾ ಶಕ್ತಿಯೂ, ಪ್ರಭುತ್ವವೂ ತನ್ನ ಉತ್ಕರ್ಷ ಪರಿಸ್ಥಿತಿಯಲ್ಲಿ ತಾಳಿದ ಧೋರಣೆ, ಅನುಸರಿಸಿದ ಮಾರ್ಗ, ವರ್ತಿಸಿದ ವರ್ತನೆಗಳು ಮಾತ್ರ ಶಾಶ್ವತವಾಗಿ ಉಳಿದುಹೋಗುವುವು. ಸಮ್ರಾಟರು ಉದ್ಭವಿಸುವರು. ಅಳಿಯುವರು. ಆದರೆ ಪಾಪಾತ್ಮರು ದುಷ್ಕೀರ್ತಿಯ ತಮಃಪಟದಲ್ಲಿ ಮಾಯವಾಗಿ, ಪುಣ್ಯಾತ್ಮರು ಸತ್ಕೀರ್ತಿಯ ಗಗನಾಗ್ರದಲ್ಲಿ ದೇದೀಪ್ಯರೂಪಧರ ಚಂದ್ರಮನಂತೆ ರಾರಾಜಿಸುವರು. ತಮ್ಮ ಕಲ್ಯಾಣ ಗುಣಗಳಿಂದ ಅನುಕರಣೀಯರೂ, ಸಂಸ್ಮರಣೀಯರೂ ಆಗುವರು."

ಹುಮಾಯೂನನು ಅಮರಸಿಂಗನ ಅಭಿಪ್ರಾಯವನ್ನು ಪುಷ್ಟೀಕರಿಸುತ್ತ ಹೇಳಿದನು. "ಪ್ರಿಯಜನರೇ! ಮತೀಯ ಪಕ್ಷಪಾತವು ಒಂದು ಅನಿಷ್ಟ

ಕುಠಾರವು. ಅದು ಸಾಮ್ರಾಜ್ಯಗಳ ಬುಡಗಳನ್ನೇ ಕಡಿದುಹಾಕುವುದು. ಈ ವಿಪತ್ಕಾರಕ ಧೂಮಕೇತುವಿನಿಂದಲೇ ಮಹಾ ಚಕ್ರಾಧಿಪತ್ಯಗಳ ಅದೃಷ್ಟವು ಕಳಚಿಬೀಳುವುದು. ಈ ದುಷ್ಟ ಪಿಶಾಚಿಯೇ ಜನಾಂಗಗಳ ಐಕ್ಯತೆಯನ್ನು ಭೇದಿಸಿ, ಅವುಗಳನ್ನು ನಿಪಾತಗೊಳಿಸಿಬಿಡುವುದು. ಈ ಮತಭೇದವೇ ಎಲ್ಲೆಲ್ಲಿಯೂ ಅಂತಃಕಲಹಗಳನ್ನೆಬ್ಬಿಸಿ ಜಗತ್ತಿನ ಶಾಂತಿಯನ್ನು ಕಲಕಿಬಿಡುವುದು."

ಅಮರ್‌ಸಿಂಗ್ ಶಿರಬಾಗಿ ನುಡಿದನು. "ಸತ್ಯವಚನ ಮಹಾರಾಜ್."

ಹುಮಾಯೂನ್ ತನ್ನ ಅಭಿಪ್ರಾಯವನ್ನು ಪುನಃ ಸೂಚಿಸಲಾರಂಭಿಸಿದನು. "ರಾಜ್ಯಪೀಠಗಳನ್ನೇರುವ ಮುಕುಟಧಾರಿಗಳಿಗೆ ನಿಷ್ಪಕ್ಷಪಾತವು ವಿಭೂಷಣವು. ರಾಜನೀತಿ ವಿಚಕ್ಷಣರೂ, ಅದ್ಭುತವಿದ್ಯಾನಿಪುಣರೂ ಸಮತಾಭಾವನೆಯುಳ್ಳವರೂ ಆಗಿದ್ದ ನನ್ನ ಪೂಜ್ಯ ತಂದೆಯವರು ನಾನು ನಿಷ್ಪಕ್ಷಪಾತಿಯಾಗಿರಬೇಕೆಂಬ ವಿಚಾರದಲ್ಲಿ ನನಗೆ ಅಮೋಘವಾದ ನೀತಿಯನ್ನು* ಬೋಧಿಸಿರುವರು. ಸಾಮ್ರಾಜ್ಯದ ಯಾವ ಭಾಗದಲ್ಲಿಯೂ ಗೋವಧೆಯನ್ನು ನಡೆಸಕೂಡದೆಂದು ಅವರು ನನಗೆ ಆಜ್ಞಾಪಿಸಿದ್ದರು. ಆದ್ದರಿಂದಲೇ ನನ್ನ ರಾಜ್ಯದಲ್ಲಿ ಗೋವಧೆಯನ್ನು ನಿಲ್ಲಿಸಿರುತ್ತೇನೆ. ಗೋಮಾಂಸಭಕ್ಷಣೆಯನ್ನು ಸಂಪೂರ್ಣವಾಗಿ ನಿಷೇಧಿಸಿರುತ್ತೇನೆ. ಸತ್ಯ, ಧರ್ಮ, ದಯೆಯನ್ನು ರಕ್ಷಿಸಿಕೊಂಡು ಎಲ್ಲಾ ಜನಾಂಗದವರಿಂದಲೂ ಏಕದೃಷ್ಟಿಯಿಂದಲೂ, ವಿಶ್ವಾಸದಿಂದಲೂ ವರ್ತಿಸುತ್ತಿದ್ದೇನೆ. ಸರ್ವಜನಾದರಣೀಯನಾಗಿ ರಾಜ್ಯಭಾರವನ್ನು ನಡೆಸಬೇಕೆಂಬುದೇ ನನ್ನ ಘನೋದ್ದೇಶವು. ಇನ್ನು ನನ್ನ ಇದಿರಿನಲ್ಲಿ ಹಿಂದೂ ಮುಸ್ಲಿಂ ಸಮಸ್ಯೆಯೆಲ್ಲಿಯದು? ವಿಪದ್ಗ್ರಸ್ತರು ಹಿಂದೂಗಳಾದರೇನು? ಮುಸಲ್ಮಾನರಾದರೇನು? ಅವರನ್ನು ಸಂರಕ್ಷಿಸುವ ಹೊಣೆ ನನ್ನದು. ಈಗ ಹಿಂಸಾಪೀಡಿತರಾಗಿರುವ ಹಿಂದೂಗಳ ಮೇಲೆ ಕರುಣೆಯನ್ನು ತೋರಿಸುವುದು ನನ್ನ ಆದ್ಯಕರ್ತವ್ಯವು."

ಅಮರ್‌ಸಿಂಗ್ ತಲೆದೂಗಿದನು. ಎರಡು ಕರಗಳನ್ನೂ ಮೇಲಕ್ಕೆತ್ತಿ "ಭಗವಂತನು ಮಹಾಪ್ರಭುಗಳಿಗೆ ದೀರ್ಘಾಯುಷ್ಯವನ್ನು ಕರುಣಿಸಲಿ" ಎಂದು ಹಾರೈಸಿದನು.

---

*ಬಾಬರನ ಸ್ವಹಸ್ತಲಿಖಿತ ನೀತಿಬೋಧೆಯು ಭೂಪಾಲಿನ ಆಸ್ಥಾನದ ಗ್ರಂಥಭಾಂಡಾರದಲ್ಲಿ ಈಗಲೂ ಸುರಕ್ಷಿತವಾಗಿದೆ. ೧೯೨೧ರಲ್ಲಿ ಪ್ರಿನ್ಸ್ ಆಫ್ ವೇಲ್ಸ್ ಭಾರತಕ್ಕೆ ಬಂದಿದ್ದಾಗ, ಸ್ವತಃ ಇದನ್ನು ಅವರು ಅವಲೋಕಿಸಿರುತ್ತಾರೆ.

ಯುದ್ಧಕಲಾವಿಚಕ್ಷಣನೂ, ಮಹಾಮೇಧಾವಿಯೂ ಆದ ಸಾದುಲ್ಲಾಖಾನ್ ಎದ್ದು ನಿಂತನು. "ಮಹಾಪ್ರಭುಗಳ ಉದಾತ್ತಧ್ಯೇಯವು ಸರ್ವಮಾನ್ಯವೂ, ಅನುಕರಣೀಯವೂ ಆಗಿದೆ. ಹಿಂದೂಗಳಲ್ಲಿ ಕರುಣೆಯನ್ನು ತೋರಬಾರದೆಂದು ಹೇಳುವವನು ನಾನಲ್ಲ. ಬಾಬರ್ ಮಹಾಶಯರ ನೀತಿಯೇ ನನ್ನ ನೀತಿಯು. ಆದರೆ ಯಾವ ಹಿಂದೂಗಳ ಮೇಲೆ ಕರುಣೆಯನ್ನು ತೋರಿಸುತ್ತಿದೀರೆಂಬುದನ್ನು ಮಹಾಪ್ರಭುಗಳು ಗಮನಿಸಬೇಕು. ಯಾವ ಸಂಗ್ರಾಮಸಿಂಹ, ಎಲ್ಲಿಯವರೆಗೆ ಬಾಬರನನ್ನೂ, ಆತನ ಅನುಯಾಯಿಗಳನ್ನೂ ಹಿಂದೂಸ್ಥಾನದಿಂದ ಬಿಡಿದೋಡಿಸುವವರೆಗೆ ನಾನು ಚಿತೋಡಿನ ಕೋಟೆಯಲ್ಲಿ ಪ್ರವೇಶಿಸುವುದಿಲ್ಲವೆಂದು ಪ್ರತಿಜ್ಞೆಮಾಡಿದ್ದನೋ, ಅಂಥಾ ಸಂಗ್ರಾಮಸಿಂಹನ ಪತ್ನಿಯ ಮೇಲೂ, ಪುತ್ರನ ಮೇಲೂ, ಅನುಯಾಯಿಗಳ ಮೇಲೂ ಕರುಣೆಯನ್ನು ತೋರಿಸುವುದೇ?" ಎಂದು ಪ್ರಶ್ನಿಸಿದನು.

"ಸಾದುಲ್ಲಾಖಾನ್! ಸಂಗ್ರಾಮಸಿಂಹನು ಹಿಂದುವಾಗಿ ಮುಸಲ್ಮಾನನಾದ ಬಾಬರನನ್ನೂ, ಆತನ ಅನುಯಾಯಿಗಳನ್ನೂ ಹಿಂದೂಸ್ಥಾನದಿಂದ ಬಡಿದಟ್ಟಬೇಕೆಂದು ಪ್ರತಿಜ್ಞೆಮಾಡಿದವನಲ್ಲ. ರಾಣಾಸಂಗ ವೀರಾಗ್ರಣಿ. ಪ್ರತಿಜ್ಞೆಯು ವೀರನ ಶಿರೋಭೂಷಣ. ಪ್ರತಿಜ್ಞಾಪಾಲನೆಗಾಗಿ ಶ್ರಮಿಸುವುದೇ ವೀರತ್ವದ ಕುರುಹು. ರಾಣಾಸಂಗ ಬಾಬರನನ್ನು ಶತ್ರುವೆಂದು ಭಾವಿಸಿದ್ದನು. ತನ್ನ ಶತ್ರುವನ್ನು ದೇಶದಿಂದ ಹೊರಗಟ್ಟಬೇಕು ಎಂದು ಆತನು ಸಂಕಲ್ಪಿಸಿದ್ದರೆ, ಶ್ರಮಿಸಿದ್ದರೆ ದೋಷವೇನು? ರಾಣಾಸಂಗ ಬಾಬರನನ್ನು ತನ್ನ ಶತ್ರುವೆಂದು ಭಾವಿಸಿದರೇನಾಯಿತು? ರಾಣಾಸಂಗನ ಪತ್ನಿ ಬಾಬರನ ಪುತ್ರನ ಸೋದರಿಯಾಗಿದ್ದಾಳೆ. ಸ್ವರ್ಗದ ಸುಂದರ ಗವಾಕ್ಷಗಳಿಂದ ಇಣಿಕಿ ನೋಡುತ್ತಿರುವ ರಾಣಾಸಂಗನೂ, ಬಾಬರನೂ ಈ ಮಧುರಬಾಂಧವ್ಯವನ್ನು ಕಂಡು ಸಂಪ್ರೀತರಾಗುವರು."

"ಶೇರ್‌ಷಹನ ವಿರುದ್ಧವರ್ತನೆಯ ಮೇಲೂ ನಾವು ದೃಷ್ಟಿಯಿಡಬೇಕಾಗಿದೆ. ಶತ್ರುವು ಇನ್ನೂ ಬಲಿಷ್ಠನಾಗಿಯೇ ಇದ್ದಾನೆ. ನಮ್ಮ ಶಕ್ತಿಯ ಮೇಲೇ ನಮಗೆ ಪೂರ್ಣಭರವಸೆಯಿಲ್ಲ. ಇಂತಹ ಸೂಕ್ಷ್ಮಪರಿಸ್ಥಿತಿಯಲ್ಲಿ ಶತ್ರುವಿನ ಬಲವನ್ನು ಮುರಿಯದೆ, ಅವನನ್ನು ನಿಗ್ರಹಿಸದೆ ನಮ್ಮ ದೃಷ್ಟಿಯನ್ನು ಮತ್ತೊಂದು ಕಡೆಗೆ ಹೊರಳಿಸಿದರೆ ಶತ್ರುವು ಬಲಿಷ್ಠನಾಗುವನು. ಅನಂತರ

ಅವನ ನಿಗ್ರಹಕಾರ್ಯವು ದುಸ್ತರವಾಗುವುದು. ಕ್ರಮಕ್ರಮೇಣ ಅವನು ಶಕ್ತಿ ಶಾಲಿಯಾಗುತ್ತ ನಮ್ಮ ರಾಜಧಾನಿಯ ಮೇಲೆ ಧಾಳಿಯಿಡುವನು. ಬಾಬರ್ ಮಹಾಶಯರು ಕಷ್ಟದಿಂದಾರ್ಜಿಸಿದ ವಿಶಾಲ ಸಾಮ್ರಾಜ್ಯವು ನಮ್ಮ ಧೋರಣೆ ಯಿಂದಾಗಿ ಕಳಚಿಹೋಗುವುದು. ಈ ವಿಚಾರವು ಮಹಾಪ್ರಭುಗಳಿಗೆ ತಿಳಿ ಯದೆಯಿಲ್ಲ."

"ರಾಜ್ಯರಕ್ಷಕನಿಗೆ ಎಲ್ಲಾ ವಿಚಾರವೂ ಗೊತ್ತಿದೆ. ಆದರೂ ನಾವು ಹಿಂಸಾಪೀಡಿತರನ್ನು ಹಿಂಸಾತ್ಮಕರ ಹಿಡಿತದಿಂದ ಸಂರಕ್ಷಿಸಲೇಬೇಕಾಗಿದೆ. ತಂಗಿಯು 'ಅಣ್ಣಾ! ನನ್ನ ಮಾನಪ್ರಾಣಗಳನ್ನು ಕಾಪಾಡು' ಎಂದು ಮೊರೆ ಯಿಡುತ್ತಿರುವಾಗ ತನ್ನ ಹಿತಕ್ಕಾಗಿ ಅಲಕ್ಷ್ಯದಿಂದಿರುವ ಅಣ್ಣನು ಇದ್ದು ತಾನೇ ಫಲವೇನು? ಇನ್ನು ಜಯಾಪಜಯಗಳು ಪರಮಾತ್ಮನ ಅಧೀನ. ದೆಹಲಿಯ ಸಿಂಹಾಸನದ ಮೇಲೆ ಶೇರ್‌ಷಹನೇ ಕುಳಿತು ವಿರಾಜಿಸಬೇಕೆಂದು ವಿಧಿಸಂಕಲ್ಪ ವಿದ್ದರೆ, ಅದನ್ನು ಮೀರಲು ನನ್ನಿಂದ ಸಾಧ್ಯವೇ? ದೈವಕೃಪೆಯಿದ್ದರೆ ಹುಮಾ ಯನನು ಕಳೆದುಕೊಂಡ ಸಾಮ್ರಾಜ್ಯವನ್ನು ಪುನರಪಿ ಆರ್ಜಿಸಬಲ್ಲನು. ಆದರೆ ಕಳೆದುಕೊಂಡ ಸೋದರಿಯ ಮಧುರವಾತ್ಸಲ್ಯವನ್ನು ಪುನಃ ಆರ್ಜಿಸಲಾರನು. ಆದ್ದರಿಂದ ಸೈನ್ಯವನ್ನು ಇಬ್ಭಾಗಮಾಡಿ ಒಂದು ಭಾಗವನ್ನು ಕಾಮ್ರಾನ್ ಮಿರ್ಜಾನ ನಾಯಕತ್ವದಲ್ಲಿ ಇಲ್ಲಿಯೇ ಬಿಟ್ಟು, ಮತ್ತೊಂದು ಭಾಗವನ್ನು ತೆಗೆದುಕೊಂಡು ಚಿತೋಡಿನ ಕಡೆಗೆ ಹೊರಡೋಣ. ಸೈನಿಕರಿಗೆ ಸಿದ್ಧತೆಯ ಆಜ್ಞೆಯನ್ನು ಕೊಡಿರಿ."

"ಮಹಾಪ್ರಭುಗಳು ಎಂದೂ ನಮ್ಮ ಸಲಹೆಯನ್ನು ಈ ರೀತಿ ಉಪೇಕ್ಷಿಸಲಿಲ್ಲ" ಎಂದು ಸಾದುಲ್ಲಾ ಖಾನ್ ಪುನಃ ತನ್ನ ಅಸಮಾಧಾನವನ್ನು ವ್ಯಕ್ತಗೊಳಿಸಿದನು.

"ಸಾದುಲ್ಲಾ ಖಾನ್! ನೀವು ಅರಿಯಿರಿ. ನನ್ನ ದೇಹದಲ್ಲೇನು ಪರಿ ವರ್ತನೆಯಾಗುತ್ತಿದೆ? ನನ್ನ ಮನವೇಕೆ ಸೂರೆಹೋಗುತ್ತಿದೆ? ನಾನೇಕೆ ವಿವಶನಾಗುತ್ತಿದ್ದೇನೆ? ಈ ರಾಖಿಯಲ್ಲಿ ಪರಮಾತ್ಮನ ಯಾವ ಅಗೋಚರ ಶಕ್ತಿಯು ಆವಿರ್ಭವಿಸಿದೆಯೋ! ಈಗ ನನ್ನ ಕಣ್ಣಿಗೆ ನನ್ನ ಸಹೋದರಿಯ ದೀನಮುಖಮುದ್ರೆಯ ಹೊರತು, ಮತ್ತೇನೂ ಗೋಚರಿಸುತ್ತಿಲ್ಲ. ಈಗ ನನ್ನ ಕರ್ಣಕುಹರಗಳಲ್ಲಿ ದೈನ್ಯತೆಯಿಂದ ತುಂಬಿರುವ ಅಣ್ಣಾ! ಎಂಬ ಮಂಜುಳ ವಾಣಿಯ ಹೊರತು ಮತ್ತಾವ ಶಬ್ದವೂ ಪ್ರತಿಧ್ವನಿತವಾಗುತ್ತಿಲ್ಲ. ನಾನು ಈಗ

ಗಳಿಂದ ಬರಿದಾಯಿತಾದರೂ, ನಗರದಲ್ಲಿ ಶವರಾಶಿಯೊಂದರ ವಿನಹ ಜೀವಂತ ಮಾನವನ ಸುಳಿವೇ ಇಲ್ಲ. ಹುಮಾಯೂನನಿಗೆ ಭೀಕರಸ್ಮಶಾನದಲ್ಲಿ ಪ್ರವೇಶಿಸಿದಂತೆ ಭಾಸವಾಯಿತು. ಅವನು ವಿಭ್ರಮೆಗೊಂಡನು. ನಿರಾಶನಾದನು. ಅವನ ಪರಾಕ್ರಮವನ್ನು ಮೆಚ್ಚುವವರಾರು? ದೂರದ ಶ್ರಮವನ್ನು ನಿರ್ಲಕ್ಷಿಸಿ ಬಂದನೆಂದು ಹೊಗಳುವವರಾರು? ಅವನು ನಿರ್ಜನ ನಗರದಲ್ಲಿ ಹುಚ್ಚನಂತೆ ತೊಳಲುವುದಕ್ಕಾರಂಭಿಸಿದನು. ಈ ತೊಳಲಾಟದಲ್ಲಿ ಅವನೊಂದು ಅಗ್ನಿಕುಂಡವನ್ನು ಕಂಡನು. ಸುತ್ತಲೂ ನಿರ್ಜೀವಾತ್ಮರಾಗಿ ಮಲಗಿದ್ದ ಯೋಧರ ಮಧ್ಯೆ ವೃದ್ಧನೋರ್ವನು ಎರಡು ಕರಗಳಿಂದಲೂ ಮುಖವನ್ನು ಮುಚ್ಚಿಕೊಂಡು ನಿಂತಿದ್ದನು. ಹುಮಾಯೂನನು ವೇಗವಾಗಿ ಅಗ್ನಿಕುಂಡದ ಸಮೀಪಕ್ಕೆ ಹೋದನು. ಹುಮಾಯೂನನನ್ನು ಕಾಣುತಲೇ ವೃದ್ಧಸರದಾರನು "ಮಹಾಪ್ರಭು! ನಾವು ಸೂರೆಹೋದೆವು. ಸಂಪೂರ್ಣವಾಗಿಯೂ ಅಳಿದುಹೋದೆವು. ದುಷ್ಟ ಶತ್ರುವು ನಮ್ಮ ಸರ್ವನಾಶಗೈದನು. ಅಯ್ಯೋ! ಅಯ್ಯೋ!" ಎಂದು ರೋದಿಸಲಾರಂಭಿಸಿದನು.

ಹುಮಾಯೂನನು ಕಳವಳಪಟ್ಟು "ಸರ್ದಾರರೇ! ನಿಜಸ್ಥಿತಿಯೇನು? ಅಗ್ನಿಕುಂಡವು? ಈ ಯೋಧರೇಕೆ ಅಗ್ನಿಕುಂಡದ ಸುತ್ತಲೂ ಅಸುವಳಿದು ಮಲಗಿದ್ದಾರೆ?" ಎಂದು ಪ್ರಶ್ನಿಸಿದನು.

"ಮಹಾಪ್ರಭು! ಏನು ಅರಿಕೆಮಾಡಿಕೊಳ್ಳಲಿ? ನಮ್ಮ ಪ್ರತಿಭಟನೆಗಳೆಲ್ಲವೂ ಶತ್ರುವಿನ ಶಕ್ತಿಯ ಇದಿರಿನಲ್ಲಿ ವ್ಯರ್ಥವಾದ ಮೇಲೆ, ತಮ್ಮ ಸಹಾಯವನ್ನು ನಿರೀಕ್ಷಿಸಿ ಮಹಾರಾಣಿಯವರು ನಿರಾಶರಾದ ಮೇಲೆ, ಅವರು ಅಂತ್ಯತೀರ್ಮಾನವಂತೆ ನಡೆದುಕೊಂಡರು."

"ಏನು ಅಂತ್ಯ ತೀರ್ಮಾನ?"

"ನಮ್ಮ ವೀರರಾಣಿಯವರು ಜೌಹರ್ ಪದ್ಧತಿಯನ್ನನುಸರಿಸಿದರು. ನೂರಾರು ಸ್ತ್ರೀಯರೊಂದಿಗೆ ಅಗ್ನಿಯ ಪ್ರಚಂಡ ಜ್ವಾಲೆಯಲ್ಲಿ ಬಿದ್ದು ದಗ್ಧರಾದರು. ನಿರಂತರಕ್ಕಾಗಿ ತಮ್ಮ ಗೌರವವನ್ನು ಕಾಯ್ದುಕೊಂಡರು. ಇದೇ ಆ ಅಗ್ನಿಕುಂಡವು."

"ಹಾಯ್ ಪರಮಾತ್ಮಾ! ನಿನ್ನ ಲೀಲೆಯು ಅಗಮ್ಯವು. ನಿನ್ನ ಇಚ್ಛೆಯು ಹೀಗೂ ಇದ್ದೀತೇ? ಸಹೋದರಿಯ ಸಂದರ್ಶನಕ್ಕಾಗಿ ದೂರದ

ಪ್ರಯಾಣವನ್ನು ನಿರ್ಲಕ್ಷಿಸಿ ಬಂದ ವೀರ ಪಥಿಕನು ನಾನು. ನನ್ನ ಮಹ ದಾಶಯವನ್ನು ಕ್ಷಣಾರ್ಧದಲ್ಲಿ ಭಂಗುರಗೊಳಿಸಿದೆಯಾ? ನನ್ನ ಸಹೋ ದರಿಯ ಸಂದರ್ಶನ ಭಾಗ್ಯವನ್ನು ನನಗೆ ಅನುಗ್ರಹಿಸಲಾರದೆ ಹೋದೆಯಾ?" ಹುಮಾಯೂನನು ಸ್ವಲ್ಪಹೊತ್ತು ಹಾಗೆಯೇ ಮೌನವಾಗಿ ನಿಂತನು. ಪುನಃ ವೃದ್ಧ ರಜಪೂತನ ಕಡೆಗೆ ತಿರುಗಿ "ಸರ್ದಾರರೇ! ಈ ಯೋಧರೇಕೆ ಈರೀತಿ ಅಸುವಳಿದು ಮಲಗಿರುವರು?" ಎಂದು ಪ್ರಶ್ನಿಸಿದನು.

"ಮಹಾಸ್ವಾಮಿ! ಶತ್ರುಗಳಿಗೆ ಸಿಕ್ಕಿ ಯಾತನಾಮಯ ಕಾರಾಗಾರಗಳಲ್ಲಿ ಬಂಧಿಸಲ್ಪಡುವುದಕ್ಕಿಂತಲೂ, ಗುಲಾಮರಾಗಿ ಬಾಳುವುದಕ್ಕಿಂತಲೂ, ಸಾಯು ವುದೇ ಮೇಲೆಂದು ಈ ವೀರಪುರುಷರು ನಿರ್ಧರಿಸಿದರು. ಶತ್ರುಗಳ ಅಶುದ್ಧ ಖಡ್ಗಗಳಿಂದ ತಮ್ಮ ದೇಹಗಳನ್ನು ಅಪವಿತ್ರಗೊಳಿಸಿಕೊಂಡು ಸಾಯಲು ಇಚ್ಛಿಸದೆ, ತಮ್ಮ ಪವಿತ್ರ ಖಡ್ಗಗಳಿಂದಲೇ ಒಬ್ಬರನ್ನೊಬ್ಬರು ವಧಿಸಿಕೊಂಡು ತಮ್ಮ ಪವಿತ್ರತೆಯನ್ನೂ ಕೀರ್ತಿಯನ್ನೂ ಕಾಯ್ದುಕೊಂಡರು."

"ಆಃ! ಈ ಜನಾಂಗದ ಸ್ವಾಭಿಮಾನವೂ, ವೀರತ್ವವೂ, ಮಾನನಿಷ್ಠೆಯೂ ಎಷ್ಟೊಂದು ಶ್ಲಾಘನೀಯವು! ಆದದ್ದಾಗಿಹೋಯಿತು. ಈಗ ನನ್ನ ಸಹೋ ದರಿಯ ಸಾವಿನ ಸೇಡನ್ನು ದುಷ್ಟ ಬಹಾದುರನ ಮೇಲೆ ಅತ್ಯಂತ ಕ್ರೂರರೀತಿ ಯಿಂದ ತೀರಿಸಿಕೊಳ್ಳುವೆನು. ಆದರೆ ನನ್ನ ಸೋದರಳಿಯ ಉದಯಸಿಂಗ್....?"

"ಮಹಾರಾಜ್! ರಾಜಕುಮಾರನನ್ನು ಬೂಂದಿಗೆ ಕಳುಹಿಸಲಾಗಿದೆ. ಕುಮಾರನು ಅಲ್ಲಿ ಸುರಕ್ಷಿತವಾಗಿದ್ದಾನೆ."

"ಸರ್ವರಕ್ಷನಾದ ಪರಮಾತ್ಮನಿಗೆ ಅನಂತ ವಂದನೆಗಳು. ನನ್ನ ಸೋದ ರಳಿಯನು ಸಜೀವಿಯಾಗಿ, ಸುಕ್ಷೇಮದಿಂದ್ದಾನೆಂಬ ಶುಭವಾರ್ತೆಯನ್ನು ಕೇಳಿ, ನಾನು ಬಹುಮಟ್ಟಿಗೂ ಹರ್ಷಚಿತ್ತನಾದೆನು. ಈಗ ನನ್ನ ಸೋದರಳಿಯನೇ ಚಿತೋಡಿನ ಸಿಂಹಾಸನದ ಮೇಲೆ ಕುಳಿತು ರಾಜ್ಯಭಾರಗೈಯುವನು. ಉದಯ ಸಿಂಗನನ್ನು ಕರೆತರಲು ಈಕ್ಷಣವೇ ಸೈನಿಕರನ್ನು ಕಳುಹಿಸುತ್ತೇನೆ" ಎಂದು, ಉದಯಸಿಂಗನ ಸಿಂಹಾಸನಾರೋಹಣದ ಮಂಗಳಕಾರ್ಯಕ್ಕೆ ಸಜ್ಜುಗೊಳಿಸಲು ತೆರಳಿದನು.

# ಪಾರ್ವತಿ

**ಬಾಬು ಗಿರಿಜಾಕುಮಾರ್ ಘೋಷ್**

ಭಾರತದ ವೈಭವಸಂಪನ್ನ ಮಹಾನಗರಗಳಲ್ಲಿ ಕನೋಜಿನ ಸ್ಥಾನವು ಅಗ್ರಗಣ್ಯವಾಗಿತ್ತು. ಆ ನಗರದ ವಿಸ್ತಾರ, ಸಿರಿಸಂಪತ್ತು, ಪ್ರಜಾಸಂಖ್ಯೆಗಳನ್ನು ವರ್ಣಿಸುವುದೇ ಅಸದಳವಾಗಿತ್ತು. ಆ ಮಹಾನಗರದಲ್ಲಿ ಕೇವಲ ವೀಳೆದೆಲೆಯನ್ನು ಮಾರುವವರ ಅಂಗಡಿಗಳೇ ಅರವತ್ತು ಸಾವಿರಕ್ಕೆ ಮೀರಿದ್ದುವು ಎಂಬ ವಿಚಾರವನ್ನು ಕುರಿತು ವಿವೇಚಿಸುವಾಗ ಅಲ್ಲಿನ ಮಹತ್ವವು ತಾನಾಗಿ ಅವಗತವಾಗುವುದು.

ಕ್ರಿ. ಶ. ೧೦೧೨ರಲ್ಲಿ ಅವಿಜೇತ ಘಜ್ನಿಮಹಮೂದನು ತನ್ನ ಬಲಿಷ್ಠ ಸೇನೆಯೊಂದಿಗೆ ಕನೋಜ್‌ಪಟ್ಟಣಕ್ಕೆ ಮುತ್ತಿಗೆಹಾಕಿದನು. ದುರ್ಗದ ಬಾಗಿಲುಗಳನ್ನು ಭದ್ರಗೊಳಿಸಿ ಪ್ರಬಲವಾದ ಸಂರಕ್ಷಣಾ ವ್ಯವಸ್ಥೆಯನ್ನು ನಡೆಸಲಾಗಿತ್ತು. ಆದರೂ ಪ್ರತಿಭಟನೆಯು ದೀರ್ಘಕಾಲ ನಡೆಯಲಾರದೆಂದೂ, ಪಟ್ಟಣವು ಬಹುಬೇಗನೆ ಸುಲ್ತಾನನ ವಶವಾಗುವುದೆಂದೂ ಯುದ್ಧಶಾಸ್ತ್ರವಿಚಕ್ಷಣರು ಭಾವಿಸಿದ್ದರು.

ರಾತ್ರಿಯ ಸಮಯ. ನೀಲಾಂಬರದಲ್ಲಿ ಪ್ರಕಾಶಿಸುತ್ತಿದ್ದ ತಾರಾನಿಕರಗಳು ಶುಭ್ರಜಲದಲ್ಲಿ ಬೆಳಗುವ ನೈದಿಲೆಗಳಂತೆ ಗೋಚರಿಸುತ್ತಿದ್ದುವು. ಆ ತಾರಾಕುಮುದ ವಿತಾನಗಳ ಮಧ್ಯೆ ಚಂದ್ರದೇವನೂ ಸುಪ್ರಸನ್ನನಾಗಿ ತೇಲುತ್ತಿದ್ದನು. ವ್ಯಾಪಾರಿಗಳು ತಮ್ಮ ಅಂಗಡಿಗಳನ್ನು ಮುಚ್ಚಿಕೊಂಡು ಮನೆಗಳ ಕಡೆಗೆ ತೆರಳಲಾರಂಭಿಸಿದ್ದರು. ಊಟೋಪಚಾರಗಳಿಂದ ಸಂತೃಪ್ತರಾದವರು ವಿಹಾರಾರ್ಥವಾಗಿ ಮನೆಗಳಿಂದ ಹೊರಟು ಚಂದ್ರಿಕೆಯ ಸವಿಯನ್ನು ಸವಿಯುತ್ತಿದ್ದರು. ಗಂಗಾತೀರದಲ್ಲಿ ಕೆಲವು ಭಕ್ತರು ಕುಳಿತುಕೊಂಡು ಇನ್ನೂ ಜಪಮಣಿಗಳನ್ನು ತಿರುವುತ್ತಿದ್ದರು. ಸಿರಿವಂತರ ಮನೆಗಳಲ್ಲಿ ಪ್ರಣತೆಗಳು ಬೆಳಗುತ್ತಿದ್ದರೆ, ಬಡವರ ಗುಡಿಸಿಲುಗಳಲ್ಲಿ ಅಂಧಕಾರವು ಕವಿದಿದ್ದಿತು. ನಿರುದ್ಯೋಗಿಗಳು ಹಾಸಿಗೆಗಳನ್ನೊರಗಿಕೊಂಡು ನಕ್ಷತ್ರಗಳನ್ನೆಣಿಸುತ್ತಿದ್ದರು. ಈ ಸನ್ನಿವೇಶದಲ್ಲಿ ಅಪರಿಚಯಸ್ಥನೋರ್ವನು ತಲೆಯನ್ನು ತಗ್ಗಿಸಿಕೊಂಡು ರಸ್ತೆಯ ಪಕ್ಕದಲ್ಲಿ ಸಾಗಿ

ಹೋಗುತ್ತಿದ್ದನು. ಜನಗಳು ತಂತಮ್ಮ ಧ್ಯಾನಗಳಲ್ಲಿ ನಿರತರಾಗಿದ್ದುದರಿಂದ ಅವನನ್ನು ಯಾರೂ ಲಕ್ಷಿಸಲಿಲ್ಲ. ಆದರೂ ಒಬ್ಬೊಬ್ಬರು ಕೀಟಲೆಗಾರರು ಅವನ ವಿಚಿತ್ರವೇಷವನ್ನು ನೋಡಿ "ಏನು ಸ್ವಾಮಿ! ಯಾವ ಕಾಡಿನಿಂದ ತಪ್ಪಿಸಿಕೊಂಡು ಬಂದಿರಿ?" ಎಂದು ಕೆಣಕಿದರು. ಆದರೂ ಆತನು ಉತ್ತರ ವೀಯದೆ ಮುಂದೆ ಸಾಗುತ್ತಿದ್ದನು. ನಗರರಕ್ಷಕರೂ ಆತನನ್ನು ತಡೆಯಲಿಲ್ಲ. ಕೊನೆಗೆ ಆತನು ಮಹಾರಾಣಿ ಟೋಲಾ ವಾಸಿಸುತ್ತಿದ್ದ ಕೇರಿಯಲ್ಲಿ ನುಗ್ಗಿ ಹೋದವನು ಪುನಃ ಕಾಣಿಸಿಕೊಳ್ಳಲಿಲ್ಲ. ಜನಶಬ್ದದಿಂದ ತುಂಬಿದ್ದ ನಗರಿಯು ನಿರ್ಜನಪ್ರದೇಶದಂತೆ ನೀರವವಾಗಿತ್ತು. ನಿಶ್ಯಬ್ದವಾತಾವರಣದಲ್ಲಿ ಗಾಢನಿದ್ರಾ ಪರವಶರಾಗಿದ್ದ ಜನರನ್ನು ನಗರರಕ್ಷಕರ 'ಜಾಗ್ರತರಾಗಿರಿ' ಎಂಬ ಶಬ್ದಗಳು ಎಚ್ಚರಗೊಳಿಸುತ್ತಿದ್ದುವು. ಈ ನಿಶೀಥ ಸಮಯದಲ್ಲಿ ಮಂಜುಳವಾಣಿಯುಳ್ಳ ಅಬಲಾಸ್ತ್ರೀಯೋರ್ವಳ ಆರ್ತನಾದವು ನಿಶ್ಯಬ್ದವಾತಾವರಣವನ್ನು ಕಲಕ ಲಾರಂಭಿಸಿತು. "ಅಯ್ಯೋ! ನಾನು ಸತ್ತೆನು. ನೀವು ನನ್ನ ಪಿತೃಸಮಾನರು. ನನ್ನನ್ನು ಬಿಟ್ಟುಬಿಡಿ. ನನ್ನನ್ನು ಬಿಟ್ಟುಬಿಡಿ" ಎಂದು ಆಕೆಯು ಪ್ರಲಾಪಿ ಸುತ್ತಿದ್ದಳು. ಒಬ್ಬ ಸ್ತ್ರೀಯನ್ನು ಇಬ್ಬರು ಬಲಿಷ್ಠ ಪುರುಷರು ಎಳೆದುಕೊಂಡು ಹೋಗುತ್ತಿದ್ದರು. ಅವರು ಉದ್ದವಾದ ಹೊದಿಕೆಗಳಿಂದ ತಮ್ಮ ದೇಹಗಳನ್ನು ಮರೆಸಿಕೊಂಡಿದ್ದರು. ಅವರು ಆ ಸ್ತ್ರೀಯನ್ನು ಅವಳ ಮನೆಯಿಂದ ಅಪಹರಿಸಿ ಕೊಂಡು ಹೋಗಲು ಬಂದಿದ್ದರೆಂದು ಅವರ ಪ್ರಚ್ಛನ್ನ ವೇಷದಿಂದ ಅವಗತ ವಾಗುತ್ತಿತ್ತು. ಅವಳು ತನ್ನ ಮಾನಸಂರಕ್ಷಣೆಗಾಗಿ ಕೂಗಿಕೊಳ್ಳುತ್ತಿದ್ದಳು. ಆದರೆ ಆಶ್ಚರ್ಯವನ್ನುಂಟುಮಾಡುವಂತಹ ವಿಷಯವೆಂದರೆ ಯಾರೊಬ್ಬರೂ ಅವಳ ಸಹಾಯಕ್ಕಾಗಿ ಬರುತ್ತಿರಲಿಲ್ಲ. ಸಮೀಪದಲ್ಲಿಯೇ ಸುಳಿಯುತ್ತಿದ್ದ ನಗರರಕ್ಷಕರೂ ಕೂಡ ಓರ್ವ ಅಬಲಾಸ್ತ್ರೀಯ ಆರ್ತನಾದವನ್ನು ಗಮನಿಸ ದಿದ್ದುದನ್ನು ನೋಡಿದರೆ, ಅವರೂ ಕೂಡ ಈ ಅಪಹರಣಾಪ್ರಯತ್ನದಲ್ಲಿ ಭಾಗಿಗಳಾಗಿದ್ದಾರೆಂದು ತೋರುತ್ತಿತ್ತು. ಜಿಹಾಸೆ, ದುಃಖ, ಕ್ರೋಧಗಳ ಅತಿರೇಕದಿಂದ ಅವಳ ಧ್ವನಿಯು ಕುಗ್ಗಿಹೋಗಲಾರಂಭಿಸಿತು. ಅಷ್ಟರಲ್ಲಿಯೇ ಒಬ್ಬ ದುಷ್ಟನು ಅವಳ ಬಾಯಿಯನ್ನು ಒತ್ತಿಹಿಡಿದನು. ಅಸಹನೀಯ ವೇದನೆ ಯಿಂದ ತರುಣಿಯು ಸಂಕಟಪಡಲಾರಂಭಿಸಿದಳು. ಈ ವೇಳೆಗೆ ಅಪರಿಚಯಸ್ಥ ನೋರ್ವನು ಆ ಸ್ಥಳಕ್ಕೆ ಬಂದು ನಿಂತನು. ಅಲ್ಲಿನ ಅನುಚಿತವರ್ತನೆಯನ್ನು

ಕಂಡು ರೋಷಪರವಶನಾಗಿ "ಚಂಡಾಲರೇ! ಓರ್ವ ಅಬಲಾಸ್ತ್ರೀಯ ಮೇಲೆ ಇಂಥಾ ದೌರ್ಜನ್ಯವನ್ನು ಪ್ರಯೋಗಿಸುತ್ತಿರುವಿರಾ? ಪ್ರಾಣದ ಮೇಲೆ ಅಭಿಲಾಷೆ ಯಿದ್ದರೆ, ಇವಳನ್ನು ಬಿಟ್ಟು ಹೊರಟುಹೋಗಿ. ಇಲ್ಲದಿದ್ದರೆ, ನಿಮ್ಮನ್ನು ಈಗಲೇ ಯಮಸದನಕ್ಕಟ್ಟುವೆನು" ಎಂದನು. "ಎಲೋ ಪಾಪಿ! ತೊಲಗೋ ಇಲ್ಲಿಂದ. ನಮ್ಮ ಸ್ವೇಚ್ಛಾಚಾರದ ಮಧ್ಯೆ ಪ್ರವೇಶಿಸಲು ನೀನು ಯಾವನೋ?" ಹೀಗೆಂದು ಆ ದುಷ್ಟರ ಪೈಕಿ ಒಬ್ಬನು ನುಡಿದು ಸಂಗಾತಿಯ ಕಡೆಗೆ ತಿರುಗಿ "ಓಜಾ! ಮುಖವನ್ನೇನು ನೋಡುತ್ತಿರುವೆ? ಈ ಅವಿವೇಕಿಯ ಗತಿಯನ್ನು ಪೂರೈಸಿಬಿಡು. ನಾನಂತೂ ನಿನ್ನ ಸಮೀಪದಲ್ಲಿಯೇ ಇದ್ದೇನೆ. ಸ್ವಲ್ಪವಾದರೂ ಚಿಂತಿಸಬೇಡ" ಎಂದು ಆಜ್ಞಾಪಿಸಿದನು. ಪಾಪ, ಓಜಾ ಏನು ಹೊಡೆಯಬಲ್ಲ? ಒರೆಯಿಂದ ಖಡ್ಗವೊಂದು ಹೊರಟು ಮಿಂಚಿನಂತೆ ಪ್ರಕಾಶಿಸಿತು. ಕ್ಷಣಾರ್ಧದಲ್ಲಿ ಓಜಾನ ಹೃದಯವನ್ನು ಭೇದಿಸಿಕೊಂಡು ಪಾರಾಯಿತು. ಓಜಾ ತನ್ನ ಪ್ರಭುವಿನ ಪಾದಗಳ ಮೇಲೆ ಬಿದ್ದು ಪ್ರಾಣವನ್ನು ಬಿಟ್ಟನು. ತನ್ನ ಸಂಗಾತಿಗಾದ ದುರವಸ್ಥೆಯನ್ನು ಕಂಡು ಮತ್ತೊಬ್ಬನು ದುಃಖದಿಂದಲೂ, ರೋಷದಿಂದಲೂ ಕೊಲೆಪಾತಕಿಯನ್ನು ನೋಡುತ್ತ "ಚಂಡಾಲ! ಇದೇನನ್ಯಾಯವನ್ನು ಮಾಡಿಬಿಟ್ಟೆ? ನನ್ನ ಅನುಯಾಯಿಯ ರಕ್ತದ ಸೇಡನ್ನು ಖಂಡಿತವಾಗಿಯೂ ತೀರಿಸಿಕೊಳ್ಳುವೆನು. ನಾನು ರಾಜಪುತ್ರನಿದ್ದೇನೆ. ಪ್ರತಿಜ್ಞೆಮಾಡಿ ಹೇಳುತ್ತೇನೆ. ನಿನ್ನನ್ನು ನಾಳೆಯೇ ಶೂಲಕ್ಕೇರಿಸುವೆನು" ಎಂದನು. ಇದಿರಾಳಿಯು ಗಹಗಹಿಸಿ ನಗುತ್ತ "ಪಾಪಿ, ಕೊಂಚ ಬೆಳಗಾಗುವವರೆಗೆ ಸೈರಣೆಯಿಂದಿರು. ಅನಂತರ ನಿನ್ನ ಪೌರುಷವು ಗೊತ್ತಾಗುವುದು. ನೀನು ರಾಜಪುತ್ರನೇಕೆ? ಮಹಾರಾಜನೇ ಆಗಿದ್ದರೂ ನಿನ್ನ ಪ್ರತಿಜ್ಞೆಯನ್ನು ಪೂರ್ಣಗೊಳಿಸಿಕೊಳ್ಳಲಾರೆ. ಈಗ ಕ್ಷೇಮವನ್ನು ಬಯಸುವೆಯಾದರೆ, ಉಸಿರೆತ್ತದೆ ಇಲ್ಲಿಂದ ಹೊರಟು ಹೋಗು. ಇಲ್ಲದಿದ್ದರೆ ನಿನ್ನ ಜೊತೆಗಾರನಿಗಾದ ಗತಿಯೇ ನಿನಗೂ ಆಗುವುದು. ಏನು ಯೋಚಿಸುತ್ತ ನಿಂತಿರುವೆ? ನಡೆ ಇಲ್ಲಿಂದ" ಎಂದು ಗದರಿಸಿದನು. ರಾಜಪುತ್ರನು ಇಂತಹ ಬಿರುನುಡಿಗಳನ್ನಾಡುವ ಬಲಿಷ್ಠ ಇದಿರಾಳಿಯನ್ನು ಎಂದೂ ಕಂಡವನಲ್ಲ. ಆತನು ತುಂಬಾ ಗೊಂದಲಕ್ಕೀಡಾದನು. ಪ್ರತಿರೋಧಿಯನ್ನು ನಿಗ್ರಹಿಸಲಾರ. ನಿರಾಂತಕಳಾಗಿ ಲಭಿಸಿದ್ದ ತನ್ನ ಮನೋಹಾರಿಣಿಯೊಂದಿಗೆ ಮನೀಷೆಯನ್ನು ಪರಿಪೂರ್ಣಗೊಳಿಸಿಕೊಳ್ಳದೆಯೂ ತೊರೆಯಲಾರ.

ಪ್ರತಿಭಟಿಸುವುದಂತೂ ಆತನ ಭಾಗಕ್ಕೆ ದುಃಸಾಧ್ಯವಾಗಿತ್ತು. ಕೊನೆಗೆ ನಿರು ಪಾಯನಾಗಿ ತನ್ನ ಇದಿರಾಳಿಯನ್ನು ಶಪಿಸುತ್ತ ಹೊರಟುಹೋದನು.

ದೌರ್ಜನ್ಯದಿಂದ ಪಾರಾದ ಸ್ತ್ರೀಯು ತನ್ನ ಮಾನಸಂರಕ್ಷಕನಾದ ವೀರ ಪುರುಷನ ಪಾದಗಳ ಮೇಲೆ ಬಿದ್ದು ಉಬ್ಬಿಬಂದ ಕಂಠದಿಂದ "ದಯಾಳು! ಭಗವಂತನು ತಮಗೆ ಸನ್ಮಂಗಳವನ್ನುಂಟುಮಾಡಲಿ. ತಾವು ನನ್ನ ಸ್ತ್ರೀತ್ವ ವನ್ನು ಕಾಪಾಡಿ ನನ್ನ ವಂಶದ ಗೌರವವನ್ನು ಉಳಿಸಿದಿರಿ. ಈಗ ಆ ದುಷ್ಟನು ನನ್ನನ್ನು ಭಯಪಡಿಸುವುದಿಲ್ಲವೇ?" ಎಂದಳು. "ಇಲ್ಲ ತಂಗಿ! ಈಗ ನೀನು ಯಾರಿಗೂ ಭಯಪಡಬೇಕಾಗಿಲ್ಲ" ಎಂದು ಸಮಾಧಾನಪಡಿಸುತ್ತ ಆ ವೀರ ಪುರುಷನು ಅವಳನ್ನು ಮೇಲಕ್ಕೆತ್ತಿದನು. ಭಯಪೀಡನೆಯಿಂದ ಅವಳ ಪರಿ ಸ್ಥಿತಿಯು ಕರುಣಾಜನಕವಾಗಿತ್ತು. ಅವಳು ಥರಥರನೆ ಕಂಪಿಸುತ್ತಿದ್ದಳು. ಮುಂದಡಿಯಿಡಲು ಅಂಜುತ್ತಿದ್ದಳು. ಆಗ ವೀರಪುರುಷನು ಅವಳಿಗೆ ಅಭಯ ವನ್ನಿತ್ತು ಅವಳ ಮನೆಯ ಬಳಿಗೆ ಕರೆದುಕೊಂಡು ಬಂದನು.

ಈ ವೇಳೆಗಾಗಲೇ ಮನೆಯವರೆಲ್ಲರೂ ಜಾಗ್ರತರಾಗಿದ್ದರು. ಮನೆಯ ಲ್ಲೆಲ್ಲಾ ದುಃಖ, ಕಳವಳ ಮತ್ತು ಭೀತಿಯು ಆವರಿಸಿದ್ದಿತು. ಅನ್ಯ ಪುರುಷ ನೊಡನೆ ತನ್ನ ಮಗಳು ಬಂದುದನ್ನು ನೋಡಿದೊಡನೆಯೇ, ಆ ತರುಣಿಯ ತಂದೆಯು ದುಃಖವಿಹ್ವಲನಾಗಿ "ಅಯ್ಯೋ! ಏನು, ನನ್ನ ಮಗಳ ಸರ್ವನಾಶ ವಾಗಿ ಹೋಯಿತೇ? ಈಗ ನಾನು ಸಮಾಜದಲ್ಲಿ ಮುಖತೋರಿಸಲು ಅನರ್ಹ ನಾದೆನೇ?" ಎಂದು ರೋದಿಸಲಾರಂಭಿಸಿದನು. ಅನಂತರ ಗಾಬರಿಯಿಂದ ತನ್ನ ಮಗಳನ್ನು ಕುರಿತು "ಪಾರ್ವತಿ! ಈ ಮಧ್ಯ ರಾತ್ರಿಯಲ್ಲಿ ಅನ್ಯ ಪುರುಷ ನೊಡನೆ ನೀನೆಲ್ಲಿಹೋಗಿದ್ದೆ? ಪಿಶಾಚಿ! ನಿರ್ಲಜ್ಜೆ! ನಿನ್ನ ಜನ್ಮಕ್ಕೆ ನಾಚಿಕೆ ಯಾಗುವುದಿಲ್ಲವೇ?" ಎಂದನು. ಪಾಪ! ಪಾರ್ವತಿಯಲ್ಲಿ ಉತ್ತರವೀಯುವ ಚೈತನ್ಯವಿರಲಿಲ್ಲ. ಅವಳು ಬಿಕ್ಕಿಬಿಕ್ಕಿ ಅಳುವುದಕ್ಕಾರಂಭಿಸಿದಳು. ಪಾರ್ವತಿಯ ಈ ಅವಸ್ಥೆಯನ್ನು ನೋಡಿ ಅಪರಿಚಿತನು ಜರಗಿದ ಸಮಸ್ತ ವೃತ್ತಾಂತವನ್ನೂ ತಿಳಿಸಿದನು. ಇದರಿಂದ ಪಾರ್ವತಿಯ ತಂದೆಗೆ ಕೊಂಚ ಸಮಾಧಾನವಾಯಿ ತಾದರೂ ಸಂಶಯ ನಿವಾರಣೆಯಾಗದೆ "ಪಾರ್ವತಿ! ಈತನು ಸತ್ಯಾಂಶವನ್ನು ನುಡಿಯುತ್ತಿರುವನೇ?" ಎಂದು ಕೇಳಿದನು. ಅದಕ್ಕೆ ಪಾರ್ವತಿಯು "ಈ ಪುಣ್ಯಾ ತ್ಮರಿಲ್ಲದಿರುತ್ತಿದ್ದರೆ, ನನ್ನ ಗತಿಯು ಏನಾಗುತ್ತಿತ್ತೋ! ದೇವರೇಬಲ್ಲ. ಅಯ್ಯೋ,

ನೆನೆಸಿಕೊಂಡರೆ ಈಗಲೂ ಭಯವಾಗುತ್ತದೆ" ಎಂದಳು. ತಂದೆಯು ಮಗಳನ್ನು ಸಮಾಧಾನಪಡಿಸುತ್ತ "ಈಗ ಹೆದರಬೇಕಾದ ಅವಶ್ಯಕತೆಯಿಲ್ಲ. ನಾನೆಲ್ಲವನ್ನೂ ತಿಳಿದುಕೊಂಡೆನು. ಈ ದುಷ್ಕೃತ್ಯವು ಮಹಾಪಾಪಿ ಯಶೋವೀರನದೇ. ಕೊಂಚ ಬೆಳಗಾಗಲಿ. ನಾನು ಯಶೋವೀರನ ತಂದೆಯ ಬಳಿಯಲ್ಲಿ ವ್ಯವಹಾರವನ್ನು ಹೂಡುವೆನು. ಕೋರಾ ನನ್ನ ವ್ಯವಹಾರದಲ್ಲಿ ಸತ್ಯದ ಪರವಾಗಿಯೇ ತೀರ್ಪಿೀಯಬೇಕಾಗುವುದು" ಎಂದನು.

ಸುಲ್ತಾನ್ ಮಹಮೂದನು ಕನೋಜಿಗೆ ಮುತ್ತಿಗೆ ಹಾಕಿದ್ದ ಕಾಲದಲ್ಲಿ ಕೋರಾ ರಾಠೋರ ಸಂಸ್ಥಾನದ ರಾಜನಾಗಿದ್ದನು. ಕೋರಾ ಮುಖಚರ್ಯೆ ಯಿಂದಲೂ, ಅಂಗರಚನೆಯಿಂದಲೂ ಸುರೂಪಿಯಾಗಿ ಕಾಣುತ್ತಿರಲಿಲ್ಲ. ಆದರೆ ಸುಗುಣಿಯೂ, ರಾಜನೀತಿ ವಿಶಾರದನೂ ಆಗಿದ್ದನು. ಇವನ ಮಗ ಯಶೋ ವೀರನು ಮಾರನಾಕಾರವನ್ನು ಹೊಂದಿದ್ದನು. ಅವನ ಬಲಿಷ್ಠವಾದ ಮಾಂಸ ಖಂಡಗಳಿಂದ ತುಂಬಿರುವ ನಯನಕಾಂತ ಸುಂದರಮೂರ್ತಿಯನ್ನು ನೋಡಿ ದವರಿಗೆ ಇದೇನು ? ಎರಕವನ್ನು ಹೊಯ್ದು ರಚಿಸಿರುವ ಸೌಂದರ್ಯದ ಪ್ರತಿಮೆಯೋ! ಎಂಬಂತೆ ಗೋಚರಿಸುತ್ತಿದ್ದನು. ಅವನ ಮನಮೋಹಕ ಮನೋಹರಾಕೃತಿಯ ಅವಲೋಕನ ಮಾತ್ರದಿಂದಲೇ ಜನರೆಲ್ಲರೂ ಹರ್ಷಚಿತ್ತ ರಾಗುತ್ತಿದ್ದರು. ಬಹುಮಟ್ಟಿಗೂ ಜಗದಾನುಭವವಿಲ್ಲದ ಸ್ತ್ರೀಯರು ಆತನ ಮಾಯಾಜಾಲದಲ್ಲಿ ಬಂಧಿಸಲ್ಪಡುತ್ತಿದ್ದವರು ತಮ್ಮ ಸರ್ವಸ್ವವನ್ನೂ ಆತನಿ ಗರ್ಪಿಸದೆ ಬಿಡುಗಡೆಯನ್ನು ಹೊಂದುತ್ತಿರಲಿಲ್ಲ. ಈ ವಿಲಾಸಪ್ರಿಯನು ಅಹರ್ನಿ ಶಿಯೂ ವಿಷಯಸುಖಲೋಲುಪ್ತಿಯಲ್ಲಿ ನಿರತನಾಗಿರುತ್ತಿದ್ದನು. ತನ್ನ ವಿಷಯ ಸುಖಾಭಿಲಾಷೆಯ ಇದಿರಿನಲ್ಲಿ ಆತನು ಇತರರ ಸ್ಥಾನಮಾನಗಳನ್ನೂ, ದುಃಖ ಸಂಕಟಗಳನ್ನೂ ಲಕ್ಷಿಸುತ್ತಿರಲಿಲ್ಲ. ಕುಡುಕರೂ, ಜೂಜುಗಾರರೂ, ಪಾಷಂಡರೂ ಆತನ ಮಿತ್ರರಾಗಿದ್ದರು. ಏನೂ ಅರಿಯದ ಮುಗ್ಧಬಾಲೆಯರ ಪಾತಿವ್ರತ್ಯದ ಮೇಲೆ ಮಸಿಯನ್ನು ಚೆಲ್ಲುವುದೆಂದರೆ ಆತನಿಗೆ ಲೀಲೆಯಾಗಿತ್ತು.

ಪಾರ್ವತಿಯು ಓರ್ವ ವೃದ್ಧ ಶ್ರೀಮಂತನ ಏಕಮಾತ್ರ ಪುತ್ರಿ; ಸೌಂಧ ರ್ಯದ ಖನಿ; ಮಂದಸ್ಮಿತವದನೆ; ನಿರುಪಮ ಸುಶೀಲೆ. ಈ ಸೌಂದರ್ಯದ ದೇವಿಯನ್ನು ನೋಡಿದವರಿಗೆ ದೇವಲೋಕದರಂಭೆಯು ಗಗನಮಧ್ಯದಿಂದಿಳಿದು ಬಂದಿರುವಳೋ! ಎಂದು ಭ್ರಮೆಯಾಗುತ್ತಿತ್ತು. ಸಹಸ್ರಾರು ಪುರುಷರು ಆಕೆಯ

ಆರಾಧಕರಾಗಿದ್ದರು. ಆದರೆ ಆಕೆಯು ಮಾತ್ರ ಯಾವ ಪುರುಷನನ್ನೂ ಆರಾಧಿಸುತ್ತಿರಲಿಲ್ಲ. ಸ್ತ್ರೀಯರು ಈ ಪುಷ್ಪರಾಣಿಯನ್ನು ಭ್ರಮರಗಳಂತೆ ಮುತ್ತಿಕೊಂಡಿರುತ್ತಿದ್ದರು. ಆದರೆ ಈಕೆಗೆ ತಿಲಾರ್ಧವಾದರೂ ತನ್ನ ಸೌಂದರ್ಯದ ವಿಷಯದಲ್ಲಿ ಗರ್ವವಾಗಲೀ, ತನ್ನ ಸಖಿಯರ ವಿಚಾರದಲ್ಲಿ ತಿರಸ್ಕಾರ ಭಾವನೆಯಾಗಲೀ ಉಂಟಾಗುತ್ತಿರಲಿಲ್ಲ. ತನ್ನ ಸುಗುಣಾವಳಿಗಳಿಂದ ಪ್ರತಿಯೊಬ್ಬರ ಮನಸ್ಸಿಗೂ ಆನಂದವನ್ನುಂಟುಮಾಡುತ್ತಿದ್ದಳು. ಅವಳು ಇಂದಿನವರೆಗೂ ಕುಮಾರಿಯಾಗಿಯೇ ಇದ್ದಳು. ಸಹಸ್ರಾರು ಸಂದೇಶಗಳು ಅವಳ ಬಾಗಿಲಿಗೆ ಬಂದಿದ್ದುವು. ಆದರೆ ಅವಳ ತಂದೆಯು ಇನ್ನೂ ವಿವಾಹಕಾರ್‍ಯವನ್ನು ನಡೆಸುವ ಚಿಂತೆಯಲ್ಲಿಯೇ ಇರಲಿಲ್ಲ. ಏಕೆಂದರೆ ಅವಳಿಗೆ ಅನುರೂಪನಾದ ವರನನ್ನು ಹುಡುಕುವ ಪ್ರಯತ್ನದಲ್ಲಿ ಅವನಿನ್ನೂ ಕೃತಕೃತ್ಯನಾಗಿರಲಿಲ್ಲ. ಒಂದು ದಿನ ಅಕಸ್ಮಾತ್ ಯಶೋವೀರನ ಕಾಮೋನ್ಮತ್ತ ನಯನಗಳಿಗೆ ಪಾರ್ವತಿಯ ಸುಂದರಾಕೃತಿಯು ಗೋಚರಿಸಿತು. ಅಂದಿನಿಂದ ಅವನು ಪಾರ್ವತಿಯನ್ನು ಪಡೆಯಲು ಹಾತೊರೆಯಲಾರಂಭಿಸಿದನು. ಅನೇಕ ವೇಳೆ ಅವನು ಪಾರ್ವತಿಯನ್ನು ಏಕಾಂತದಲ್ಲಿ ಸಂಧಿಸಿ ಅವಳನ್ನು ತನ್ನ ಪಾಶದಲ್ಲಿ ಬಂಧಿಸಿಕೊಳ್ಳಲು ಪ್ರಯತ್ನಿಸಿದನು. ಆದರೆ ಪ್ರತಿಯೊಂದು ವೇಳೆಯೂ ಪಾರ್ವತಿಯು ಅವನನ್ನು ಧಿಕ್ಕರಿಸುತ್ತಿದ್ದಳು. ಇಷ್ಟಾದರೂ ಅವನ ಮನೋಚಾಂಚಲ್ಯವು ಸ್ಥಿಮಿತಕ್ಕೆ ಬರಲಿಲ್ಲ. ಅವನು ಪಾರ್ವತಿಯನ್ನು ಅವಳ ಮನೆಯಿಂದ ಅಪಹರಿಸಿಕೊಂಡುಹೋಗಿ ಬಲವಂತದಿಂದ ತನ್ನ ಅಭೀಷ್ಟವನ್ನು ನೆರವೇರಿಸಿಕೊಳ್ಳಬೇಕೆಂದು ಸಂಕಲ್ಪಿಸಿದನು. ಕೊನೆಗೆ ತನ್ನ ಪ್ರಯತ್ನದಲ್ಲಿಯೂ ಪೂರ್ಣಕಾಮನಾದನು. ಆದರೆ ಆತನ ಮನೀಷೆಯು ಮಾತ್ರ ಫಲಿಸಲಿಲ್ಲ. ಅಪರಿಚಿತನೊಬ್ಬನು ಪಾರ್ವತಿಯನ್ನು ಅವನ ಹಸ್ತದಿಂದ ಬಿಡಿಸಿ ಅವಳ ಸ್ತ್ರೀತ್ವವನ್ನು ಕಾಪಾಡಿದನು.

ಯಾವ ರಾತ್ರಿಯಲ್ಲಿ ಯಶೋವೀರನ ಕರಾಳ ಹಸ್ತದಿಂದ ಅಪರಿಚಿತನು ಪಾರ್ವತಿಯನ್ನು ಸಂರಕ್ಷಿಸಿದನೋ, ಅದರ ಮರುದಿನವೇ ಮುಸಲ್ಮಾನರು ವೀರಾವೇಶದಿಂದ ಕನೋಜಿನ ಮೇಲೆ ಧಾಳಿ ನಡೆಸಿ ಪಟ್ಟಣವನ್ನೆಲ್ಲಾ ತಮ್ಮ ಸ್ವಾಧೀನಗೊಳಿಸಿಕೊಂಡರು. ಕನೋಜ್ ಜೈಸಲ್ಪಟ್ಟಿತು. ಈಗ ಕನೋಜಿನ ರಾಜನೂ, ಸೈನಿಕರೂ, ಪ್ರಜೆಗಳೂ ಸುಲ್ತಾನನ ಮುಷ್ಟಿಯಲ್ಲಿ ಸಿಲುಕಿಕೊಂಡರು.

ಅವನು ಇಚ್ಛಿಸಿದ್ದಿದ್ದರೆ ಅವರನ್ನೆಲ್ಲಾ ನಿಪಾತಗೊಳಿಸಿಬಿಡುತ್ತಿದ್ದನು. ಆದರೆ ಆ ಧೀರೋದಾತ್ತ ಸುಲ್ತಾನನು ಅಂತಹ ಯಾವ ಅಕೃತ್ಯದ ಕಡೆಗೂ ಗಮನ ವೀಯಲಿಲ್ಲ. ಯಾರನ್ನೂ ಹಿಂಸಿಸಲಿಲ್ಲ. ಯಾರ ಸೊತ್ತನ್ನೂ ಅಪಹರಿಸಲಿಲ್ಲ. ಕೊಲೆ, ಸುಲಿಗೆಗಳನ್ನು ನಡೆಸುವ ಸೈನಿಕರಿಗೆ ಉಗ್ರಶಿಕ್ಷೆಯು ವಿಧಿಸಲ್ಪಡುವು ದೆಂದು ಆಜ್ಞೆಯಿತ್ತನು. ಪ್ರಜೆಗಳೆಲ್ಲರೂ ನಿರ್ಭೀತರಾಗಿಯೂ, ಶಾಂತಚಿತ್ತ ರಾಗಿಯೂ ಇರಬೇಕೆಂದು ಪಟ್ಟಣದಲ್ಲೆಲ್ಲಾ ಡಂಗೂರವನ್ನು ಹೊಡೆಸಿದನು. ಅತ್ಯಲ್ಪಕಾಲದಲ್ಲಿಯೇ ಪಟ್ಟಣದಲ್ಲಿ ಶಾಂತಿಯು ನೆಲಸಿತು. ಪ್ರಜೆಗಳೆಲ್ಲರೂ ತಂತಮ್ಮ ಕರ್ತವ್ಯಗಳಲ್ಲಿ ನಿರತರಾದರು. ರಾಜನು ಸುಲ್ತಾನ್ ಮಹಮೂದನ ಆಸ್ಥಾನದಲ್ಲಿ ಪ್ರಾಣದಾನಕ್ಕಾಗಿ ಪ್ರವೇಶಿಸಬೇಕಾಯಿತು. ಆದರೆ ಸುಲ್ತಾನನು ರಾಜನನ್ನು ತನ್ನ ಸಮಾನಸ್ಕನಂತೆ ಗೌರವಿಸಿದನು. ಆತನನ್ನು ಬಂದಿಯೆಂದು ಭಾವಿಸದೆ ಆತನೊಂದಿಗೆ ಸಹೋದರನಂತೆ ವರ್ತಿಸಿದನು. ಸುಲ್ತಾನ್‌ಮಹ ಮೂದನು ಹೇಗೆ ಅಸಹಾಯಶೂರನಾಗಿದ್ದನೋ, ಹಾಗೆಯೇ ರಾಜನೀತಿ ಯಲ್ಲಿಯೂ, ದಯಾಗುಣದಲ್ಲಿಯೂ, ವಿವೇಚನಾಜ್ಞಾನದಲ್ಲಿಯೂ ಅಸಮಾನ ನಾಗಿದ್ದನು. ವಿನಯ-ವಿಶ್ವಾಸದಿಂದ, ಸೌಜನ್ಯದಿಂದ ನಡೆದುಕೊಂಡರೆ ಮಾತ್ರವೇ ಭಾರತದಲ್ಲಿ ತನ್ನ ಶಕ್ತಿಯು ಸ್ಥಾಯಿಯಾಗಿರಬಲ್ಲದೆಂದು ತಿಳಿದು ಕೊಂಡಿದ್ದನು. ರಾಹೋರ ಸಂಸ್ಥಾನದವರೊಂದಿಗೆ ಸಭ್ಯತೆಯಿಂದ ವರ್ತಿಸಿದರೆ ಅವರೆಲ್ಲರೂ ತನಗೆ ಭುಜಬಲರಾಗಿ ನಿಲ್ಲುವರೆಂದು ಭಾವಿಸಿಕೊಂಡಿದ್ದನು.

ರಾಜನು ಸುಲ್ತಾನನ ದರ್ಬಾರಿನಲ್ಲಿ ಪ್ರವೇಶಿಸಿದಾಗ, ಅವನೊಡನೆ ಅನೇಕ ಆಸ್ಥಾನಿಕರೂ ಬಂದಿದ್ದರು. ಅವರೆಲ್ಲರೂ ಸುಲ್ತಾನನಿಗೆ ನಜರು ಗಳನ್ನೊಪ್ಪಿಸಿ ಪ್ರತಿಯಾಗಿ ಆತನಿಂದ ಸಮ್ಮಾನಿಸಲ್ಪಟ್ಟರು. ಯುವರಾಜ ಯಶೋವೀರನು ತನ್ನ ನಜರನ್ನರ್ಪಿಸಿ ಭಕ್ತಿಯಿಂದ ಸುಲ್ತಾನನನ್ನು ವಂದಿಸಿ ದಾಗ, ಸುಲ್ತಾನನು ಅವನ ಮುಖವನ್ನು ನೋಡಿ ಮುಗುಳ್ನಗೆಯನ್ನು ಬೀರಿದನು. ಯಶೋವೀರನು ಚಕಿತನಾಗಿ ನಿಂತನು. ಆತನ ಮುಖವು ವಿಷಣ್ಣವಾಯಿತು. ಈಗ ಸುಲ್ತಾನನ ತುಟಿಗಳಿಂದ ನಗುವು ಮಾಯವಾಯಿತು. ಸಿಟ್ಟಿನಿಂದ ಅವನ ಹುಬ್ಬುಗಳು ಗಂಟಿಕ್ಕಿದುವು. ಅವನು ತಿರಸ್ಕಾರದೃಷ್ಟಿಯಿಂದ ಯಶೋವೀರನನ್ನು ನೋಡುತ್ತ "ನೀವು ನೆನ್ನೆ ರಾತ್ರಿ ನನ್ನನ್ನು ಶೂಲಕ್ಕೇರಿಸುವ ಪ್ರತಿಜ್ಞೆ ಮಾಡಿರಲಿಲ್ಲವೇ? ಇದೋ, ಸಿದ್ಧನಾಗಿದ್ದೇನೆ. ನನ್ನ ಮೇಲೆ ವ್ಯವ

ಹಾರವನ್ನು ಹೂಡಿರಿ. ನೋಡೋಣ, ವ್ಯವಹಾರದಲ್ಲಿ ನನಗೆ ಉತ್ತರವೀಯುವ ಸಾಮರ್ಥ್ಯವಿರುವುದೋ ಇಲ್ಲವೋ!" ಎಂದನು. ಸುಲ್ತಾನನ ವಾಕ್ಯಗಳಿಂದ ಯಶೋವೀರನು ಕಂಪಿಸಿಹೋದನು. ನಾಚಿಕೆಯಿಂದ ತಲೆಯನ್ನು ತಗ್ಗಿಸಿ ಕೊಂಡನು. ಆತನಲ್ಲಿ ಒಂದು ವಾಕ್ಯವನ್ನಾದರೂ ಉಸುರುವ ಸಾಮರ್ಥ್ಯ ವಿರಲಿಲ್ಲ. ಯಶೋವೀರನ ಈ ಮೌನವನ್ನು ಕಂಡು ಸುಲ್ತಾನನು "ನಿಮ್ಮ ಈ ತಾಟಸ್ಥ್ಯದಿಂದ ನೀವು ಉತ್ತರವೀಯಲು ಇಚ್ಛಿಸುತ್ತಿಲ್ಲವೆಂದು ತೋರುತ್ತಿದೆ. ಆಗಲಿ, ಈಗ ನಾನು ನಿಮ್ಮ ತಂದೆಯವರ ಸನ್ನಿಧಿಯಲ್ಲಿ ನಿಮ್ಮ ಮೇಲೆ, ವಿರುದ್ಧ ವಾರ್ತೆಯನ್ನು ತಿಳಿಸುವೆನು. ನೀವು ಅವರಿಗೆ ಉತ್ತರವನ್ನು ಕೊಡಲೇ ಬೇಕಾಗುವುದು" ಎಂದವನೇ ರಾಜನ ಕಡೆಗೆ ತಿರುಗಿ "ಮಹಾರಾಜ್! ಈ ತರುಣನು ನೆನ್ನೆ ರಾತ್ರಿ ಬಾಲೆಯೊಬ್ಬಳ ಮೇಲೆ ಅತ್ಯಾಚಾರವನ್ನು ನಡೆಸು ತ್ತಿದ್ದನು. ಇನ್ನೇನು ಅವಳ ಸ್ತ್ರೀತ್ವವು ಹರಣವಾಗಬೇಕು, ಅಷ್ಟರಲ್ಲಿಯೇ ನಾನು ಅಲ್ಲಿ ಪ್ರವೇಶಿಸಿ ಅವಳನ್ನು ರಕ್ಷಿಸಿಕೊಂಡೆನು. ಆ ಬಾಲೆಯು ನಿಮ್ಮ ಪ್ರಜಾವರ್ಗಕ್ಕೆ ಸೇರಿದವಳು. ಈಗ ನೀವೇ ಈ ವ್ಯವಹಾರವನ್ನು ಪರಿಶೀಲಿಸಿ ನ್ಯಾಯದ ಪರವಾಗಿ ತೀರ್ಪಿಯಿರಿ" ಎಂದನು. ಅನಂತರ ಯಶೋವೀರನ ಕಡೆಗೆ ತಿರುಗಿ "ಏನು ನಾನು ಸುಳ್ಳನ್ನು ಹೇಳುತ್ತಿರುವೆನೇ?" ಎಂದು ಪ್ರಶ್ನಿಸಿದನು. ಯಶೋವೀರನು ಉಸಿರಾಡಲಿಲ್ಲ. ಪುನಃ ಸುಲ್ತಾನನು ರಾಜನನ್ನು ಕುರಿತು "ನಿಮ್ಮ ನ್ಯಾಯಶಾಸನದಲ್ಲಿ ಈ ಅಪರಾಧಕ್ಕೆ ಯಾವ ಶಿಕ್ಷೆಯು ವಿಧಿಸಲ್ಪಟ್ಟಿದೆ?" ಎಂದು ಕೇಳಿದನು. ಅದಕ್ಕೆ ರಾಜನು "ಕನೋಜಿನಲ್ಲಿ ಈಗ ನನ್ನ ನ್ಯಾಯಶಾಸನವಿಲ್ಲ. ನಾನು ಸುಲ್ತಾನರ ಶಾಸನವನ್ನೇ, ನನ್ನ ಶಾಸನ ವೆಂದು ಅಂಗೀಕರಿಸಿದ್ದೇನೆ. ಸುಲ್ತಾನರು ತಮಗೆ ಸೂಕ್ತ ಕಂಡರೀತ್ಯಾ ತೀರ್ಪಿಯಬಹುದು" ಎಂದನು. ಮುಹಮೂದನು ಸ್ವಲ್ಪಹೊತ್ತು ಯೋಚಿಸಿ ತನ್ನ ತೀರ್ಪಿತ್ತನು. "ನಾನು ರಾಜಕುಮಾರನೊಡನೆ ಉದಾರತೆಯಿಂದ ವರ್ತಿಸುತ್ತೇನೆ. ನಾನು ಈತನಿಗೆ ವಿಧಿಸುವ ಶಿಕ್ಷೆಯೆಂದರೆ ಈತನು ಪಾರ್ವತಿ ಯನ್ನು ವಿವಾಹವಾಗಲು ಸಿದ್ಧನಾಗಬೇಕು. ಈಗ ಅವಳನ್ನು ಇತರರು ವಿವಾಹವಾಗಲು ಇಚ್ಛಿಸರು. ಈತನೇ ಆ ನಿರ್ದೋಷ ಬಾಲೆಯ ಸೌಶೀಲ್ಯದ ಮೇಲೆ ಕಳಂಕವನ್ನು ಹಚ್ಚಲು ಪ್ರಯತ್ನಿಸಿದ್ದನು. ಆದ್ದರಿಂದ ಈಗಲೇ ಪಾರ್ವತಿಯನ್ನೂ, ಅವಳ ತಂದೆಯನ್ನೂ ಕರೆಸಿರಿ. ನಾನು ಇಲ್ಲಿಂದ ಹೊರಡು

ವುದಕ್ಕಿಂತ ಮುಂಚಿತವಾಗಿಯೇ ಈ ವಿವಾಹ ಮಹೋತ್ಸವವನ್ನು ನನ್ನ ಕಣ್ಣುಗಳಿಂದ ನೋಡಬೇಕಾಗಿದೆ.”

ರಾಜಾಜ್ಞೆಯು ಹೋದ ಮರುಕ್ಷಣದಲ್ಲಿಯೇ ಪಾರ್ವತಿಯೂ, ಅವಳ ತಂದೆಯೂ ಆಸ್ಥಾನದಲ್ಲಿ ಪ್ರವೇಶಿಸಿದರು. ಸುಲ್ತಾನನನ್ನು ಕಂಡೊಡನೆಯೇ ತಮ್ಮ ಮಾನಸಂರಕ್ಷಕನೆಂದು ತಿಳಿದುಕೊಂಡರು. ತಕ್ಷಣವೇ ತಮ್ಮ ಪ್ರಣಾಮ ಗಳನ್ನು ಅರ್ಪಿಸಲು ಅವನ ಪಾದಗಳ ಮೇಲೆ ಬಿದ್ದರು. ಸುಲ್ತಾನನು ಅತ್ಯಂತ ಪ್ರೀತಿಯಿಂದ ಇಬ್ಬರನ್ನೂ ಮೇಲಕ್ಕೆತ್ತಿದನು. ಮತ್ತು ತನ್ನ ಮನೋಭಿಲಾಷೆ ಯನ್ನು ವ್ಯಕ್ತಗೊಳಿಸಿದನು. ಪಾರ್ವತಿಯ ವೃದ್ಧತಂದೆಯು ಒಂದು ದಿನ ತನ್ನ ಮಗಳು ರಾಣಿಯಾಗುವಳೆಂದು ಸ್ವಪ್ನದಲ್ಲಿಯೂ ತಿಳಿದಿರಲಿಲ್ಲ. ಈಗ ಆತನ ಸಂತೋಷಕ್ಕೆ ಮಿತಿಯಿಲ್ಲವಾಯಿತು. ಹರ್ಷಾಧಿಕ್ಯದಿಂದ ಆತನ ನಾಲಿಗೆಯು ಚಲಿಸದೆ ನಿಂತಿತು. ಆದರೆ ಪಾರ್ವತಿಯು ನಿರಾಶೆಯಿಂದ ನಿಟ್ಟುಸಿರನ್ನು ಬಿಡಲಾರಂಭಿಸಿದಳು. ಅವಳ ಮುಖದ ಮೇಲೆದ್ದು ಕಾಣುತ್ತಿದ್ದ ಭಾವನೆ ಗಳಿಂದ ಅವಳು ಸಂಪೂರ್ಣವಾಗಿಯೂ ಈ ವಿವಾಹಕ್ಕೆ ಅಸಮ್ಮತಿಯನ್ನು ಸೂಚಿಸುತ್ತಿದ್ದಳೆಂದು ತೋರುತ್ತಿತ್ತು. ಸುಲ್ತಾನನು ಪಾರ್ವತಿಯ ಮುಖ ಮುದ್ರೆಯನ್ನು ನೋಡಿ “ತಂಗಿ, ನೀನು ಅಂಜದಿರು. ನಿರ್ವಂಚನೆಯಿಂದ ಮನೋಭಿಲಾಷೆಯನ್ನು ತಿಳಿಸು. ಏನು, ನೀನು ಮತ್ತೊಬ್ಬನಿಗೆ ನಿನ್ನ ಆತ್ಮ ವನ್ನು ಅರ್ಪಿಸಿರುವೆಯಾ ? ಹಾಗಿದ್ದಲ್ಲಿ ನಿನ್ನನ್ನು ನಾನು ಈ ವಿವಾಹಕ್ಕಾಗಿ ನಿರ್ಬಂಧಿಸಲಾರೆನು. ನಿನ್ನ ಅಭೀಷ್ಟವು ತಿಳಿದೊಡನೆಯೇ ನನ್ನ ಆಜ್ಞೆ ಯನ್ನು ಹಿಂದೆಗೆದುಕೊಳ್ಳುವೆನು. ನೀನು ಯಾರನ್ನು ಬಯಸುವೆಯೋ, ಆತನೊಡನೆ ನಿನ್ನ ವಿವಾಹವನ್ನು ನೆರವೇರಿಸುವೆನು” ಎಂದನು. ಪಾರ್ವತಿಯು ಒಂದು ಶಬ್ದವನ್ನಾದರೂ ಉಸುರಲಿಲ್ಲ. ಆದರೆ ಆಶಾಭರಿತ ದೃಷ್ಟಿಯಿಂದ ಸುಲ್ತಾನನನ್ನು ನೋಡಲಾರಂಭಿಸಿದಳು. “ನನ್ನನ್ನು ತಮ್ಮ ಚರಣ ಸೇವೆ ಯಲ್ಲಿ ತೆಗೆದುಕೊಳ್ಳಿ” ಎಂದು ಅವಳ ನೇತ್ರಯುಗ್ಮವು ನುಡಿಯುತ್ತಿತ್ತು. ಸುಲ್ತಾನನು ವಾಸ್ತವಾಂಶವನ್ನು ಅರಿತುಕೊಂಡನು. ಕ್ಷಣಕಾಲ ಆತನ ಹೃದ ಯಾಬ್ಧಿಯಲ್ಲಿ ವಿವಿಧ ವಿಚಾರತರಂಗಗಳೆದ್ದು ಅವನ ಚಿತ್ತದ ಶಾಂತಿಯನ್ನು ಕಲಕಿದುವು. ಅವನು ವಿಚಿತ್ರವಾದ ಪೇಚಾಟದಲ್ಲಿ ಸಿಕ್ಕಿಕೊಂಡನು. ಪಾರ್ವ ತಿಯು ಸುಲ್ತಾನನ ಮುಖಭಾವದಿಂದ ಅವನ ಮನೋವ್ಯಾಪಾರವನ್ನು ತಿಳಿದು

ಕೊಂಡಳು. ಸುಲ್ತಾನನು ತನ್ನ ಮುಖವನ್ನು ಪಕ್ಕಕ್ಕೆ ತಿರುಗಿಸಿಕೊಂಡನು. ಆತನ ಕಣ್ಣುಗಳಿಂದ ನೀರಿನ ಹನಿಗಳು ತೊಟ್ಟಿಕ್ಕಿದುವು.

ಸುಲ್ತಾನ್‌ಮಹಮೂದನು ಪುನಃ ಮೂರು ದಿನಗಳವರೆಗೆ ಕನೋಜಿನಲ್ಲಿ ನಿಂತನು. ಮೂರನೆಯ ದಿವಸ ಯಶೋವೀರನೊಡನೆ ಪಾರ್ವತಿಯ ವಿವಾಹವು ಅತ್ಯಂತ ವೈಭವದಿಂದ ನಡೆಯಿತು. ವಿವಾಹಮಹೋತ್ಸವದಲ್ಲಿ ಸ್ವತಃ ಸುಲ್ತಾನನೂ ಭಾಗಿಯಾಗಿದ್ದನು. ವಿವಾಹದ ವಿಧಿಗಳೆಲ್ಲವೂ ಪೂರ್ಣಗೊಂಡ ಮೇಲೆ ಸುಲ್ತಾನನು ಪಾರ್ವತಿಯ ಹಸ್ತವನ್ನು ಹಿಡಿದುಕೊಂಡು "ತಂಗೀ! ನೀನು ದೀರ್ಘಸುಮಂಗಲಿಯಾಗಿರು. ಸದಾ ಸುಖಿಯಾಗಿರು. ಭಗವಂತನು ನಿನ್ನ ಸಕಲಾಕಾಂಕ್ಷೆಗಳನ್ನೂ ಪೂರ್ಣಗೊಳಿಸಲಿ" ಎಂದು ಆಶೀರ್ವದಿಸಿದನು. ಒಡನೆಯೇ ಆತನ ಹಸ್ತದ ಮೇಲೆ ಅಶ್ರುಜಲದ ಎರಡು ತಪ್ತಬಿಂದುಗಳುದುರಿದುವು. ತಕ್ಷಣವೇ ಸುಲ್ತಾನನು ತನ್ನ ಕರವನ್ನು ಹಿಂದಕ್ಕೆಳೆದುಕೊಂಡನು.

# ಹಮೀದಾ

ಅಂದು ಖುಸ್ತುಂತನಿಯಾ ದುಃಖದ ಕಾರ್ಮೋಡದಿಂದ ಆಚ್ಛಾದಿತ ವಾಗಿದ್ದಿತು. ಪಟ್ಟಣದ ಬೀದಿಬೀದಿಗಳಿಂದ ರಕ್ತಲಹರಿಗಳು ಪ್ರವಹಿಸು ತ್ತಿದ್ದುವು. ಸಹಸ್ರಾರು ನಗರರಂಜಕ ಉನ್ನತ ಸೌಧಗಳು ಅಗ್ನಿಯ ವಿಕರಾಲ ಜ್ವಾಲೆಗೆ ಆಹುತಿಯಾಗಿದ್ದುವು. ಅಸಂಖ್ಯಾತ ತುರ್ಕೀ ವೀರಯೋಧರು ನಿರ್ಜೀವಾತ್ಮರಾಗಿ, ಬಾಸ್ಫೊರಸ್ಸಿನ ಸಲಿಲಶಯ್ಯೆಯ ಮೇಲೆ ಶಯನಿಸಿದ್ದರು. ಆ ಕರ್ಣಭಯಂಕರ ಆರ್ತನಿಸ್ವನ! ಆ ಹೃದಯದಾರ ಪ್ರಲಾಪನಿಕ್ವಣ! ಆ ನಯನಭೀಕರ ನರನಿಸೂದನ! ಪ್ರಳಯದ ಭೈರವನಾಟ್ಯವನ್ನು ಪ್ರದರ್ಶಿ ಸುತ್ತಿದ್ದುವು. ಈ ಸಂದರ್ಭದಲ್ಲಿ ಯಸ್ದಾನಿ! ತುರ್ಕಿಯ ಸೇನಾಧಿನಾಥ ಯಸ್ದಾನಿ! ಯಾರ ನಾಮಸ್ಮರಣ ಮಾತ್ರದಿಂದಲೇ ವೀರಾಗ್ರಣಿಗಳ ಹೃದಯ ಗಳು ಕಂಪಿಸಿಹೋಗುತ್ತಿದ್ದುವೋ, ಆ ಅದ್ಭುತ ಪರಾಕ್ರಮಿ ಯಸ್ದಾನಿ! ಶೃಂಖಲೆಗಳಿಂದ ಬಂಧಿತನಾಗಿ ತನ್ನ ಜೀವನ ಮರಣದ ಅಂತ್ಯ ತೀರ್ಮಾನ ವನ್ನು ಕೇಳಲು, ತಾತಾರಿ ಮಹಾನಾಯಕನ ಇದಿರಿನಲ್ಲಿ ನತಮುಖನಾಗಿ ನಿಂತಿದ್ದನು. ಆದರೂ ಅದೇ ವೀರಸಹಜವಾದ ನಿಲುವು. ಅದೇ ಉಬ್ಬಿ ಬಂದಿರುವ ಕೆಚ್ಚೆದೆ. ಮುಖದ ಮೇಲೆ ಅದೇ ಗಂಭೀರಮುದ್ರೆ. ನಾಲ್ದೆಸೆ ಗಳಲ್ಲಿಯೂ ಮರಣಸದೃಶ ನೀರವವು ವ್ಯಾಪೃತವಾಗಿದ್ದಿತು.

"ಏನನ್ನು ಬಯಸುವಿರಿ? ಜೀವನವನ್ನೇ ಅಥವಾ ಮರಣವನ್ನೇ?" ತಾತಾರಿ ಮಹಾನಾಯಕನು ಗರ್ಜಿಸಿದನು.

ಯಸ್ದಾನಿ ನಿಧಾನವಾಗಿ ತನ್ನ ಮುಖವನ್ನು ಮೇಲಕ್ಕೆತ್ತಿದನು. ಅನಂತರ ತನ್ನ ಗಂಭೀರವಾಣಿಯಿಂದ ನುಡಿದನು. "ಗೌರವದ ಜೀವನವು ಲಭಿಸುವು ದಾದರೆ ಜೀವನವನ್ನು. ಇಲ್ಲದಿದ್ದರೆ ಮರಣವನ್ನು. ಅಗೌರವದ ಬಾಳ್ವೆಗಿಂತ ಸಾವು ಸಹಸ್ರಪಾಲು ಶ್ರೇಷ್ಠವಾದುದು."

ರೋಷದಿಂದ ತೈಮೂರನ ಮುಖವು ಕೆಂಪೇರಿತು. ಆತನಿಗೆ ಜೀವ ಮಾನದಲ್ಲೆಂದೂ ಇಂತಹ ದಿಟ್ಟತನದ ವಾಕ್ಯಗಳನ್ನು ಕೇಳುವ ಸಂಭವ ವೊದಗಿರಲಿಲ್ಲ. ಕತ್ತಿಯ ಹಿಡಿಯ ಮೇಲೆ ಹಸ್ತವನ್ನೊತ್ತಿ ಆವೇಶದಿಂದ

ನುಡಿದನು. "ಗೌರವದ ಜೀವನ! ಏತಕ್ಕೆ ಬಯಸುತ್ತಿರುವಿರೆಂದರೆ, ಮತ್ತೊಮ್ಮೆ ತುರ್ಕಿಸ್ತಾನವನ್ನು ಸುಖಸಂತೋಷಗಳ ಆಗರವನ್ನಾಗಿ ಮಾಡಿ ಕೊಳ್ಳುವುದಕ್ಕಲ್ಲವೇ ? ನಾನು ಇಸ್ಲಾಮಿನ ಸೇವೆಗಾಗಿಯೇ ಅವತರಿಸಿದ್ದೇನೆ. ಭೋಗಾಪೇಕ್ಷಿಗಳಾದ ತುರುಕರನ್ನೆಲ್ಲಾ ನಿರ್ನಾಮಗೊಳಿಸುವುದೇ ಈ ಸಂದರ್ಭದಲ್ಲಿ ಅತ್ಯಧಿಕವಾದ ಸೇವೆಯೆಂದು ಭಾವಿಸಿದ್ದೇನೆ."

ಯಸ್ದಾನಿ ಪ್ರತ್ಯುತ್ತರವಾಗಿ ಏನೋ ಹೇಳುವುದರಲ್ಲಿದ್ದನು. ಅಷ್ಟ ರಲ್ಲಿಯೇ ಆತನ ಹಿಂದೆ ನಿಂತಿದ್ದ ಹದಿನೆಂಟು ವರ್ಷಪ್ರಾಯದ ಸುಂದರ ನವ ತರುಣನು ಕೋಪಾತಿರೇಕದಿಂದ ಕಳವಳಿಸುತ್ತ ಮುಂದೆ ಬಂದು ನಿಂತನು. "ತಾವಾಗಿಯೇ ತಮ್ಮನ್ನು ಮುಸಲ್ಮಾನನೆಂದು ಸಂಬೋಧಿಸಿಕೊಳ್ಳುತ್ತಿರುವಿರಿ. ದೈವಸೃಷ್ಟಿಯ ಪವಿತ್ರತೆಗೆ ಕಳಂಕ ಹಚ್ಚುವುದು, ಪೈರುಪಚ್ಚೆಗಳನ್ನು ನಾಶ ಪಡಿಸುವುದು ನಗರಗಳನ್ನು ಭಸ್ಮಗೊಳಿಸುವುದು, ನಿರಪರಾಧಿಗಳ ರಕ್ತದಲ್ಲಿ ಓಕುಳಿಯಾಡುವುದು ಇಸ್ಲಾಮಿನ ಸೇವೆಯೇ? ಏನು, ಇದೇ ಮೊಹಮ್ಮದ್ ಪೈಗಂಬರ್‌ರವರ ಹಿತೋಪದೇಶವೇ? ನನಗೆ ಚೆನ್ನಾಗಿ ಗೊತ್ತಿದೆ. ತಾವು ನನ್ನನ್ನು ವಧಿಸುವಿರಿ. ಆದರೆ ಸತ್ಯಪ್ರಕಾಶನಗೊಳಿಸುವುದು ಓರ್ವ ನೈಜ ಮುಸ್ಲಿಮನ ಆದ್ಯಕರ್ತವ್ಯವು. ತಾವೇ ತಿಳಿಸಿರಿ, ಏನು ಇದು ಇಸ್ಲಾಮಿನ ಸೇವೆಯೋ ಅಥವಾ ಸಾಮ್ರಾಜ್ಯದಾಹವೋ? ನಿರಪರಾಧಿಗಳನ್ನೂ, ನಿರಾ ಯುಧರನ್ನೂ, ನಿರಾಶ್ರಿತರನ್ನೂ, ಅಬಲಾಸ್ತ್ರೀಯರನ್ನೂ, ನಿರ್ದೋಷ ಹಸುಳೆ ಗಳನ್ನೂ ಕೊಲ್ಲುವುದು ಇಸ್ಲಾಮ್ ಧರ್ಮದ ಅನುಷ್ಠಾನವೇ? ವಿಶ್ವಬಂಧು ಗಳೂ, ಪರಮ ಕರುಣಾಶೀಲರೂ ಆದ ಪೈಗಂಬರ್‌ರವರು ತಮ್ಮ ಈ ದೌರಾತ್ಮ್ಯ ದಿಂದ ಸಂಪ್ರೀತರಾಗುವರೇ" ? ಎಂದನು.

ನಾಲ್ದೆಸೆಗಳಲ್ಲಿಯೂ ನಿಶ್ಶಬ್ದತೆಯು ಸ್ಥಾವರವಾಯಿತು. ನೆರೆದಿದ್ದವ ರೆಲ್ಲರೂ ವಿಭ್ರಮೆಗೊಂಡರು. ಪ್ರತಿಮೆಗಳಂತೆ ನಿಷ್ಕಂಪರಾದರು. ಊಹೆಗೂ ನಿಲುಕದಂತಹ ದಾರುಣ ಚಿತ್ರವೊಂದು ಅವರ ಕಣ್ಣೆದಿರಿನಲ್ಲಿ ಸುಳಿಯಿತು. ಸರ್ವರ ದೃಷ್ಟಿಯೂ ಈ ಅಭೀತ ಸುಂದರ ನವತರುಣನ ಮುಖದಲ್ಲಿ ನಾಟಿ ಹೋಯಿತು. ಎಲ್ಲರೂ ಆತನ ದುರಂತವನ್ನು ಕಲ್ಪಿಸಿಕೊಂಡು ಮರುಗಲಾರಂ ಭಿಸಿದರು. ಧೀರ ಯಸ್ದಾನಿಯಂತೂ ತತ್ತರಿಸಿಹೋದನು. ಆ ತರುಣನು ಭೂಮಿಯ ಮೇಲೆ ಬಿದ್ದು ಸಂಕಟದಿಂದ ಹೊರಳಾಡಿ ಪ್ರಾಣವನ್ನು ಬಿಟ್ಟ

ಭಯಾನಕ ದೃಶ್ಯವು ಆತನ ನೇತ್ರಫಲಕದ ಮೇಲೆ ಸುಳಿದು ಅದೃಶ್ಯವಾಯಿತು. ಯಸ್ದಾನಿ ತನ್ನ ಮರಣಕ್ಕಾಗಿ ಅಂಜುತ್ತಿರಲಿಲ್ಲ. ಆದರೆ ಆ ತರುಣನ ದುಃಖಾಂತ ಜೀವನವನ್ನು ಯೋಚಿಸಿಕೊಂಡವನೇ, ಹೃತ್ಕಂಪಿತನಾಗಿ ತೈಮೂರನ ಇದಿರಿನಲ್ಲಿ ಯಾಚಕನಂತೆ ಪ್ರಾರ್ಥಿಸಲಾರಂಭಿಸಿದನು. "ಇವನಿನ್ನೂ ಬಾಲಕನು. ವಿವೇಚನೆಯಿಲ್ಲದವನು. ದುಡುಕಿ ಮಾತನಾಡಿದ್ದಾನೆ. ತಾವು ಹಿರಿಯರು. ಲೋಕಾನುಭವವನ್ನು ಅರಿತವರು. ತಾವು ಇವನ ವಾಕ್ಯಗಳನ್ನು ಲಕ್ಷಿಸಬಾರದು. ಇವನ ಮೇಲೆ ಕರುಣೆಯನ್ನು ತೋರಿಸಬೇಕು. ಇವನಿಗೆ ಪ್ರಾಣದಾನವನ್ನು ಅನುಗ್ರಹಿಸಬೇಕು."

ಆದರೆ ತೈಮೂರನ ಮನೋಜಗತ್ತು ಸಂಪೂರ್ಣವಾಗಿಯೂ ಪರಿವರ್ತಿತವಾಗಿದ್ದಿತು. ಅವನು ಮೂಕನಂತಾಗಿದ್ದನು. ಅವನ ಹಸ್ತವು ಇದ್ದಲ್ಲಿಯೇ ತಟಸ್ಥವಾಗಿತ್ತು. ತರುಣನ ವಾಕ್ಯಗಳು ತೀಕ್ಷ್ಣಶರಗಳಂತೆ ತೈಮೂರನ ಹೃದಯವನ್ನು ಭೇದಿಸಿದ್ದುವು. ಆತನು ಅನುತಾಪದ ಕಡಲಿನಲ್ಲಿ ಮುಳುಗಿ ಹೋಗಿದ್ದನು. ಅನೇಕ ಸಂದರ್ಭಗಳಲ್ಲಿ ಮಹಾಪುರುಷರ ದಿನಗಟ್ಟಲೆಯ ಹಿತೋಪದೇಶಗಳು ನಿಷ್ಫಲವಾಗುವುವು. ಆದರೆ ವಿಶೇಷ ಸನ್ನಿವೇಶದಲ್ಲಿ ಒಂದೇ ಒಂದು ಶಬ್ದವು ಮಾನವನ ಮನೋಗತಿಯನ್ನೇ ನಿವರ್ತಿಸಿಬಿಡುವುದು. ತೈಮೂರನು ತನ್ನ ಆಸನದಿಂದೆದ್ದು ನಿಧಾನವಾಗಿ ಯಸ್ದಾನಿಯ ಸಮೀಪಕ್ಕೆ ಬಂದನು. "ಈ ಬಾಲಕನು ಯಾರು ? ನಿಮಗೇನಾಗಬೇಕು ? ಇವನ ಹೆಸರೇನು" ? ಎಂದು ಪ್ರಶ್ನಿಸಿದನು.

"ಇವನು ನನ್ನ ಮಗನು. ಹಬೀಬ್ ಎಂಬ ಹೆಸರಿನಿಂದ ಕರೆಯಲ್ಪಡುವನು."

"ಹಬೀಬ್, ನಿನ್ನ ವಾಕ್ಯಗಳು ಅತ್ಯುಗ್ರವಾಗಿರುವುವು. ಆದರೂ ಅವುಗಳಿಂದ ಸತ್ಯದ ಸೌರಭವು ಹೊರಹೊಮ್ಮುತ್ತಿದೆ. ನನ್ನ ಭಾವನೆಗಳಲ್ಲಿ ಕ್ರಾಂತಿಯುತ್ಪನ್ನವಾಗುತ್ತಿದೆ. ನೀನು ನನ್ನ ಮನೋಧರ್ಮವನ್ನೇ ಭಿನ್ನಗೊಳಿಸಿಬಿಟ್ಟಿರುವೆ" ಎಂದು ಹೇಳಿ ತೈಮೂರನು ತನ್ನ ಗೂಡಾರದ ಕಡೆಗೆ ಹಿಂದಿರುಗಿದನು. ಅವನ ಮುಖದ ಮೇಲೆ ಪಶ್ಚಾತ್ತಾಪದ ಕುರುಹುಗಳು ಸ್ಪಷ್ಟವಾಗಿ ಎದ್ದು ಕಾಣಿಸುತ್ತಿದ್ದುವು.

ತೈಮೂರನು ಸಂಕಟದಿಂದ ಹಾಸಿಗೆಯ ಮೇಲೆ ಬಿದ್ದು ಹೊರಳಾಡುತ್ತಿದ್ದನು. ನಿದ್ರೆಯೆಂಬುದು ಆತನ ಭಾಗಕ್ಕೆ ಅಲಭ್ಯವಾಗಿದ್ದಿತು. ಕಣ್ಣೆವೆಯನ್ನು ಮುಚ್ಚಿದನೆಂದರೆ ಸಾಕು, ಹಬೀಬನ ಮನೋಹರಾಕೃತಿಯು ಇದಿರಿನಲ್ಲಿ ಬಂದು ನಿಲ್ಲುವುದು. ಅವನ ವಾಕ್ಯಗಳು ಕರ್ಣಗಳಲ್ಲಿ ಪ್ರತಿಧ್ವನಿತವಾಗುವುವು. ಒಡನೆಯೇ ಯೋಚನಾಮಗ್ನನಾಗುವನು. ರಾತ್ರಿಯೆಲ್ಲಾ ದುಃಖ, ಸಂಕಟ, ಅನುತಾಪದಲ್ಲಿಯೇ ಕಳೆಯಿತು.

* * * *

ಕತ್ತಲೆಯು ಹರಿಯಿತು. ಕ್ಷಿತಿಜವು ಅರುಣಕಾಂತಿಯಿಂದ ಪ್ರಕಾಶಿತವಾಯಿತು. ತೈಮೂರನು ಚಿಂತಾಭಾರದಿಂದ ನತಶಿರನಾಗಿ ಯಸ್ದಾನಿ ಮತ್ತು ಹಬೀಬರಿದ್ದ ಕೊಠಡಿಯ ಬಳಿಗೆ ಬಂದನು. ಕಾವಲುಗಾರರು ಬಾಗಿಲನ್ನು ತೆರೆದರು. ತೈಮೂರನು ನಿಧಾನವಾಗಿ ಯಸ್ದಾನಿಯ ಸಮೀಪಕ್ಕೆ ಹೋದನು. "ಯಸ್ದಾನಿ! ನಿಮ್ಮ ಈ ಧೀಮಂತ ಪುತ್ರನು ನನ್ನ ಭಾವನೆಗಳಲ್ಲಿ ಮಹತ್ತರವಾದ ಕ್ರಾಂತಿಯನ್ನು ಉತ್ಪನ್ನಮಾಡಿದ್ದಾನೆ. ನಾನು ರಾತ್ರಿಯೆಲ್ಲಾ ಇವನ ವಾಕ್ಯಗಳನ್ನೇ ಕುರಿತು ವಿವೇಚಿಸಿದೆನು. ನಾನು ಇದುವರೆಗೆ ಧರ್ಮಪಥದಿಂದ ಭ್ರಷ್ಟನಾಗಿದ್ದೆನು. ಸತ್ಯಾರ್ಥದಿಂದ ವಿದೂರನಾಗಿದ್ದೆನು. ಸತ್ಯದ ಸ್ವರೂಪವನ್ನು ಅರಿಯಲಾರದವನಾಗಿದ್ದೆನು. ಈಗ ನನ್ನ ಅಂತಃಚಕ್ಷುಗಳು ತೆರೆಯಲ್ಪಟ್ಟಿವೆ. ಸತ್ಯಧರ್ಮಗಳ ನೈಜ ಸ್ವರೂಪವು ಗೋಚರಿಸುತ್ತಿದೆ. ಇಸ್ಲಾಮಿನ ಮಹೋನ್ನತ ತತ್ವವಿಚಾರ ವೇದ್ಯವಾಗಿದೆ. ನಿಶ್ಚಯವಾಗಿಯೂ ಇಸ್ಲಾಂ ದೌರ್ಜನ್ಯ ದಬ್ಬಾಳಿಕೆಗಳ ಶಿಕ್ಷಣವೀಯುವುದಿಲ್ಲ. ಕೊಲೆ, ಸುಲಿಗೆಗಳಿಗಾಗಿ ಪ್ರಬೋಧಿಸುವುದಿಲ್ಲ, ಪ್ರಚೋದಿಸುವುದಿಲ್ಲ. ಇಸ್ಲಾಂ ಸೋದರತ್ವ, ಸಮಾನತ್ವ, ಮಾನವತ್ವಗಳ ಪರಿಪಾಟವೀಯುತ್ತದೆ. ದಯಾ, ಶಾಂತಿ, ಸೌಹಾರ್ದಗಳ ಅಮರಸಂದೇಶವನ್ನು ಉದ್ಘೋಷಿಸುತ್ತದೆ."

ತೈಮೂರನ ಹೃದಯ ಪರಿವರ್ತನೆಯನ್ನು ಕಂಡು ಹಬೀಬ್ ಮತ್ತು ಯಸ್ದಾನಿ ಆಶ್ಚರ್ಯದಿಂದ ಒಬ್ಬರ ಮುಖವನ್ನು ಮತ್ತೊಬ್ಬರು ನೋಡಲಾರಂಭಿಸಿದರು. ತೈಮೂರನು ಎವೆಯಿಕ್ಕದೆ ಹಬೀಬನನ್ನು ಆಪಾದಮಸ್ತಕ ದಿಟ್ಟಿಸಿದನು. ಕೊನೆಗೆ "ಹಬೀಬ್! ಈ ದಿನ ತುರುಕರೆಲ್ಲರೂ ಬಿಡುಗಡೆಯನ್ನು

ಕರೆದೊಯ್ಯಲು ನೆರವಾಗಲಾರೆಯಾ? ಸದಾ ನೀನು ನನ್ನ ಬಳಿಯಲ್ಲಿಯೇ ಇರಬೇಕೆಂದು ನನ್ನ ಮನವು ಆಶಿಸುತ್ತಿದೆ.''

ಉತ್ತರಕ್ಕಾಗಿ ಹಬೀಬನು ಯಸ್ದಾನಿಯ ಕಡೆಗೆ ನೋಡಿದನು.

"ಈ ಉದಾರ ಮನೋವೃತ್ತಿಗಾಗಿ ನಾವು ಚಿರಋಣಿಗಳಾಗಿರುತ್ತೇವೆ. ಆದರೆ ಹಬೀಬ್ ಇನ್ನೂ ಬಾಲಕನು. ಲೋಕಾನುಭವವಿಲ್ಲದವನು" ಎಂದು ಯಸ್ದಾನಿ ಉತ್ತರವಿತ್ತನು.

"ಏನು, ನೀವು ಈ ನನ್ನ ಪ್ರಾರ್ಥನೆಯನ್ನೂ ಲಕ್ಷಿಸಲಾರಿರಾ? ಈ ಸಂದರ್ಭದಲ್ಲಿ ಸಾರ್ವಭೌಮ ತೈಮೂರನು ನಿಮ್ಮ ಇದಿರಿನಲ್ಲಿ ಭಿಕ್ಷುಕನಂತೆ ಪ್ರಾರ್ಥಿಸುತ್ತಿದ್ದಾನೆ.''

ಯಸ್ದಾನಿ ಅವಾಕ್ಕಾಗಿ ನಿಂತನು. ತೈಮೂರನ ವಾಕ್ಯಕ್ಕೆ ಆತನ ಬಳಿಯಲ್ಲಿ ಉತ್ತರವೇ ಇರಲಿಲ್ಲ. ಆ ದಿನ ಸಾಯಂಕಾಲವೇ ತುರುಕರೆಲ್ಲರೂ ಬಿಡುಗಡೆಯನ್ನು ಹೊಂದಿದರು. ದುಃಖಾಂಧಕಾರದಿಂದ ಆಚ್ಛನ್ನವಾಗಿದ್ದ ಖುಸ್ತುಂತನಿಯಾ ಹರ್ಷೇಂದುವಿನ ಪ್ರಭವದಿಂದ ಪ್ರಕಾಶಿತವಾಯಿತು.

ಹಬೀಬನನ್ನು ಅವನ ತಂದೆತಾಯಿಗಳು ತೈಮೂರನೊಡನೆ ಕಳುಹಿಸಲು ಸಿದ್ಧರಿರಲಿಲ್ಲ. ಆದರೆ ಹಬೀಬನ ಹೃದಯದಲ್ಲಿ ಯಾವ ಶಕ್ತಿಯು ಕೆಲಸ ಮಾಡುತ್ತಿತ್ತೋ, ಅವನು ತೈಮೂರನೊಡನೆ ಹೊರಡಲು ಸಿದ್ಧನಾಗಿದ್ದನು. ತಂದೆ ತಾಯಿಗಳ ವಿರೋಧವೂ, ಬಂಧುಬಾಂಧವರ ಅಸಮ್ಮತಿಯೂ ಅವನ ಚಿತ್ತಸ್ಥೈರ್ಯವನ್ನು ಅಲುಗಿಸಲಿಲ್ಲ. ಕೊನೆಗೆ ಅವನು ಲಕ್ಷಾಂತರ ದೇಶಬಾಂಧವರ ಆಶೀರ್ವಾದಗಳನ್ನು ಹೊರುತ್ತ ತೈಮೂರನೊಡನೆ ಹೊರಟನು.

ರಾಜಧಾನಿಯಾದ ಸಮರ್‌ಖಂದನ್ನು ತಲಪಿದೊಡನೆಯೇ, ತೈಮೂರನು ಹಬೀಬನನ್ನು ತನ್ನ ಪ್ರಧಾನಮಂತ್ರಿಯಾಗಿ ನಿಯಮಿಸಿಕೊಂಡನು. ಸಾಮ್ರಾಜ್ಯದಾದ್ಯಂತವೂ ಹಬೀಬನ ನ್ಯಾಯನಿಷ್ಠೆ, ಸತ್ಯಪರಿಪಾಲನೆಗಳ ದುಂದುಭಿಯು ಮೊಳಗಲಾರಂಭಿಸಿತು. ಈಗ ತೈಮೂರನು ಹಬೀಬನ ಕಣ್ಣುಗಳಿಂದ ನೋಡುವನು. ಮತ್ತು ಆತನ ಕಿವಿಗಳಿಂದಲೇ ಕೇಳುವನು. ದೇಶೋದ್ಧಾರಕಾರ್ಯಗಳಲ್ಲಿ ಹಬೀಬನು ಸೂಚಿಸಿದ ಒಂದು ಸಲಹೆಯನ್ನಾದರೂ ತಿರಸ್ಕರಿಸಲೊಲ್ಲನು. ಪ್ರಜೆಗಳೆಲ್ಲರೂ ಈ ನೂತನ ಮಂತ್ರಿಗಾಗಿ ತಮ್ಮ ಸರ್ವಸ್ವ

ವನ್ನೂ ಅರ್ಪಿಸಲು ಸಿದ್ಧರಾದರು. ತೈಮೂರನಂತೂ ಹಬೀಬನನ್ನು ಕಾಣದೆ ಒಂದು ಘಳಿಗೆಯಾದರೂ ಶಾಂತಚಿತ್ತದಿಂದ ಇರಲಾರನು.

ಒಂದು ದಿನ ತೈಮೂರನು ಹಬೀಬನ ಪಕ್ಕದಲ್ಲಿ ಕುಳಿತುಕೊಂಡು ವಿಶ್ವಾಸಪೂರ್ವಕವಾಗಿ ಮಾತನಾಡುತ್ತ ''ಹಬೀಬ್ ! ನಾನು ನಿನ್ನನ್ನು ಅತ್ಯಧಿಕವಾಗಿ ಪ್ರೀತಿಸುತ್ತೇನೆ. ಏನು ನೀನು ಇದನ್ನು ಬಲ್ಲೆಯಾ''? ಎಂದು ಕೇಳಿದನು.

''ತಮ್ಮ ಕೃಪಾಕಟಾಕ್ಷ. ನಾನು ತಮ್ಮ ಮಹೋಪಕಾರವನ್ನು ಹೇಗೆ ತಾನೇ ಮರೆಯಬಲ್ಲೆನು''? ತೈಮೂರನು ಮುಗುಳ್ನಗೆಯನ್ನು ಬೀರಿದನು. ಹಬೀಬನ ಮುಖವನ್ನು ದಿಟ್ಟಿಸಿನೋಡುತ್ತ "ಹಬೀಬ್ ! ನೀನು ನವತರುಣನಿರುವೆ. ಸುಂದರನೂ, ಸುಶೀಲನೂ ಆಗಿರುವೆ. ಆದರೂ ಅದೇಕೆ ಅವಿವಾಹಿತನಾಗಿರುವೆ ? ವೈರಾಗ್ಯಜೀವನವನ್ನೇಕೆ ನಡೆಸುತ್ತಿರುವೆ ? ನನಗೆ ಪೂರ್ಣ ಭರವಸೆಯಿದೆ. ಜಗತ್ತಿನಲ್ಲೆಲ್ಲಾ ಅತ್ಯಂತ ಚೆಲುವೆಯೆಂದು ಪ್ರಸಿದ್ಧಳಾದ ಸ್ತ್ರೀಯೂ ಕೂಡ ನಿನ್ನನ್ನು ಪತಿಯಾಗಿ ಅಂಗೀಕರಿಸಲು ಹಾತೊರೆಯುವಳು. ಮತ್ತು ತನ್ನನ್ನು ಭಾಗ್ಯಶಾಲಿನಿಯೆಂದು ಭಾವಿಸಿಕೊಳ್ಳುವಳು. ಹಾಗೆ ನೀನು ಏಕಾಂಗಿಯಾಗಿಯೇ ಇರಲು ಇಚ್ಛಿಸುವೆಯಾದರೆ ಅರಮನೆಗೆ ಬಂದು ಬಿಡು. ಅಲ್ಲಿ ನಿನಗೆ ಸರ್ವಸೌಲಭ್ಯಗಳೂ ದೊರೆಯುವುವು. ನನಗೆ ಅರಿವಾಗಲೊಲ್ಲದು, ನಾನೇಕೆ ನಿನ್ನ ವ್ಯಕ್ತಿತ್ವದ ಕಡೆಗೆ ಆಕರ್ಷಿಸಲ್ಪಡುತ್ತಿದ್ದೇನೆ? ನೀನು ಸದಾ ನನ್ನ ಬಳಿಯಲ್ಲಿಯೇ ಕುಳಿತಿರಬೇಕೆಂದು ನನ್ನ ಮನವು ಆಶಿಸುತ್ತಿದೆ'' ಎಂದನು. ''ತಮ್ಮ ಈ ಔದಾರ್ಯವನ್ನೂ, ನಿರ್ವ್ಯಾಜವಾತ್ಸಲ್ಯವನ್ನೂ ನಾನೆಷ್ಟು ಪ್ರಶಂಸಿಸಿದರೂ ಅತ್ಯಲ್ಪವು. ಆದರೆ ತಮ್ಮ ಮಹೋಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡಲು ನಾನು ಅಸಮರ್ಥನಾಗಿದ್ದೇನೆ. ಇನ್ನು ಅರಮನೆಯಲ್ಲಿ ಬಂದು ವಾಸಿಸುವ ವಿಚಾರ, ಅದು ನನ್ನ ಮನಸ್ಸಿಗೆ ಅಪ್ರಿಯವಾದುದು.''

"ಅದೇಕೆ" ?

"ಏಕೆಂದರೆ ಎಲ್ಲಿ ಸಿರಿಸಂಪತ್ತಿಗಳಿವೆಯೋ, ಅಲ್ಲಿ ಕಳವು ಸುಲಿಗೆಗಳ ಭೀತಿಯಿರುತ್ತದೆ. ಇದಲ್ಲದೆ ಹೆಚ್ಚಿನ ಆದರವು ಅಹಿತವನ್ನು ಉತ್ಪನ್ನಮಾಡಲು ಕಾರಣವಾಗುತ್ತದೆ.''

"ನನ್ನ ಊಹೆಯಂತೆ ಈ ಜಗತ್ತಿನಲ್ಲಿ ನಿನಗೆ ಅಹಿತರಾಗತಕ್ಕವರು ಯಾರೂ ಇಲ್ಲ."

"ಏಕಿಲ್ಲ? ಸ್ವತಃ ನಾನೇ ನನಗೆ ಅಹಿತನಾಗಬಲ್ಲೆನು."

ತೈಮೂರನ ವಾದವು ವ್ಯರ್ಥವಾಯಿತು. ಅವನು ಏನನ್ನೋ ಯೋಚಿಸುತ್ತ ಹೊರಟುಹೋದನು. ಹಬೀಬನು ಸಮಾಧಾನದ ಉಛ್ವಾಸವನ್ನೆಳೆದನು. ಇದರ ಅಂತರ್ಯವೇನಿತ್ತೋ ಅದು ಗೋಪ್ಯವಾಗಿತ್ತು.

* * * *

ಸಾಮ್ರಾಜ್ಯದ ಪಶ್ಚಿಮ ಪ್ರಾಂತ್ಯದಲ್ಲಿ ದಂಗೆಯು ಎದ್ದಿದೆಯೆಂಬ ಸಮಾಚಾರವು ಬಂದು ತಲಪಿತು. ದಂಗೆಗಾರರನ್ನಡಗಿಸಲು ಹಬೀಬನು ಒಂದು ಅಗಾಧ ಸೇನಾಸಮೂಹದೊಂದಿಗೆ ಹೊರಟು, ದಂಗೆಯು ನಡೆಯುತ್ತಿದ್ದ ಸ್ಥಳಕ್ಕೆ ಬಂದು ತಲಪಿದನು. ಆ ಪ್ರಾಂತ್ಯ ಕ್ರೈಸ್ತರಿಗೆ ಸೇರಿದ್ದು. ಮುಸಲ್ಮಾನರು ಕತ್ತಿಯ ಬಲದಿಂದ ಅದನ್ನು ವಶಪಡಿಸಿಕೊಂಡಿದ್ದರು. ಕ್ರೈಸ್ತರ ಮೇಲೆ ಜೆಸಿಯಾ ತೆರಿಗೆಯನ್ನು ಹೇರಿದ್ದರು. ದೇವಾಲಯಗಳಲ್ಲಿ ಘಂಟೆಗಳನ್ನು ಬಾಜಿಸಬಾರದೆಂದು ನಿಷೇಧಿಸಿದ್ದರು. ಕ್ರೈಸ್ತ ಜಗತ್ತಿನಲ್ಲಿ ಹಾಹಾಕಾರವೆದ್ದಿತು. ಅವರು ತಮ್ಮ ಆಜನ್ಮಸಿದ್ಧ ಬಾಧ್ಯತೆಯನ್ನು ಹಿಂದಿರುಗಿ ಪಡೆಯುವ ಸಂಕಲ್ಪವನ್ನು ಕೈಗೊಂಡರು. ಅದಕ್ಕಾಗಿ ಹೋರಾಡಲು ಸಿದ್ಧರಾದರು. ಹಬೀಬನು ಈ ವಿಚಾರವನ್ನು ದೀರ್ಘವಾಗಿ ಪರ್ಯಾಲೋಚಿಸಿದನು. ಕೊನೆಗೆ ಅವನು ಕ್ರೈಸ್ತಮುಖಂಡರು ಸೇರಿಕೊಂಡಿದ್ದ ಕೋಟೆಯೊಳಗೆ ಪ್ರವೇಶಿಸಿದನು. ಕ್ರೈಸ್ತರಿಗೆ ಭರವಸೆಯನ್ನಿತ್ತನು. ಜೆಸಿಯಾ ತೆರಿಗೆಯನ್ನು ತೆಗೆದುಹಾಕಿದನು. ದೇವಾಲಯಗಳಲ್ಲಿ ಧರ್ಮಪದ್ಧತಿಗನುಗುಣವಾಗಿ ಘಂಟೆಗಳನ್ನು ಬಾಜಿಸತಕ್ಕದ್ದೆಂದು ಆಜ್ಞಾಪಿಸಿದನು. ಆದರೆ ಸೈನಿಕರಿಗೆ ಈ ವಿಚಾರವು ಗೊತ್ತಾದೊಡನೆಯೇ ಅವರು ಕುಪಿತರಾದರು. ಪ್ರತೀಕಾರಕ್ಕಾಗಿ ಸಿದ್ಧರಾದರು. ಹಬೀಬನೂ, ಕ್ರೈಷ್ಟಮುಖಂಡರೂ ಸೇರಿಕೊಂಡು ಸಮಾಲೋಚನೆ ನಡೆಸುತ್ತಿದ್ದ ಕೋಟೆಗೆ ಬಲವಾದ ಮುತ್ತಿಗೆಯನ್ನು ಹಾಕಿದರು. ಸೈನಿಕರಿಂದ ಮುತ್ತಲ್ಪಟ್ಟಿದ್ದ ಹಬೀಬನೂ ಈಗ ಸತ್ಯಕ್ಕಾಗಿ ಸೆಣಸಲು ಸಿದ್ಧನಾಗಿದ್ದನು.

ಅನೇಕ ದಿನಗಳಿಂದ ಹಬೀಬನ ಸಮಾಚಾರವು ತಿಳಿಯಲಿಲ್ಲ. ತೈಮೂರನು ಚಿಂತಾಮಗ್ನನಾದನು. ಹಬೀಬನನ್ನು ಕಾಣದೆ ಆತನ ಮನವು ವ್ಯಥಿತ

ವಾಗಿತ್ತು. ಅಷ್ಟರಲ್ಲಿಯೇ ದೂತನೊಬ್ಬನು ಪ್ರವೇಶಿಸಿದನು. ಬಾಗಿ ತೈಮೂರ ನನ್ನು ನಮಸ್ಕರಿಸುತ್ತ ವಿಜ್ಞಾಪಿಸಿಕೊಂಡನು.

"ಮಹಾಪ್ರಭು! ಜೆಸಿಯಾ ತೆಗೆದುಹಾಕಲ್ಪಟ್ಟಿತು."

"ಜೆಸಿಯಾ ತೆಗೆದುಹಾಕಲ್ಪಟ್ಟಿತು! ಯಾರ ಆಜ್ಞೆಯಿಂದ ?"

"ಮಂತ್ರಿಯವರ ಆಜ್ಞೆಯಿಂದ. ಇದರೊಂದಿಗೇನೇ ದೇವಾಲಯಗಳಲ್ಲಿ ಘಂಟೆಗಳನ್ನು ಬಾಜಿಸುವ ಅಪ್ಪಣೆಯೂ ಕೊಡಲ್ಪಟ್ಟಿತು."

"ಹಾಗಾದರೆ ಮತ್ತೆ?" ತೈಮೂರನು ತನ್ನ ಆಸನದಿಂದ ಎದ್ದನು.

"ಮಂತ್ರಿಯವರು ಕಾಫರರ ಜೊತೆಯಲ್ಲಿ ಸೇರಿಕೊಂಡಿದ್ದಾರೆ. ತಮ್ಮ ವಿರುದ್ಧ ಹೋರಾಡಲು ಸಿದ್ಧರಾಗಿದ್ದಾರೆ. ಈಗ ಇಸ್ಲಾಮಿ ಸೇನೆಯು ಕೋಟೆಗೆ ಮುತ್ತಿಗೆ ಹಾಕಿದೆ."

ತೈಮೂರನು ಕೋಪಾತಿರೇಕದಿಂದ ಕಂಪಿಸಲಾರಂಭಿಸಿದನು. "ಸೇನೆಯು ಕೋಟೆಗೆ ಮುತ್ತಿಗೆಯನ್ನು ಹಾಕಿದೆಯೇ? ಸೈನಿಕರು ಹಬೀಬನನ್ನು ಕೊಲ್ಲಲು ಸಿದ್ಧರಾಗಿದ್ದಾರೆಯೇ"? ಅವನು ಹುಚ್ಚನಂತೆ ಕೊಠಡಿಯಲ್ಲಿ ಶತಪಥ ತಿರುಗ ಲಾರಂಭಿಸಿದನು. ಏನೇನೋ ಬಡಬಡಿಸಿಕೊಳ್ಳುತ್ತಿದ್ದನು. ಹಠಾತ್ತನೇ ದೂತನ ಕಡೆಗೆ ತಿರುಗಿದನು. "ಹಬೀಬ್ ಕಾಫರರ ಜೊತೆಯಲ್ಲಿ ಸೇರಿಕೊಂಡಿ ದ್ದಾನೆ. ಕಾಫರ್ ಯಾರು ಎಂಬುದನ್ನು ನೀನು ಬಲ್ಲೆಯಾ? ನಿರ್ಬಲರನ್ನೂ, ನಿರಾಯುಧರನ್ನೂ ಹಿಂಸಿಸುವವನು ಕಾಪರನು. ಅನ್ಯಧರ್ಮೀಯರ ಆಜನ್ಮ ಸಿದ್ಧ ಹಕ್ಕುಗಳನ್ನು ಬಲಪ್ರಯೋಗದಿಂದ ತುಳಿಯುವವನು ಕಾಫರನು. ಅನ್ಯರ ಸ್ವಾತಂತ್ರ್ಯವನ್ನು ಅಪಹರಿಸಿಕೊಂಡು, ಅವರನ್ನು ನಿರ್ಲಕ್ಷಿಸಿ ಉನ್ಮತ್ತನಾಗಿ ಮೆರೆಯುವವನು ಕಾಫರನು. ಈಗ ಕಾಫರನು ಯಾರೆಂಬುದನ್ನು ತಿಳಿದೆಯಾ? ಅವಿವೇಕಿ! ನನ್ನ ಇದಿರಿನಲ್ಲಿ ನಿಲ್ಲಬೇಡ. ಈಕ್ಷಣವೇ ಇಲ್ಲಿಂದ ತೊಲಗಿ ಹೋಗು" ಎಂದು ಘರ್ಜಿಸಿದನು.

* * * *

ತೈಮೂರನು ಯೋಜನಗಳನ್ನು ದಾಟುತ್ತ ದಂಗೆಯ ಸ್ಥಳಕ್ಕೆ ಬಂದು ತಲಪಿದನು. ಹಬೀಬನಿಗೆ ಈ ಸುದ್ದಿಯು ತಿಳಿದೊಡನೆಯೇ ಅವನು ತೈಮೂರ ನೊಡನೆ ಹೋರಾಡಲು ಸಿದ್ಧನಾದನು. ಕ್ರೈಸ್ತರ ಜಂಘಾಬಲವೇ ಕುಸಿದು ಬಿದ್ದಿತು. ಅವರು ತೈಮೂರನ ಕಾಠಿಣ್ಯಹೃದಯ, ಪ್ರತೀಕಾರ ಮನೋ

ಭಾವಗಳನ್ನು ಅರಿಯದವರಾಗಿರಲಿಲ್ಲ. ಅಂತ್ಯ ಪರಿಣಾಮವನ್ನು ನೆನೆದು ಕೊಂಡು ವಿವಿಧ ಕಲ್ಪನೆಗಳನ್ನು ಮಾಡಿಕೊಳ್ಳಲಾರಂಭಿಸಿದರು. ಆದರೆ ಅವರ ಕಲ್ಪನೆಗಳು ಮಿಥ್ಯವಾಗಿದ್ದುವು. ಕೋಟೆಯ ಮುತ್ತಿಗೆಯು ತೆಗೆದುಹಾಕ ಲ್ಪಟ್ಟಿತು. ತೈಮೂರನ ಸೇನಾಮಧ್ಯದಿಂದ ಸೌಹಾರ್ದದ ಶ್ವೇತಧ್ವಜವೆದ್ದು ಗಾಳಿಯಲ್ಲಿ ಹಾರಾಡಲಾರಂಭಿಸಿತು. ಹಬೀಬನು ಕ್ರೈಸ್ತ ಮುಖಂಡರನ್ನು ಕರೆದುಕೊಂಡು ಕೋಟೆಯ ಹೊರಗೆ ಬಂದನು. ತೈಮೂರನನ್ನು ಕಂಡೊಡ ನೆಯೇ ಆತನ ಪಾದಗಳ ಮೇಲೆ ಬಿದ್ದನು. ತೈಮೂರನು ಹಬೀಬನನ್ನು ಮೇಲಕ್ಕೆತ್ತಿದನು. ಅತ್ಯಾದರದಿಂದ ತನ್ನ ಕಂಠಕ್ಕಾಲಿಂಗಿಸಿಕೊಂಡನು. "ಹಬೀಬ್! ಏನು, ನೀನು ನನ್ನೊಡನೆ ಹೋರಾಡಲು ಸಿದ್ಧನಾಗಿದ್ದೆಯಾ?" ಎಂದು ಪ್ರಶ್ನಿಸಿದನು.

"ಹೌದು".

"ತೈಮೂರನೊಡನೆ!"

"ಹೌದು- ಸತ್ಯ ಮತ್ತು ಸದುದ್ದೇಶಗಳ ಇದಿರಿನಲ್ಲಿ ತೈಮೂರನದೇನು ಪರಿವೇ?"

ತೈಮೂರನಿಗೆ ನಗುವು ಬಂದಿತು. ಹಬೀಬನು ಕಂಠಾಲಿಂಗನದಿಂದ ಬಿಡಿಸಿಕೊಂಡು ಪಕ್ಕದಲ್ಲಿ ನಿಂತನು.

ಒಂದೇ ಒಂದು ದಿನದಲ್ಲಿ ಪೂರ್ಣ ಪರಿವರ್ತನೆಯಾಗಿಹೋಯಿತು. ತೈಮೂರನು ತನ್ನ ಸೇನೆಯೊಡನೆ ರಾಜಧಾನಿಯ ಕಡೆಗೆ ಹಿಂದಿರುಗಿದನು. ಕ್ರೈಸ್ತರ ಪ್ರಾಂತ್ಯವು ಸ್ವತಂತ್ರವಾಯಿತು. ಆದರ ಆಡಳಿತವನ್ನು ಕ್ರೈಸ್ತರೇ ನಿರ್ವಹಿಸಿಕೊಂಡರು.

* * * *

ಹಬೀಬನು ಕೊಠಡಿಯಲ್ಲಿ ಕುಳಿತುಕೊಂಡು ಕಾಗದ ಪತ್ರಗಳ ಅವ ಲೋಕನದಲ್ಲಿ ಮಗ್ನನಾಗಿದ್ದನು. ಹಠಾತ್ತನೇ ತೈಮೂರನು ಒಳಗೆ ಪ್ರವೇಶಿಸಿ ದನು. "ಹಬೀಬ್! ನಾನು ಒಂದು ಸಮಸ್ಯೆಯನ್ನು ಕುರಿತು ವಿವೇಚಿಸುವ ಸಲುವಾಗಿ ಬಂದಿದ್ದೇನೆ. ಮಹತ್ತರವಾದ ಬಾಧ್ಯತೆಯೊಂದನ್ನು ನಿನಗೆ ವಹಿ ಸುವ ಆಶಯವುಳ್ಳವನಾಗಿದ್ದೇನೆ. ನಾನರಿಯೆನು, ನನಗೇನಾಗಿದೆಯೋ! ಯಾವ ಅಗೋಚರ ಶಕ್ತಿಯು ನನ್ನ ಹೃದಯದಲ್ಲಿ ಕುಳಿತು ಕೆಲಸಮಾಡು

ತ್ತಿದೆಯೋ ! ಈಗ ನನಗೆ ಸಾಮ್ರಾಜ್ಯ ತೃಷೆಯಿಲ್ಲ. ಸಿರಿಸಂಪತ್ತಿಗಳ ಆಕಾಂಕ್ಷೆ ಯಿಲ್ಲ. ಅಹೋರಾತ್ರಿ ಭಗವನ್ನಾಮ ಸಂಕೀರ್ತನೆಯಲ್ಲಿಯೇ ಕಾಲಯಾಪನೆ ಮಾಡಬೇಕೆಂದು ಅಭಿಲಾಷೆಯಾಗುತ್ತಿದೆ. ಹಬೀಬ್ ! ನೀನು ಈ ವಿಶಾಲ ಸಾಮ್ರಾಜ್ಯದ ಸೂತ್ರವನ್ನು ನಿನ್ನ ಹಸ್ತದಲ್ಲಿ ತೆಗೆದುಕೋ. ನನಗೆ ಅನುಜ್ಞೆ ಯನ್ನು ಕೊಡು. ನಾನು ನನ್ನ ಜೀವಿತವನ್ನು ಭಗವಧ್ಯಾನದಲ್ಲಿ ಕಳೆಯು ವೆನು."

ಹಬೀಬನು ತೈಮೂರನನ್ನು ಆಶ್ಚರ್ಯದಿಂದ ನೋಡುತ್ತ "ತಾವೇಕೆ ಭಾವನೆಗಳ ಪ್ರವಾಹದಲ್ಲಿ ತೇಲಿಹೋಗುತ್ತಿರುವಿರಿ? ಭಗವದ್ಭಕ್ತಿಯಲ್ಲಿ ಕಾಲ ಕಳೆಯುವ ಅಭಿಲಾಷೆಯಿದ್ದರೆ, ಅದಕ್ಕಾಗಿ ಸಾಮ್ರಾಜ್ಯವನ್ನೇನೂ ತ್ಯಜಿಸ ಬೇಕಾಗಿಲ್ಲ. ಇಷ್ಟಲ್ಲದೆ ತಮ್ಮ ಅನಂತರ ಈ ವಿಶಾಲ ಸಾಮ್ರಾಜ್ಯವನ್ನು ಯಾರುತಾನೇ ದಕ್ಷತೆಯಿಂದಾಳಬಲ್ಲರು ? ''

''ನಿಶ್ಚಯವಾಗಿಯೂ ಆ ಸಾಮರ್ಥ್ಯವು ನಿನ್ನಲ್ಲಿರುವುದು."

''ತಾವು ನನ್ನನ್ನು ಯಾರು ಎಂದು ಊಹಿಸಿರುವಿರಿ ? "

''ಓರ್ವ ನವತರುಣನೆಂದು. ವೀರ ಯೋಧನೆಂದು. ದಕ್ಷನಾದ ಆಡಳಿತ ಗಾರನೆಂದು."

"ತಮ್ಮ ಊಹೆಯು ಮಿಥ್ಯವಾಗಿದೆ. ನಾನು ನವತರುಣನಲ್ಲ, ತರು ಣಿಯು.''

ತೈಮೂರನು ಎವೆಯಿಕ್ಕದೆ ಆಶ್ಚರ್ಯದಿಂದ ಹಬೀಬನನ್ನು ಆ ಪಾದ ಮಸ್ತಕದಿಟ್ಟಿಸಿದನು. "ಖುಸ್ತುಂತನಿಯಾದಲ್ಲಿ ಮೊದಲು ನೋಡಿದಾಗಲೇ ನನಗೆ ಅನುಮಾನವಾಗಿತ್ತು" ಎಂದು ಹೇಳಿ ನಗುತ್ತ ಹೊರಗೆ ಹೊರಟು ಹೋದನು.

ಅದ್ಭುತ ಪರಾಕ್ರಮಿಯಾದ ಯಸ್ದಾನಿಗೆ ಪುತ್ರಭಾಗ್ಯವು ಲಭಿಸಲಿಲ್ಲ. ಆದರೆ ಅವನ ಗೃಹದಲ್ಲಿ ಪುತ್ರೀರತ್ನವೊಂದು ಜನಿಸಿತು. ಯಸ್ದಾನಿ ತನ್ನ ಪುತ್ರಿಯನ್ನು ಪುತ್ರನಂತೆ ಪಾಲನೆಮಾಡಿದನು. ಹಬೀಬ್ ಅಶ್ವಾರೋಹಣ, ಖಡ್ಗಕೌಶಲ್ಯ, ಬಾಣಪ್ರಯೋಗ ಮೊದಲಾದ ವಿದ್ಯೆಗಳನ್ನು ಅಭ್ಯಾಸಿಸಿ ಯುದ್ಧ ಕಲೆಯಲ್ಲಿ ನಿಷ್ಣಾತಳಾದಳು. ರಣಭೂಮಿಯಲ್ಲಿ ತಂದೆಗೆ ಭುಜಬಲಳಾಗಿ ನಿಂತು ಹೋರಾಡುತ್ತಿದ್ದಳು. ಇವಳ ಪರಾಕ್ರಮವನ್ನು ಕಂಡು ಮೆಚ್ಚಿದ

ಖಲೀಫನು ವಿಶೇಷ ಸನ್ಮಾನದೊಂದಿಗೆ ಸೇನೆಯಲ್ಲಿ ದೊಡ್ಡ ಅಧಿಕಾರವನ್ನು ಅನುಗ್ರಹಿಸಿದ್ದನು. ಹಬೀಬ್ ಮೊದಲಿನಿಂದಲೂ ತನ್ನ ವೇಷಭೂಷಣಾದಿಗಳಿಂದ ಪುರುಷನಂತೆಯೇ ಗೋಚರಿಸುತ್ತಿದ್ದಳು.

ಖುಸ್ತುಂತನಿಯಾದಲ್ಲಿ ಹರ್ಷೋಲ್ಲಾಸಗಳ ಅಪೂರ್ವ ಸಮಾರಂಭ. ಎರಡು ದೇಶಗಳ ಮಧುರಬಾಂಧವ್ಯದ ಕೃತಿರೂಪ. ವಿವಾಹ ಮಂಟಪದಲ್ಲಿ ಸಾರ್ವಭೌಮ ತೈಮೂರನು ಹಬೀಬಳನ್ನು ತನ್ನ ಧರ್ಮಪತ್ನಿಯಾಗಿ ಅಂಗೀಕರಿಸಿದನು.

ತನ್ನ ನಿರುಪಮ ಕಲ್ಯಾಣರತ್ನಗುಣಗಳಿಂದ ಕರ್ಕಶಾತ್ಮಕನೂ, ಮಾನವ ಜನಾಂಗದ ಪ್ರಬಲಶತ್ರುವೂ ಆದ ತೈಮೂರನನ್ನು ಧರ್ಮಾತ್ಮನಾದ ಆಡಳಿತಗಾರನನ್ನಾಗಿ ಪರಿವರ್ತಿಸಿದ ಹಬೀಬ್, ಹಮಿದಾಬಾನೋ ಎಂಬ ಸುನಾಮದಿಂದ ಆರಾಜಿಸಿದಳು.

# ರಜಿಯಾ

**ಪಂಡಿತ ಚಿತ್ರಸೇನಶಾಸ್ತ್ರಿ**

ನಾನು ಆ ವೃದ್ಧಭಿಕ್ಷುವನ್ನು ಬಹು ದಿನಗಳಿಂದಲೂ ದೆಹಲಿ ನಗರದಲ್ಲಿಯೇ ನೋಡುತ್ತಿದ್ದೆನು. ಜಾಮಿಯಾ ಮಸೀದಿಯ ಹಂತಗಳ ತಳಭಾಗದಲ್ಲಿ, ಪಕ್ಕದ ಮೂಲೆಯೊಂದರಲ್ಲಿ ಅವನು ಕುಳಿತಿರುತ್ತಿದ್ದನು. ಅವನು ತನ್ನ ಜೀವಿತದ ಎಪ್ಪತ್ತು ವರ್ಷಗಳನ್ನು ದಾಟಿರಬಹುದು. ಆದರೂ ಅವನ ದೇಹವು ಇನ್ನೂ ಸಾಥ್ಯವಾಗಿಯೂ, ಬಲಿಷ್ಠವಾಗಿಯೂ ಇರುವಂತೆ ತೋರುತ್ತಿದ್ದಿತು. ಅವನ ಹಸ್ತದಲ್ಲಿ ಒಂದು ಜೀರ್ಣವಾದ ಕುಲಾವಿಯಿದ್ದಿತು. ಆ ಕುಲಾವಿಯೇ ಆತನ ಪಾಲಿಗೆ ಭಿಕ್ಷಾಪಾತ್ರೆಯಾಗಿದ್ದಿತು. ಅವನದು ಒಂದೇ ನುಡಿ. "ಪರಮಾತ್ಮನಿಗಾಗಿ ನೀಡು" ಇದರ ಹೊರತು ಅವನಿಗೆ ಮತ್ತಿನ್ನಾವ ಶಬ್ದೋಚ್ಚಾರಣೆಯೂ ತಿಳಿದಿರಲಿಲ್ಲ. ವಸ್ತುತಃ ಯಾರೂ ಅವನೊಡನೆ ಮಾತನಾಡುತ್ತಿರಲಿಲ್ಲ. ಕದಾಚಿತ್ ಯಾರಾದರೂ ಮಾತನಾಡಿಸಿದರೂ ಅವನು ಉತ್ತರವೀಯುತ್ತಿರಲಿಲ್ಲ. ಅವನು ಮಧ್ಯೆ ಮಧ್ಯೆ ತಡೆದು "ಪರಮಾತ್ಮನಿಗಾಗಿ ನೀಡು, ಪರಮಾತ್ಮನಿಗಾಗಿ ನೀಡು" ಎಂದು ಪ್ರಾರ್ಥಿಸುತ್ತಿದ್ದನು. ಮತ್ತು ತನ್ನ ಕುಲಾವಿಯನ್ನು ಮುಂದೆ ಒಡ್ಡುತ್ತಿದ್ದನು. ದಾರಿಯಲ್ಲಿ ಹೋಗುವವರು ಅವನ ಕುಲಾವಿಯಲ್ಲಿ ದುಡ್ಡನ್ನು ಹಾಕುವರು. ದಾನನೀಡಿದವರನ್ನು ಅವನ ನಾಲಿಗೆಯು ಎಂದೂ ಆಶೀರ್ವದಿಸುತ್ತಿರಲಿಲ್ಲ. ಬಹುಶಃ ಆ ಕಾರ್ಯವನ್ನು ಹೃದಯವು ಮಾಡುತ್ತಿರಬಹುದು. ಆದರೆ ನೇತ್ರಗಳು ಮಾತ್ರ ದಾನಿಗಳಿಗೆ ತಮ್ಮ ಕೃತಜ್ಞತೆಯನ್ನು ಸೂಚಿಸುತ್ತಿದ್ದುವು.

ನಾನು ನಿತ್ಯವೂ ಕಛೇರಿಗೆ ಹೋಗಬೇಕಾದರೆ, ಜಾಮಿಯಾ ಮಸೀದಿಯ ಮುಂಭಾಗದಿಂದಲೇ ಹೋಗಬೇಕಾಗಿದ್ದಿತು. ಒಂದೊಂದು ದಿನ ಟ್ರಾಮಿನ ನಿರೀಕ್ಷಣೆಯಲ್ಲಿ ನಾನು ಮಸೀದಿಯ ಬಳಿಯಲ್ಲಿಯೇ ಬಹಳ ಹೊತ್ತಿನವರೆಗೂ ನಿಂತಿರಬೇಕಾಗುತ್ತಿದ್ದಿತು. ಈ ಅವಧಿಯಲ್ಲಿ ನನಗೆ ಆ ಭಿಕ್ಷುವನ್ನು ನೋಡುವ, ಅವನ ವ್ಯಾಪಾರವನ್ನು ನಿರೀಕ್ಷಿಸುವ, ಅವನ ಅವಿಲೋಲ ಪ್ರಾರ್ಥನೆಯನ್ನು ಲಾಲಿಸುವ ಸದವಕಾಶವು ಲಭಿಸುತ್ತಿತ್ತು. ಇದರಿಂದಾಗಿ ಆತನ ವಿಚಾರದಲ್ಲಿ

ನನ್ನ ಆಸಕ್ತಿಯು ಬೆಳೆಯಲಾರಂಭಿಸಿತು. ಕ್ರಮಕ್ರಮೇಣ ನನಗೆ ಆ ಭಿಕ್ಷು ವಿನ ಮೇಲೆ ಅವ್ಯಾಜ ಅಭಿಮಾನವು ಉತ್ಪನ್ನವಾಯಿತು. ಇಷ್ಟಾದರೂ ನಾನು ಆತನಿಗೆ ಎಂದೂ ಏನೂ ಕೊಡಲಿಲ್ಲ. ಒಂದು ಬಿಲ್ಲೆಯನ್ನು ಕೊಡಲು ನನಗೆ ನಾಚಿಕೆಯಾಗುತ್ತಿತ್ತು. ಹೆಚ್ಚಿಗೆ ನೀಡೋಣವೆಂದರೆ, ನನ್ನ ಆರ್ಜನೆಗೆ ಮಿಾರಿದ ಪ್ರಶ್ನೆಯಾಗಿತ್ತು. ಮೇಲಾಗಿ ಇದು ಒಂದೇ ದಿನಕ್ಕೆ ಮುಕ್ತಾಯವಾಗುವ ವಿಚಾರವಲ್ಲ. ಇದು ನಿತ್ಯದ ವ್ಯವಹಾರವಾಗಿತ್ತು.

* * * *

ವರ್ಷಾಕಾಲವು ಪ್ರಾರಂಭವಾಗಿತ್ತು. ದಿನವೆಲ್ಲಾ ಧಾರಾಕಾರವಾಗಿ ಮಳೆಯು ಸುರಿಯುತ್ತಲೇ ಇತ್ತು. ನಾನು ಕಛೇರಿಗೆ ಹೋಗುವಾಗ ಏನನ್ನು ನೋಡುತ್ತೇನೆ? ಆ ಭಿಕ್ಷುಕನು ಗೋಡೆಗೆ ಒರಗಿಕೊಂಡು ನಿಂತಿದ್ದಾನೆ. ಆದರೂ ಆತನಿಗೆ ರಕ್ಷಣೆಯಿಲ್ಲ. ಮಳೆಯ ನೀರಿನಿಂದ ತೊಯ್ದು ಹೋಗು ತ್ತಿರುವ ಆತನನ್ನು ನೋಡಿ ನನಗೆ ಮರುಕವುಂಟಾಯಿತು. ಆತನಿಗಾಗಿ ಏನಾದರೊಂದು ವ್ಯವಸ್ಥೆಯನ್ನು ಮಾಡಲೇಬೇಕು ಎಂದು ನನ್ನ ಮನವು ನಿರ್ಧರಿಸಿತು. ಆ ದಿನ ಕಛೇರಿಯಲ್ಲಿ ಕೆಲಸವು ಅಧಿಕವಾಗಿದ್ದುದರಿಂದ ನಾನು ಹಿಂದಿರುಗಲು ನಿಧಾನವಾಯಿತು. ನಾನು ಹಿಂದಿರುಗುವ ವೇಳೆಗೆ ಆಕಾಶವು ಕಾರ್ಮೋಡದಿಂದ ಆಚ್ಛಾದಿತವಾಗಿದ್ದರೂ, ಶೀತಲವಾಯುವು ಚಲಿಸುತ್ತಿದ್ದರೂ, ಮಳೆಯ ಭರವು ಮಾತ್ರ ಕಡಿಮೆಯಾಗಿದ್ದಿತು. ಆದರೆ ಆಗಲೇ ಬೆಳಕು ಹರಿದು ಕತ್ತಲೆಯು ವ್ಯಾಪಿಸಲಾರಂಭಿಸಿತ್ತು. ನಾನು ಮಸೀದಿಯ ಬಳಿಗೆ ಬಂದಾಗ, ಆ ವೃದ್ಧನು ತನ್ನ ಸ್ಥಳದಲ್ಲಿಯೇ ಕುಳಿತಿದ್ದನು. ನಾನು ದೂರದಲ್ಲಿಯೇ ನಿಂತು ಎವೆಯಿಕ್ಕದೆ ಆತನನ್ನೇ ದಿಟ್ಟಿಸುತ್ತಿದ್ದೆನು. ಗಾಢಾಂಧಕಾರವು ಕವಿಯಿತು. ವೃದ್ಧಭಿಕ್ಷು ತನ್ನ ಸ್ಥಾನದಿಂದೆದ್ದನು. ಊರ್ಧ್ವಮುಖನಾಗಿ ಆಕಾಶದ ಕಡೆಗೆ ನೋಡುತ್ತ "ಹೇ ಪರಮಾತ್ಮ! ಈ ದಿನ ಏನೂ ಇಲ್ಲ" ಎಂದು ನುಡಿದನು. ಅನಂತರ ಅವನು ಶಾಂತಚಿತ್ತನಾಗಿ ತನ್ನ ಊರುಗೋಲಿನ ಸಹಾಯದಿಂದ ಮುಂದೆ ಸಾಗಿದನು. ಈ ದೃಶ್ಯವು ನನ್ನ ಮನಸ್ಸಿನ ಮೇಲೆ ಏನು ಪರಿಣಾಮ ವನ್ನುಂಟುಮಾಡಿತೋ, ನಾನು ಮಂತ್ರಮುಗ್ಧನಾದೆನು. ಭಾವಪರವಶನಾದೆನು. ಇಚ್ಛಾನಿಚ್ಛೆಗಳ ಪರಿವೆಯಿಲ್ಲದೆ ಆ ವೃದ್ಧನ ಪಾದಗತಿಗನುಸಾರವಾಗಿಯೇ ನಡೆಯಲಾರಂಭಿಸಿದೆನು.

ಅವನು ಇಕ್ಕಟ್ಟಾದ ಓಣಿಗಳನ್ನು ದಾಟುತ್ತ, ತನ್ನ ಊರುಗೋಲಿನ ಕಣ್ಣುಗಳಿಂದ ಗೃಹಮಾರ್ಗವನ್ನು ಶೋಧಿಸುತ್ತ ಸಾಗುತ್ತಿದ್ದನು. ನಾನೂ ಅವನನ್ನು ಹಿಂಬಾಲಿಸಿಯೇ ನಡೆಯುತ್ತಿದ್ದೆನು. ನಗರದ ವಿಭವೋನ್ನತ ಭಾಗವು ಹಿಂದುಳಿಯಿತು. ಈಗ ಅವನು ಬಡಜನರ ಕೇರಿಗಳಲ್ಲಿ ಪ್ರವೇಶಿಸಿ ದನು. ಮುರುಕು ಮುರುಕಾದ ಗುಡಿಸಿಲುಗಳ ಮುಂಭಾಗದಿಂದ ಹಾದು ಹೋಗುತ್ತಿದ್ದನು. ಹಾಗೆಯೇ ಹೋಗುತ್ತ ಹೋಗುತ್ತ ಶಿಥಿಲವಾಗಿದ್ದ ಪುರಾ ತನ ಗೃಹದ ಬಾಗಿಲ ಹತ್ತಿರ ಬಂದು ತಟಸ್ಥನಾದನು. ಬಾಗಿಲ ಚಿಲಕವನ್ನು ಹಿಡಿದು ಶಬ್ದಮಾಡಿದನು. ತಕ್ಷಣವೇ ಬಾಲೆಯೋರ್ವಳು ಕದವನ್ನು ತೆಗೆದಳು. ನಾನು ದೂರದಲ್ಲಿಯೇ ನಿಂತಿದ್ದೆನಾದರೂ, ಆ ಸ್ನಿಗ್ಧಸುಂದರ ಮೋಹನ ಮೂರ್ತಿ ಯನ್ನು ಕಾಣದಿರಲಿಲ್ಲ. ಅವಳೂ ಕೂಡ ನನ್ನನ್ನು ನೋಡಿದಳು. ಅವಳಾ ಕ್ಷೀರಸಮಿಾಯ ನಿರ್ಮಲ ನೇತ್ರ ದೃಷ್ಟಿಯೊಂದಿಗೆ ನನ್ನ ದೃಷ್ಟಿಯು ಸಂಸಕ್ತ ವಾಯಿತು. ನಾನು ಮುಖವನ್ನು ತಗ್ಗಿಸಿಕೊಂಡೆನು.

ವೃದ್ಧಭಿಕ್ಷುವಿಗೆ ನಾನು ಅವನನ್ನು ಹಿಂಬಾಲಿಸಿ ಬಂದಿರುವ ವಿಚಾರದ ಅರಿವಿರಲಿಲ್ಲ. ಆದ್ದರಿಂದ ಅವರೀರ್ವರೂ ಮನೆಯೊಳಗೆ ಪ್ರವೇಶಿಸಿದರು. ಬಾಗಿಲು ಭದ್ರಗೊಳಿಸಲ್ಪಟ್ಟಿತು. ಆದರೂ ನಾನು ತಟಸ್ಥನಾಗಿದ್ದೆನು. ನನ್ನ ಪಾದಗಳು ನಿಂತಲ್ಲಿಂದ ಚಲಿಸಲಿಲ್ಲ. ನಾನು ಹಾಗೆಯೇ ಮೌನವಾಗಿ ನಿಂತು ಯೋಚಿಸಲಾರಂಭಿಸಿದೆನು "ಈ ಭಿಕ್ಷುವು ಯಾರಾಗಿರಬಹುದು ?"

ಇನ್ನೂ ನನ್ನ ದೃಷ್ಟಿಯು ಬಾಗಿಲಲ್ಲಿಯೇ ನಾಟಿಹೋಗಿದ್ದಿತು. ಅದು ವಿಕಲಗೊಳ್ಳುವ ಸಂಭವವೂ ಇರಲಿಲ್ಲ. ಹಠಾತ್ತನೇ ಬಾಗಿಲು ತೆರೆಯ ಲ್ಪಟ್ಟಿತು. ಬಾಗಿಲಲ್ಲಿ ಪುನಃ ಆ ದರ್ಶನೀಯ ಸುಷಮ ಮೋಹಕ ಮುಗ್ಧ ಪುತ್ಥಳಿಯ ಪ್ರದರ್ಶನ! ನಾನು ಮಂತ್ರಪರವಶನಾದವನಂತೆ ಅವಳನ್ನೇ ನೆಟ್ಟ ನೋಟದಿಂದ ದಿಟ್ಟಿಸಲಾರಂಭಿಸಿದೆನು. ಅವಳು ನನ್ನನ್ನು ಸಮಿಾಪಕ್ಕೆ ಕರೆ ದಳು. "ಏನು ತಾವು ಅಪ್ಪನನ್ನು ಕಾಣಲು ಬಂದಿರುವಿರಾ?" ಎಂದು ಪ್ರಶ್ನಿಸಿದಳು.

ನಾನು "ಹೌದು" ಎಂದೆನು.

"ತಮಗೆ ಅವರೊಡನೆ ಏನಾದರೂ ಮಾತನಾಡುವುದಿದೆಯೇ ?"

ನಾನು ಏನೊಂದನ್ನೂ ಯೋಚಿಸದೆಯೇ ಉತ್ತರವಿತ್ತೆನು. "ಹೌದು, ನಾನು ಅವರೊಡನೆ ಮಾತನಾಡಲು ಬಂದಿದ್ದೇನೆ."

"ಹಾಗಾದರೆ ಬನ್ನಿ."

ನಾನು ಮನೆಯೊಳಗೆ ಪ್ರವೇಶಿಸಿದೆನು. ಮನೆಯೇನೋ ವಿಶಾಲ ವಾಗಿಯೇ ಇತ್ತು. ಆದರೆ ಮನೆಯ ಲಕ್ಷಣವು ಮಾತ್ರ ಅಲ್ಲಿ ಕಂಡುಬರುತ್ತಿರ ಲಿಲ್ಲ. ಮನೆಯ ಹಿಂಭಾಗದ ಅಂಗಳವು ವಿಸ್ತಾರವಾಗಿದ್ದರೂ, ಬೇವಿನ ವೃಕ್ಷ ವೊಂದು ಮಾತ್ರ ಗೋಚರಿಸುತ್ತಿದ್ದಿತು. ಮನೆಯು ಶಿಥಿಲವಾಗಿದ್ದರೂ ಶುಭ್ರ ವಾಗಿತ್ತು. ವೃದ್ಧಭಿಕ್ಷು ಚಾಪೆಯ ಮೇಲೆ ಮೌನವಾಗಿ ಕುಳಿತಿದ್ದನು. ಆ ಬಾಲೆಯು ವೃದ್ಧನ ಸಮೀಪಕ್ಕೆ ಹೋಗಿ "ಅಪ್ಪಾ! ಅವರು ನಿಮ್ಮನ್ನು ಕಾಣಲು ಬಂದಿದ್ದಾರೆ" ಎಂದಳು.

ವೃದ್ಧನು ಸಂತೋಷದಿಂದ ಬನ್ನಿ, ಬನ್ನಿ. ಇಲ್ಲಿ ಕುಳಿತುಕೊಳ್ಳಿ" ಎಂದು ಎರಡು ಕರಗಳನ್ನೂ ಮುಂದಕ್ಕೆ ಚಾಚಿದನು. ಆ ಬಾಲೆಯು ಚಾಪೆಯ ತುಂಡೊಂದನ್ನು ತಂದು ಹಾಸಿದಳು. ನಾನು ಅದರ ಮೇಲೆ ಕುಳಿತುಕೊಂಡೆನು.

ವೃದ್ಧನು ನನ್ನನ್ನು ನೋಡುತ್ತ "ಮಹಾನುಭಾವ! ತಾವು ನನ್ನನ್ನು ಹಿಂಬಾಲಿಸಿ ಬಂದಿರುವ ವಿಚಾರ ನನಗೆ ತಿಳಿದಿರಲಿಲ್ಲ. ಮೇಲಾಗಿ ತಾವು ನನ್ನನ್ನು ಕಾಣಲು ಬಾಗಿಲಲ್ಲಿ ಕಾದು ನಿಂತಿರುವ ವಿಚಾರವನ್ನು ರಜಿಯಾ ಹೇಳಿದಳು. ಅಪ್ಪಣೆಯನ್ನು ಅನುಗ್ರಹಿಸಿರಿ, ನನ್ನಿಂದ ತಮಗೇನಾಗಬೇಕು? ನಾನು ತಮ್ಮ ಯಾವ ಸೇವೆಯನ್ನು ಕೈಗೊಳ್ಳಬಲ್ಲೆನು?" ಎಂದನು.

ನಾನು ವಿನಮ್ರನಾಗಿ ಉತ್ತರವಿತ್ತೆನು. "ಪೂಜ್ಯರೇ! ನಾನು ಇಲ್ಲಿಗೆ ಬಂದು ತಮಗೆಲ್ಲರಿಗೂ ತೊಂದರೆಯನ್ನು ಕೊಟ್ಟದ್ದಕ್ಕಾಗಿ ತಮ್ಮಲ್ಲಿ ಕ್ಷಮೆ ಯನ್ನು ಯಾಚಿಸುತ್ತೇನೆ. ವಸ್ತುತಃ ನಾನು ಯಾವ ಕಾರ್ಯೋದ್ದೇಶದಿಂದಲೂ ಇಲ್ಲಿಗೆ ಬಂದವನಲ್ಲ. ದೀರ್ಘಕಾಲದಿಂದಲೂ ನಾನು ತಮ್ಮನ್ನು ಜಾಮಿಯಾ ಮಸೀದಿಯ ಬಳಿಯಲ್ಲಿಯೇ ನೋಡುತ್ತಿದ್ದೆನು. ತಮ್ಮ ಒಂದೇ ಒಂದು ವಚ ನದ ಪರಿಚಯವು ನನಗಿದ್ದಿತು. ಆದರೆ "ಪರಮಾತ್ಮ! ಈ ದಿನ ಏನೂ ಇಲ್ಲ" ಎಂಬ ವಿನೂತನ ಶಬ್ದವನ್ನು ಇಂದು ಕೇಳಿ ನಾನು ಚಕಿತನಾದೆನು. ಸ್ವಾಧೀನ ತಪ್ಪಿದೆನು. ತಮ್ಮಂತಹ ಪೂಜನೀಯ ವ್ಯಕ್ತಿಗಳ ಹಸ್ತದಲ್ಲಿ ಒಂದು ಬಿಲ್ಲೆಯ ನ್ನಿಡಲು ಲಜ್ಜೆಯಾಗುತ್ತಿತ್ತು. ಹೆಚ್ಚಿಗೆ ನೀಡುವ ಚೈತನ್ಯವಿರಲಿಲ್ಲ. ಈ

ದಿನ ತಮಗೇನಾದರೂ ಹೆಚ್ಚಿಗೆ ಕೊಡಲೇಬೇಕು ಎಂಬ ದೃಢ ನಿರ್ಧಾರವೊಂದನ್ನು ಮಾಡಿಕೊಂಡೆನು. ಆದರೆ ತಮ್ಮನ್ನು ಕೂಗಿ ನಿಲ್ಲಿಸುವ ಧೈರ್ಯವು ನನ್ನಲ್ಲಿ ಸಾಲದಾಯಿತು. ಆದ್ದರಿಂದ ತಮ್ಮನ್ನು ಹಿಂಬಾಲಿಸಿಕೊಂಡು ಇಲ್ಲಿಯವರೆಗೂ ಬಂದೆನು."

ವೃದ್ಧನು ಸಾವಧಾನದಿಂದ ನನ್ನ ವಚನಗಳೆಲ್ಲವನ್ನೂ ಕೇಳಿದನು. ಅನಂತರ ತನ್ನ ವ್ಯಥಿತ ನಿಸ್ತೇಜ ನೇತ್ರಗಳಿಂದ ಆಕಾಶದ ಕಡೆಗೆ ನೋಡುತ್ತ "ಇದು ಪರಮಾತ್ಮನ ಕೃಪಾನುಗ್ರಹ. ಜಗತ್ತಿನಲ್ಲಿ ತಮ್ಮಂತಹ ನಿರ್ಲಿಪ್ತ ಹೃದಯದ ಮಹಾಪುರುಷರೂ ಇದ್ದಾರೆ. ಭಗವಂತನು ತಮಗೆ ದೀರ್ಘಾಯುಷ್ಯವನ್ನು ಕರುಣಿಸಲಿ. ಸತ್ಕೀರ್ತಿಯನ್ನು ಅನುಗ್ರಹಿಸಲಿ" ಎಂದನು.

ನಾನು ಕಿಸೆಯಿಂದ ಒಂದು ರೂಪಾಯಿಯನ್ನು ತೆಗೆದೆನು. ಸಂತುಷ್ಟಾಂತರಂಗನಾಗಿ ಅದನ್ನು ವೃದ್ಧನ ಹಸ್ತದಲ್ಲಿಟ್ಟೆನು. ವೃದ್ಧನು ಅತ್ಯಂತ ಪ್ರೀತನಾದನು. ಕೃತಜ್ಞತಾಪೂರ್ವಕ ದೃಷ್ಟಿಯಿಂದ ನನ್ನನ್ನು ನೋಡುತ್ತ "ತಮ್ಮ ಈ ಮಹೋಪಕಾರಬುದ್ಧಿಗಾಗಿ ನಾನು ಚಿರರುಣಿಯಾಗಿದ್ದೇನೆ. ಪರಮಾತ್ಮನು ತಮಗೆ ಸುಖಸಂತೋಷಗಳನ್ನು ದಯಪಾಲಿಸಲಿ. ನಾನು ಭಗವನ್ಮಂದಿರದ ಆಶ್ರಯದಲ್ಲಿ ಕುಳಿತು ಭಿಕ್ಷೆ ಬೇಡುವವನು. ಆದರೆ ನನ್ನ ಗೃಹದಲ್ಲಿ ನಾನು ಭಿಕ್ಷವನ್ನು ತೆಗೆದುಕೊಳ್ಳುವುದಿಲ್ಲ. ತಾವು ನನ್ನ ಮನೆಗೆ ಬಂದಿರುವಿರಿ. ತಾವು ನನ್ನ ಅತಿಥಿಗಳು. ಪರಮಾತ್ಮನು ನನಗೆ ಕರುಣಿಸಿರುವುದರಲ್ಲಿಯೇ ಶಕ್ತಿಮೀರಿ ತಮ್ಮ ಸೇವೆಗೈಯುವುದು ಇಲ್ಲಿ ನನ್ನ ಕರ್ತವ್ಯವು" ಎನ್ನುತ್ತ ರೂಪಾಯಿಯನ್ನು ಪುನಃ ನನ್ನ ಹಸ್ತದಲ್ಲಿಯೇ ಇಟ್ಟನು. ಅನಂತರ ಆ ಬಾಲೆಯ ಕಡೆಗೆ ತಿರುಗಿ "ಮಗಳೇ! ಇವರು ನಮ್ಮ ಮನೆಗೆ ಬಂದಿದ್ದಾರೆ. ನಾವು ಇವರನ್ನು ಸತ್ಕರಿಸಬೇಕು. ಆದರೆ ಇವರು ಹಿಂದೂಗಳು. ನಮ್ಮ ಮನೆಯಲ್ಲಿ ಆಹಾರ ಪದಾರ್ಥವನ್ನೇನೂ ತೆಗೆದುಕೊಳ್ಳಲಾರರು. ಆದ್ದರಿಂದ ಏಲಕ್ಕಿ ಇದ್ದರೆ ತಂದುಕೊಡು" ಎಂದನು.

ರಜಿಯಾ ಏಲಕ್ಕಿಯ ಎರಡು ಕಾಳನ್ನು ತಂದಳು. ತನ್ನ ಮುದ್ದಾದ ಅಂಗೈಯಲ್ಲಿಟ್ಟು ನನ್ನ ಮುಂದೆ ನೀಡಿದಳು. "ದಯವಿಟ್ಟು ಕ್ಷಮಿಸಿರಿ. ನಮ್ಮ ಮನೆಯಲ್ಲಿ ತಬಕವಿಲ್ಲ." ಹೀಗೆನ್ನುವಾಗ ಅವಳ ಧ್ವನಿಯು ಕಂಪಿಸಿತು. ಅವಳ ಕಣ್ಣುಗಳಲ್ಲಿ ನೀರೂರಿತು.

ವೃದ್ಧನು "ತಬಕವಿಲ್ಲದಿದ್ದರೇನಾಯಿತು ಮಗಳೇ? ಅದಕ್ಕೇಕೆ ದುಃಖ?" ಎಂದನು. ಆದರೆ ರಜಿಯಾ ಅಲ್ಲಿ ನಿಲ್ಲದೆ ಹೊರಟುಹೋದಳು. ವೃದ್ಧನು ವಸ್ತ್ರದಿಂದ ತನ್ನ ಕಂಬನಿಯನ್ನೊರಸಿಕೊಂಡನು. ಅನಂತರ ನನ್ನ ಕಡೆಗೆ ತಿರುಗಿ "ತಾವು ಕೃಪೆಯಿಟ್ಟು ಈ ಅರ್ಪಣೆಯನ್ನು ಸ್ವೀಕರಿಸಿರಿ. ಇದರಿಂದ ನನ್ನ ಗೌರವವು ಉಳಿಯುವುದು" ಎಂದನು.

ನಾನು ರೂಪಾಯಿಯನ್ನು ಹಿಂದಿರುಗಿ ಪಡೆದ ಕಾರಣದಿಂದಾಗಿ ಲಜ್ಜಿತನಾಗಿದ್ದೆನು. ಆದರೂ ಆತನ ವ್ಯಕ್ತಿತ್ವದಿಂದ ನನ್ನ ಮನವು ಆಕರ್ಷಿತವಾಗಿತ್ತು. ನಾನು ಅತ್ಯಂತ ವಿಧೇಯತೆಯಿಂದ "ನನಗೆ ತಮ್ಮ ಜೀವನದ ವಿಚಾರಗಳನ್ನು ತಿಳಿಸಿರಿ. ಹಾಗೂ ಯಾವ ಕಾರ್ಯನಿರ್ವಹಣದಿಂದ ನಾನು ತಮಗೆ ನೆರವಾಗಬಲ್ಲೆನು? ಎಂಬುದನ್ನೂ ಸೂಚಿಸಿರಿ" ಎಂದೆನು.

"ಒಂಭತ್ತು ವರ್ಷಗಳ ಅನಂತರ ನಾನು ಈ ವಿಷಯವನ್ನು ತಿಳಿಸುತ್ತಿದ್ದೇನೆ. ನಾನೂ ಮತ್ತು ರಜಿಯಾ ಇಬ್ಬರೇ ಈ ಗೃಹದಲ್ಲಿ ವಾಸಿಸುತ್ತಿದ್ದೇವೆ. ನಾವು ಯಾರ ಮನೆಗೂ ಹೋಗುವುದಿಲ್ಲ. ನಮ್ಮ ಮನೆಗೂ ಯಾರೂ ಬರುವುದಿಲ್ಲ. ಆದರೆ ತಾವು ಈ ದಿನ ನಮ್ಮ ಮನೆಗೆ ಬಂದು ನಮ್ಮನ್ನು ಧನ್ಯರನ್ನಾಗಿ ಮಾಡಿದಿರಿ."

ಅಷ್ಟರಲ್ಲಿಯೇ ರಜಿಯಾ ಪುನಃ ಅಲ್ಲಿಗೆ ಬಂದಳು. "ಅಪ್ಪಾ! ಈ ದಿನ ಹೊಟ್ಟೆಗೇನು ಮಾಡುವುದು?" ಎಂದಳು.

ವೃದ್ಧನು ತನ್ನ ಕಿಸೆಯಿಂದ ಅರ್ಧಾಣೆಯನ್ನು ತೆಗೆದುಕೊಡುತ್ತ "ಇಷ್ಟೇ ನನ್ನ ಬಳಿಯಲ್ಲಿರುವುದು. ಇದರಲ್ಲಿ ನೀನು ನಿತ್ಯದಂತೆ ಮೂರು ಕಾಸನ್ನು ದಾನಮಾಡಿಬಿಡು. ಇನ್ನು ಮೂರು ಕಾಸಿನಲ್ಲಿ ಕಡಲೆಕಾಳನ್ನು ತೆಗೆದುಕೋ" ಎಂದನು.

ರಜಿಯಾ ಹೊರಟುಹೋದಳು. ನಾನು ಬಹಳ ಹೊತ್ತಿನವರೆಗೂ ವೃದ್ಧನ ಮುಖವನ್ನೇ ನೋಡುತ್ತಿದ್ದೆನು. ಅವನ ಜೀವನವಿಚಾರವನ್ನು ತಿಳಿಯಲು ಮನವು ಹಾತೊರೆಯುತ್ತಿತ್ತು. ಆದರೆ ವೃದ್ಧನ ವದನದಿಂದ ಒಂದೇ ಒಂದು ಶಬ್ದವೂ ಹೊರಬೀಳಲಿಲ್ಲ. ಕೊನೆಗೆ ನಿರುಪಾಯನಾಗಿ ನಾನೇ ಮಾತನಾಡಲಾರಂಭಿಸಿದೆನು. "ರಜಿಯಾ ನಿಮ್ಮ ಪುತ್ರಿಯೇ?"

"ಅಲ್ಲ, ನನ್ನ ಪೌತ್ರಿಯು. ಇವಳು ಹುಟ್ಟಿದ ಕೆಲವೇ ದಿನಗಳಲ್ಲಿ ಇವಳ ತಾಯಿಯು ಕಾಲವಾಗಿ ಹೋದಳು. ಅಂದಿನಿಂದ ಇವಳನ್ನು ನಾನೇ ಪೋಷಿಸುತ್ತಿದ್ದೇನೆ."

"ಬಹುಶಃ ಇವಳ ತಂದೆಯು ಇರಲಾರರು. ಅಲ್ಲವೇ ?"

"ಹೌದು, ಅವನು ಕಾಲವಾಗಿ ಹದಿನಾಲ್ಕು ವರ್ಷಗಳಾದುವು." ವೃದ್ಧನು ನಿಟ್ಟುಸಿರನ್ನು ಬಿಟ್ಟು ತಟಸ್ಥನಾದನು.

ವೃದ್ಧನ ಜೀವನ ಅನೇಕ ನಿಗೂಢ ಸಮಸ್ಯೆಗಳಿಂದ ಪರಿಪೂರ್ಣವಾಗಿರುವಂತೆ ನನಗೆ ಭಾಸವಾಯಿತು. ಪ್ರಶ್ನಿಸಿ ತಿಳಿಯುವ ಧೈರ್ಯವು ಮಾತ್ರ ನನ್ನಲ್ಲಿಲ್ಲವಾಯಿತು. ಆದರೂ ನಾನೇ ಮೌನವನ್ನು ಭೇದಿಸಿ ಮಾತನಾಡಿದೆನು. "ನಾನೇನಾದರೂ ತಮ್ಮ ಸೇವೆಯನ್ನು ಮಾಡಬಲ್ಲೆನೇ ? ಅಪ್ಪಣೆಯನ್ನು ಸೂಚಿಸಿರಿ. ನಾನು ತಮಗಾಗಿ ಎಂತಹ ಸೇವೆಯನ್ನು ನಿರ್ವಹಿಸಬಲ್ಲೆನು ?"

"ದಯಾಳು ! ನನ್ನ ಬಳಿಯಲ್ಲಿ ಸೇವೆಯೇ ಇಲ್ಲ. ತಾವು ಹೇಗೆ ನಿರ್ವಹಿಸಬಲ್ಲಿರಿ ? ನಾನೇ ತಮ್ಮಂಥವರ ಗುಲಾಮನಾಗಿದ್ದೇನೆ." ಅವನ ತುಟಿಗಳು ಕಂಪಿಸಿದುವು. ಭಾವನಾಪೂರ್ಣವಾದ ಶಬ್ದಗಳು ಸಿಡಿದು ಬರುವಂತೆ ತೋರಿದುವು. ಆದರೆ ಏನು ಯೋಚಿಸಿಕೊಂಡನೋ, ಸಿಡಿದು ಬರಲಿದ್ದ ಶಬ್ದಗಳನ್ನು ಬಲವಂತದಿಂದ ತಡೆದುಬಿಟ್ಟನು.

ಅಷ್ಟರಲ್ಲಿಯೇ ರಜಿಯಾ ಹಿಂದಿರುಗಿಬಂದಳು. ಹುರಿದ ಕಡಲೆಕಾಳನ್ನು ಶುಭ್ರವಸ್ತ್ರದ ಚೂರಿನಲ್ಲಿಟ್ಟು ತನ್ನ ತಾತನಿಗೆ ಕೊಟ್ಟಳು. ವೃದ್ಧನು ನನ್ನ ಅಪ್ಪಣೆಯನ್ನು ಬೇಡಿದನು. ಶುದ್ಧನಾಗಿ ಪರಮಾತ್ಮನಿಗೆ ತನ್ನ ಪ್ರಾರ್ಥನೆಯನ್ನು ಸಲ್ಲಿಸಿದನು. ಅನಂತರ ಕಡಲೆಕಾಳಿನ ವಸ್ತ್ರವನ್ನು ನನ್ನ ಮುಂದೆ ನೀಡುತ್ತ "ತಾವು ಕೊಂಚ ಸ್ವೀಕರಿಸಿರಿ. ತಾವು ಸ್ವೀಕರಿಸುವುದರಿಂದ ನನ್ನ ಮನಸ್ಸಿಗೆ ಅತ್ಯಾನಂದವಾಗುವುದು. ಈಗಲೂ ಅತಿಥಿ ಸತ್ಕಾರವನ್ನು ನಡೆಸುವ ಯೋಗ್ಯತೆ ನನ್ನಲ್ಲಿರುವುದೆಂದು ಭಾವಿಸಿಕೊಳ್ಳುವೆನು" ಎಂದನು.

ನಾನು ಕೆಲವು ಕಾಳುಗಳನ್ನು ಎತ್ತಿಕೊಂಡೆನು. "ಪೂಜ್ಯರೇ ! ಇದನ್ನು ಪ್ರಸಾದವೆಂದು ತಿಳಿದಿದ್ದೇನೆ" ಎಂದೆನು.

ಪ್ರತಿನಿತ್ಯವೂ ಭಿಕ್ಷಬೇಡುತ್ತಿರುವ ವೃದ್ಧನನ್ನು ನಾನು ನೋಡುತ್ತಿದ್ದರೂ, ಆ ಸಂದರ್ಭದಲ್ಲಿ ಏನಾದರೂ ದಾನನೀಡುವ ಹಾಗೂ ಆತನೊಡನೆ ಸಂಭಾಷಿಸುವ ಧೈರ್ಯವನ್ನು ಮಾತ್ರ ಮಾಡುತ್ತಿರಲಿಲ್ಲ. ಆದರೆ ವಿರಾಮವೆನಿಸಿದಾಗೆಲ್ಲ ತಪ್ಪದೆ ಅವರ ಮನೆಗೆ ಹೋಗುತ್ತಿದ್ದೆನು. ಈ ಅವಧಿಯಲ್ಲಿ ನಾನು ಅನೇಕವೇಳೆ ವೃದ್ಧನ ಜೀವನಕಥೆಯನ್ನು ತಿಳಿಯಲು ಯತ್ನಿಸಿದೆನು. ಆದರೆ ನಾನು ನನ್ನ ಪ್ರತಿ ಪ್ರಯತ್ನದಲ್ಲಿಯೂ ವಿಫಲನಾದೆನು. ಇಷ್ಟಾದರೂ ಆ ವೃದ್ಧನು ಯಾವುದೋ ಉನ್ನತ ವಂಶದ ಪ್ರತೀಕನಾಗಿದ್ದಾನೆಂಬ ವಿಚಾರದ ಅರಿವು ಮಾತ್ರ ನನ್ನಲ್ಲಿ ನಿಸ್ಸಂಶಯವಾಯಿತು. ಹೀಗೆಯೇ ನಾಲ್ಕು ವರ್ಷಗಳು ಕಳೆದುವು. ನಮ್ಮ ಬಾಂಧವ್ಯವು ನಿಕಟವಾಗುತ್ತ ಬಂದಿತು. ವೃದ್ಧನ ನಿತ್ಯನಿಯಮವೆಂದರೆ, ಪ್ರತಿದಿನದಾರ್ಜನೆಯಲ್ಲಿ ಅರ್ಧಭಾಗವನ್ನು ಸಮೀಪದಲ್ಲಿಯೇ ಇದ್ದ ಸಮಾಧಿಯೊಂದರ ಬಳಿಯಲ್ಲಿ ದಾನಮಾಡಿಬಿಡುತ್ತಿದ್ದನು. ಆ ಸಮಾಧಿ ಆತನ ಪತ್ನಿಯದೆಂದು ತಿಳಿಯಿತು. ತನ್ನ ಪತ್ನಿಯ ಮೇಲೆ ವೃದ್ಧನಿಗೆ ಅನ್ಯಾದೃಶ ಅನುನಯವಿತ್ತು.

ಒಂದು ದಿನ ಜಾಮಿಯಾ ಮಸೀದಿಯ ತಳಭಾಗದ ಪಕ್ಕದ ಮೂಲೆಯು ಬರಿದಾಗಿರುವಂತೆ ತೋರಿತು. ನಾನು ಅಷ್ಟಾಗಿ ಅದನ್ನು ಗಮನಿಸಲಿಲ್ಲ. ಆದರೆ ಅನೇಕ ದಿನಗಳವರೆಗೂ ಆ ವೃದ್ಧಭಿಕ್ಷು ಅಲ್ಲಿಗೆ ಬಾರದಿರುವುದನ್ನು ನೋಡಿ ನಾನು ಭೀತನಾದೆನು. ಆಲಸ್ಯಗೈಯದೆ ನೇರವಾಗಿ ಮನೆಗೆ ಹೋದೆನು. ಅಲ್ಲೇನನ್ನು ನೋಡುತ್ತೇನೆ? ವೃದ್ಧನು ರುಗ್ಣಶಯ್ಯೆಯ ಮೇಲೊರಗಿದ್ದಾನೆ. ಸಂಪೂರ್ಣವಾಗಿಯೂ ನಿಶ್ಶಕ್ತನಾಗಿದ್ದಾನೆ. ಏಕಾಂಗಿ ರಜಿಯಾ ಆತನ ಸೇವೆಯಲ್ಲಿ ನಿರತಳಾಗಿದ್ದಾಳೆ.

ರಜಿಯಾ ಈಗ ಹದಿನೇಳು ವರ್ಷ ಪ್ರಾಯದ ಮನೋಜ್ಞ ನವತರುಣಿ. ತನ್ನ ಪದ್ಮರಾಗರಂಜಿತಾಂಗದಿಂದಲೂ, ಚಿತ್ತಾಕರ್ಷಕ ಪ್ರಶಾಂತ ಮನೋಹರ ಮುಖಮುದ್ರೆಯಿಂದಲೂ ಎರಕದ ಪ್ರತಿಮೆಯಂತೆ ಗೋಚರಿಸುತ್ತಿದ್ದಳು. ಅವಳ ಸೌಂದರ್ಯದಲ್ಲಿ ಮಲ್ಲಿಕಾ ಸೌರಭದಂತಹ ಮನಮೋಹಕ ಆಕರ್ಷಣೆಯಿತ್ತು. ಅವಳ ಹೃದಯಕಾಂತ ಕಲ್ಯಾಣ ಗುಣಗಳಿಂದ ನಾನು ಸಂಪ್ರೀತನಾಗಿದ್ದೆನು. ಆಗ ತಾನೇ ನಾನು ನನ್ನ ಪ್ರಾಯದ ಮೂವತ್ತನೇ ವರ್ಷದಲ್ಲಿ ಪದವಿಟ್ಟಿದ್ದೆನು. ಈ ವೇಳೆಗಾಗಲೇ ನನ್ನ ಪತ್ನಿಯೂ ಕಾಲವಾಗಿದ್ದಳು.

ಇಷ್ಟಾದರೂ ನಾನು ಅವಳನ್ನು ಎಂದೂ ಪ್ರೇಮದ ದೋಷಪೂರ್ಣ ದೃಷ್ಟಿಯಿಂದ ಈಕ್ಷಿಸಿದವನಲ್ಲ. ಏಕೆಂದರೆ ಅವಳು ನನ್ನನ್ನು 'ಅಣ್ಣಾ! ಅಣ್ಣಾ!' ಎಂದು ಸಂಬೋಧಿಸುತ್ತಿದ್ದಳು. ಅವಳು ನನಗೆ ಅನುಗ್ರಹಿಸಿದ್ದ ಬಿರುದನ್ನು ಸಾರ್ಥಕ ಪಡಿಸಿಕೊಳ್ಳುವ ಪ್ರಯತ್ನದಲ್ಲಿದ್ದೆನು.

ರಜಿಯಾ ನನ್ನನ್ನು ಕಾಣುತಲೇ "ಅಣ್ಣಾ! ಇಲ್ಲಿ ನೋಡಿ, ತಾತನ ದೇಹಸ್ಥಿತಿ ಹೇಗೆ ಸೂಕ್ಷ್ಮವಾಗುತ್ತಿದೆ? ಈಗಂತೂ ಪ್ರಜ್ಞೆಯೇ ಇಲ್ಲ. ಅನೇಕ ದಿನಗಳಿಂದ ತಮ್ಮನ್ನು ಸ್ಮರಿಸಿಕೊಳ್ಳುತ್ತಿದ್ದರು. ಆದರೆ ಇವರನ್ನು ಈ ವಿಷಮಪರಿಸ್ಥಿತಿಯಲ್ಲಿ ಬಿಟ್ಟು, ತಮ್ಮ ಮನೆಗೆ ಬರಲು ನನಗೆ ಹೇಗೆ ತಾನೇ ಸಾಧ್ಯವಾಗುತ್ತಿತ್ತು?" ಎಂದಳು.

ನಾನೂ ಏನೊಂದೂ ಉತ್ತರವನ್ನು ಕೊಡದೆ ಮೌನವಾಗಿ ನಿಂತಿದ್ದೆನು. ಸ್ವಲ್ಪ ಹೊತ್ತಿನ ತರುವಾಯ ವೃದ್ಧನಿಗೆ ಪ್ರಜ್ಞೆಯು ಬಂದಿತು. ರಜಿಯಾ ಆತನ ಸಮೀಪಕ್ಕೆ ಹೋಗಿ "ಅಪ್ಪಾ! ಅಣ್ಣನವರು ಬಂದಿದ್ದಾರೆ" ಎಂದಳು.

ವೃದ್ಧನು ಅತ್ಯಂತ ಶ್ರಮದಿಂದ ನನ್ನ ಕಡೆಗೆ ಹೊರಳಿದನು. ಇನ್ನೇನು, ಅವನ ಪ್ರಾಣಪಕ್ಷಿಯು ಹಾರಿಹೋಗಲು ದೀರ್ಘಕಾಲ ಬೇಕಾಗಲಾರದೆಂದು ನನಗೆ ಭಾಸವಾಯಿತು. ನಾನು ವೃದ್ಧನ ಸಮೀಪದಲ್ಲಿ ಕುಳಿತುಕೊಂಡು ಆತನ ದೇಹವನ್ನೆಲ್ಲಾ ನನ್ನ ಹಸ್ತದಿಂದ ನೇವರಿಸುತ್ತ "ಓಃ! ನೀವೆಷ್ಟು ಕ್ಷೀಣವಾಗಿದ್ದೀರಿ! ನನಗೆ ಸುದ್ದಿಯೇ ತಿಳಿಯಲಿಲ್ಲ. ಇಲ್ಲದಿದ್ದರೆ ನಾನು ಮುಂಚಿತವಾಗಿಯೇ ಬರುತ್ತಿದ್ದೆನು. ಆದರೆ ಈ ದಿನ ಮಾತ್ರ ನೀವು ನಿಮ್ಮ ಜೀವನಕಥೆಯನ್ನು ತಿಳಿಸಲೇಬೇಕು. ಹಿಂದಿನಂತೆಯೇ ನೀವು ಉಪೇಕ್ಷಿಸಿದರೆ, ನನ್ನ ಹೃದಯವು ವ್ಯಥಿತವಾಗುವುದು. ನನ್ನಿಂದ ನಿಮಗೇನು ನೆರವುಬೇಕು? ನಿಮಗಾಗಿ ನಾನು ಎಂತಹ ಸೇವೆಯನ್ನು ನಿರ್ವಹಿಸಬಲ್ಲೆನು? ಎಂಬುದನ್ನೂ ನೀವು ಈ ದಿನ ಸೂಚಿಸಲೇಬೇಕು" ಎಂದೆನು.

ವೃದ್ಧನು ಗದ್ಗದಿತ ಸ್ವರದಿಂದ ನುಡಿದನು. "ಹಾಗಾದರೆ ನೀವು ನಿಮ್ಮ ಸಹೋದರಿ ಗಜಿಯುಳಿಗಾಗಿ ಒಂದು ಕಾರ್ಯವನ್ನು ನಿರ್ವಹಿಸಬಲ್ಲಿರಾ?"

"ಅಗತ್ಯವಾಗಿ. ಆತ್ಮಸಂತೋಷದಿಂದ."

ವೃದ್ಧನು ರಜಿಯಳಿಗೆ ಸಂಜ್ಞೆಮಾಡಿದನು. ಅವಳು ಕೊಠಡಿಯಲ್ಲಿ ಹೋಗಿ, ಬಟ್ಟೆಯಿಂದ ಸುತ್ತಿ ಭದ್ರಗೊಳಿಸಿದ್ದ ಕಾಗದದ ಕಟ್ಟನ್ನು ತಂದಳು.

ವೃದ್ಧನು ಅದನ್ನು ತೆಗೆದುಕೊಂಡು ಹೃದಯಕ್ಕಪ್ಪಿಕೊಂಡನು. ಕಣ್ಣೊತ್ತಿಕೊಂಡನು. ಅನಂತರ ನನ್ನ ಮುಂದೆ ನೀಡುತ್ತ "ಈ ಪತ್ರಗಳನ್ನು ಭದ್ರವಾಗಿಟ್ಟಿರಬೇಕು. ಪ್ರಾಣಕ್ಕಿಂತ ಮಿಗಿಲೆಂದು ಭಾವಿಸಬೇಕು. ರಜಿಯಾ ಹದಿನೆಂಟು ವರ್ಷದವಳಾದೊಡನೆಯೇ, ಈ ಪತ್ರಗಳನ್ನು ತೆರೆದು ನೋಡಬೇಕು. ಅದರಲ್ಲಿ ಸೂಚಿಸಿರುವ ಕ್ರಮದಂತೆಯೇ ಚಾಚೂ ತಪ್ಪದೆ ನಡೆಯಬೇಕು. ಏನು ವಚನವನ್ನು ಕೊಡುವಿರಾ? ಇದರಲ್ಲಿರುವ ಸೂಚನೆಯಂತೆಯೇ ನಡೆಯುವಿರಾ?" ಎಂದನು.

ನಾನು ಶಿರಬಾಗಿ ನುಡಿದೆನು. "ನಾನು ಚಾಚೂ ತಪ್ಪದೆ ಇದರಲ್ಲಿರುವ ಸೂಚನೆಗಳಂತೆಯೇ ನಡೆಯುವೆನು. ನಿಮ್ಮ ಅಭೀಷ್ಟವನ್ನು ಸಂಪೂರ್ಣವಾಗಿಯೂ ಪರಿಪೂರ್ಣಗೊಳಿಸುವೆನು."

"ನನ್ನ ಅನಂತರ ರಜಿಯಾ ಇಲ್ಲಿರಲಾರಳು. ನಿಮಗೆ ಸಮಂಜಸವೆಂದು ತೋರಿದ ಸ್ಥಳದಲ್ಲಿ ಇವಳ ವಾಸಕ್ಕೆ ಅನುಕೂಲವನ್ನು ಕಲ್ಪಿಸಿಕೊಡಬೇಕು. ಆದರೆ ನಿಮ್ಮ ರಕ್ಷಣಾದೃಷ್ಟಿಯಿಂದ ಇವಳು ದೂರವಿರಬಾರದು. ನನ್ನ ಮರಣಾನಂತರ ರಜಿಯಳಿಗೆ ಭಿಕ್ಷುಕ ಜೀವನವನ್ನು ನಡೆಸಬೇಕಾದ ಅಗತ್ಯವೂ ಇರುವುದಿಲ್ಲ" ಎನ್ನುತ್ತ ಒಂದು ರತ್ನಖಚಿತ ಕಂಕಣವನ್ನು ನನ್ನ ಕೈಗಿತ್ತನು. "ನೀವು ಈ ಕಂಕಣವನ್ನು ಮಾರಿ ನನ್ನ ರಜಿಯಳ ಜೀವನಕ್ಕೆ ಅನುಕೂಲವನ್ನು ಕಲ್ಪಿಸಿಕೊಡಬೇಕು" ಎಂದು ವೃದ್ಧನು ತಟಸ್ಥನಾದನು. ಆದರೂ ಅವನ ಮುಖದಮೇಲೆ ಅಂಕಿತವಾಗಿ ಮಾಯವಾಗುತ್ತಿದ್ದ ಪರಿವರ್ತನೆಗಳಿಂದ ಅವನ ಮನೋವ್ಯಾಪಾರವನ್ನು ಅರಿಯಬಹುದಾಗಿದ್ದಿತು. ಹೃದಯಾಂಬುಧಿಯಲ್ಲೇಳುತ್ತಿದ್ದ ಭಾವನಾತರಂಗಗಳ ಆವೇಗವನ್ನು ಪ್ರತಿಬಂಧಿಸಲು ಅವನು ಪ್ರಯತ್ನಿಸುತ್ತಿದ್ದನು. ಸ್ವಲ್ಪ ಹೊತ್ತಿನ ತರುವಾಯ ಅವನು ರಜಿಯಳನ್ನು ಕರೆದು ತನ್ನ ಪಕ್ಕದಲ್ಲಿ ಕುಳ್ಳಿರಿಸಿಕೊಂಡನು. ನನ್ನ ಹಸ್ತವನ್ನೂ, ರಜಿಯಳ ಹಸ್ತವನ್ನೂ ತನ್ನ ಕೈಯಲ್ಲಿ ಹಿಡಿದುಕೊಂಡು ಹೃದಯದ ಮೇಲೆ ಒತ್ತಿಕೊಂಡನು. ಅನಂತರ ನನ್ನ ಕಡೆಗೆ ತಿರುಗಿ "ನೀವು ಹಿಂದೂಗಳು. ರಜಿಯಾ ಮುಸಲ್ಮಾನಳು. ಆದರೆ ಕರುಣಾಸಿಂಧು ವಿಶ್ವನಾಥನ ದೃಷ್ಟಿಯಲ್ಲಿ ಸರ್ವಧರ್ಮೀಯರೂ ಸಮಾನಸ್ಕರು, ಹಾಗೂ ಮಾನವರು. ಈಗ ನನಗೆ ನಿಮ್ಮ

ಮೇಲೆ ಪೂರ್ಣ ಭರವಸೆಯುಂಟಾಯಿತು. ನೀವು ನಿಮ್ಮ ಸಹೋದರಿಯನ್ನು ರಕ್ಷಿಸುವ ವಿಚಾರದಲ್ಲಿ ಎಂದೂ ಉಪೇಕ್ಷೆಯನ್ನು ತಾಳಲಾರಿರಿ" ಎಂದನು.

ನಾವಿಬ್ಬರೂ ತಲೆಯನ್ನು ತಗ್ಗಿಸಿಕೊಂಡು ಆತನ ಮುರುಕುಮಂಚದ ತಳಭಾಗದಲ್ಲಿ ಕುಳಿತುಕೊಂಡೆವು. ಸ್ವಲ್ಪ ಹೊತ್ತಿನ ತರುವಾಯ ವೃದ್ಧನು ನನ್ನ ಕಡೆಗೆ ಹೊರಳಿ ನುಡಿದನು. "ನನ್ನ ಮತ್ತೊಂದು ಅಂತ್ಯಪ್ರಾರ್ಥನೆಯನ್ನು ನೀವು ನಡೆಸಿಕೊಡಬೇಕು. ನನ್ನ ಅವಸಾನಕಾಲವು ಸನ್ನಿಹಿತವಾಗುತ್ತಿದೆ. ಈಗ ನೀವು ಇಲ್ಲಿಂದ ನಿಮ್ಮ ಸಹೋದರಿಯನ್ನು ಕರೆದುಕೊಂಡು ಹೊರಟುಹೋಗಿ. ನನ್ನ ಅಂತ್ಯಸಂಸ್ಕಾರವನ್ನು ಸರ್ಕಾರದ ಸೇವಕರೇ ನಡೆಸುವರು. ಅವರೇ ನನ್ನನ್ನು ಮಣ್ಣುಪಾಲು ಮಾಡುವರು."

ಆದರೆ ನಾನು ಆತನ ಈ ಅಂತ್ಯಪ್ರಾರ್ಥನೆಯನ್ನು ನಡೆಸಿಕೊಡಲು ಸಮ್ಮತಿಸಲಿಲ್ಲ. ನಾನು ಆತನ ಬಳಿಯಲ್ಲಿಯೇ ಇದ್ದೆನು. ಮೂರು ದಿನಗಳ ಅನಂತರ ಆತನ ಜೀವಾತ್ಮವು ಸ್ವರ್ಗಪಥಾನುಗಾಮಿಯಾಯಿತು.

ಅನಂತರ ನಾನು ರಜಿಯಳನ್ನು ನನ್ನ ಮನೆಗೆ ಕರೆದುಕೊಂಡು ಹೋದೆನು. ಅವಳ ಸಲುವಾಗಿ ಹಳ್ಳಿಯಲ್ಲಿ ವಾಸಿಸುತ್ತಿದ್ದ ನನ್ನ ಸೋದರತ್ತೆಯನ್ನೂ ಕರೆಸಿಕೊಂಡೆನು. ವೃದ್ಧನ ಸೂಚನೆಯಂತೆ ನಾನು ಕಂಕಣವನ್ನು ವಿಕ್ರಯಿಸಲಿಲ್ಲ. ಅದರ ಬೆಲೆಯನ್ನು ಅರಿಯಲು ಯತ್ನಿಸಿದಾಗ ಇಪ್ಪತ್ತು ಸಾವಿರ ರೂಪಾಯಿಗಳಿಗೂ ಮೀರುವುದೆಂದು ತಿಳಿಯಿತು. ಕಂಕಣದ ವಿಚಾರವಾಗಿ ರಜಿಯಳನ್ನು ಪ್ರಶ್ನಿಸಿದಾಗ "ಇದು ನಮ್ಮ ಅಜ್ಜಿಯ ಕಂಕಣ. ತಾತ ಆಗಾಗ್ಯೆ ಇದರೊಡನೆ ಸಂಭಾಷಿಸುತ್ತಿದ್ದರು" ಎಂದಳು.

ನಾನೂ ಕೂಡ ಅದನ್ನು ಒಂದು ಸ್ಮಾರಕವೆಂದು ಭಾವಿಸಿ ಭದ್ರಗೊಳಿಸಿದೆನು.

* * * *

ರಜಿಯಾ ಹದಿನೆಂಟು ವರ್ಷಗಳನ್ನು ದಾಟಿದಳು. ಆ ದಿನ ನಾನು ಆಕೆಗೆ ನೂತನ ವಸ್ತ್ರಗಳನ್ನು ತೊಡಿಸಿದೆನು. ಆಕೆಯ ಕೊರಳಿಗೆ ಪುಷ್ಪಮಾಲೆಯನ್ನು ಹಾಕಿದೆನು. ಅನಂತರ ವೃದ್ಧನ ಸೂಚನೆಯ ಮೇರೆ ಕಾಗದದ ಕಟ್ಟನ್ನು ತೆರೆದೆನು. ಅದರಲ್ಲಿ ರಾಜಕೀಯಕ್ಕೆ ಸಂಬಂಧಿಸಿದ ಅನೇಕ ಪತ್ರಗಳೂ, ಫರ್ಮಾನುಗಳೂ ಇದ್ದುವು. ಹಾಗೂ ಒಂದು ರಾಜಮುದ್ರೆಯೂ

ಇದ್ದಿತು. ಒಂದು ದೀರ್ಘ ಪತ್ರಾವಲೋಕನಾನಂತರ, ವೃದ್ಧಭಿಕ್ಷು ಮೈಸೂರಿನ ಟೀಪೂಸುಲ್ತಾನರ ಪುತ್ರನಾದ ಖಿಜರ್‌ಖಾನ್ (Qizar Khan) ಎಂದು ವಿದಿತವಾಯಿತು. ಖಿಜರ್‌ಖಾನನ ಪುತ್ರನು ಸರ್ಕಾರದ ವಿರುದ್ಧ ನಡೆದ ಯುದ್ಧದಲ್ಲಿ ಮಡಿದುಹೋಗಿದ್ದನು. ಆತನ ಜಹಗೀರನ್ನು ಪ್ರಭುತ್ವದವರು ವಶಪಡಿಸಿಕೊಂಡಿದ್ದರು. ರಜಿಯಾ ಹದಿನೆಂಟು ವರ್ಷಗಳನ್ನು ದಾಟಿದ ಮೇಲೆ ಆ ಜಹಗೀರನ್ನು ಅವಳಿಗೆ ಹಿಂದಿರುಗಿಕೊಡುವ ಒಪ್ಪಂದವೂ ಸರ್ಕಾರದೊಡನೆ ನಡೆದಿತ್ತು. ರಜಿಯಳ ಜನ್ಮದಿನಾಂಕವೂ, ವಂಶಾವಳಿಯೂ ಅವಳ ಕೊರಳಿನಲ್ಲಿರುವ ತಾಯಿತದಲ್ಲೇ ಭದ್ರಗೊಳಿಸಲ್ಪಟ್ಟಿದೆಯೆಂಬ ವಿಚಾರವೂ ದೀರ್ಘಪತ್ರದಲ್ಲಿಯೇ ಅಡಕವಾಗಿತ್ತು.

ನಾನು ಕಾಗದ ಪತ್ರಗಳನ್ನು ಪ್ರಧಾನ ನ್ಯಾಯಾಲಯದ ಮುಂದಿಟ್ಟು ವ್ಯವಹಾರವನ್ನು ಹೂಡಿದೆನು. ಅರುತಿಂಗಳ ಅವಧಿಯೊಳಗಾಗಿ ರಜಿಯಳ ಪೂರ್ವೀಕರ ಜಹಗೀರು ಅವಳಿಗೆ ದೊರೆಯಿತು. ಅದರ ವಾರ್ಷಿಕ ಉತ್ಪನ್ನ ಐದು ಲಕ್ಷ ರೂಪಾಯಿಗಳವರೆಗಿತ್ತು. ನಾನು ನನ್ನ ತಂಗಿಯನ್ನು ಕರೆದುಕೊಂಡು ಅವಳ ಜಹಗೀರಿಗೆ ಹೋದೆನು. ವ್ಯವಸ್ಥೆಯೆಲ್ಲವೂ ಸಮರ್ಪಕವಾದ ಮೇಲೆ ಹಿಂದಿರುಗಿದೆನು.

# —ರಾಮರಾಜ್ಯ ಪ್ರಕಾಶನ—

●

ಮಹೋನ್ನತ ಸದಾಶಯಗಳನ್ನು ಉಪಲಕ್ಷ್ಯವಾಗಿಟ್ಟು ಕೊಂಡು ಸಾಹಿತ್ಯ ಸೇವಾಕ್ಷೇತ್ರದಲ್ಲಿ ಪ್ರವೇಶಿಸಿದೆ. ಕನ್ನಡಿಗರಿಗೆ, ಐನೂರರಿಂದ ಆರುನೂರು ಪುಟಗಳ ಉತ್ತಮ ಸಾಹಿತ್ಯವನ್ನು ಪ್ರತಿವರ್ಷವೂ ಒದಗಿಸುವ ಹವಣಿಕೆಯಲ್ಲಿದೆ. ಪ್ರಥಮ ವರ್ಷದ ಕಾಣಿಕೆಯಾಗಿ ನೀಹಾರ, ನಿರ್ದೋಷಿ, ಲತಾದ್ರುಮ, ಬಲಿದಾನೀ ಹುಸೇನ್ ಎಂಬ ವಿವಿಧ ವಿಚಾರಪೂರ್ಣ ಗ್ರಂಥಗಳನ್ನು ಕನ್ನಡಿಗರಿಗೆ ಅರ್ಪಿಸಲಿದೆ.

**ವಾರ್ಷಿಕ ಸದಸ್ಯತ್ವದ ಚಂದಾ ಐದು ರೂಪಾಯಿ**
**ಪೋಷಕ ,, ,, ಇಪ್ಪತ್ತೈದು ರೂಪಾಯಿ**
**ಆಜೀವ ,, ,, ಐವತ್ತು ರೂಪಾಯಿ**

ಇಂದೇ ಚಂದಾದಾರರಾಗಿರಿ. ನೂತನೋದ್ಯಮಕ್ಕೆ ಪ್ರೋತ್ಸಾಹಿಸಿರಿ.

—**ಪ್ರಕಾಶಕ**

## ರಾಮರಾಜ್ಯ ಪ್ರಕಾಶನದ ಪ್ರಕಟನೆಗಳು

★

# ★ ನೀವಾರ ★

ಕನ್ನಡ ಕಥಾ ಜಗತ್ತಿನಲ್ಲಿ ನೂತನ ಪ್ರಯೋಗವೆನಿಸಿದೆ. ಸಮಾಜದ ಮಹೋನ್ನತ ಚಿತ್ರಗಳು ! ಹೃದಯದಾರ ಘಟನಾವಳಿಗಳು !

ನೀವಾರವು ಕಥಾಸಂಕಲನ ಮಾತ್ರವಲ್ಲ, ಅನುಭವಾಮೃತದಲ್ಲದ್ದಿದ ಬಾಣಗಳ ಬತ್ತಳಿಕೆ.

ಕರೀಂಖಾನ್‌ರವರ ಲೇಖನಿಯ ಝರಿಯಿಂದ ವಿಚಾರ ವಾಹಿನಿಯು ಪ್ರವಹಿಸುತ್ತ ಓದುಗರ ಹೃದಯಗಳಲ್ಲಿ ಕ್ರಾಂತಿಯನ್ನೆಬ್ಬಿಸುವುದು.

೧೪೦ ಪುಟಗಳು ಬೆಲೆ ರೂ. ೧-೪-೦

★

# ★ ಜನಪದ ಗೀತೆ ★

ಸತ್ಪಾತ್ರರೂ, ಧರ್ಮಾತ್ಮರೂ, ಸತ್ಕರ್ಮನಿರತರೂ, ಮಹೋದಾರಿಗಳೂ, ಪರಹಿತಚಿಂತಕರೂ, ಕರುಣಾಶೀಲರೂ, ಭಗವಧ್ಯಾನ ತುಂದಿಲರೂ ಆಗಿದ್ದ ನಮ್ಮ ಪೂರ್ವಕಾಲದ ಹಳ್ಳಿಗಾಡಿನವರ ವಿದ್ಯೆ, ಸಂಸ್ಕೃತಿ, ನಾಗರೀಕತೆಯನ್ನು ಸರಳ ಸುಂದರವಾಗಿ ಅವರದೇ ಆದ ಸಹಜಶೈಲಿಯಲ್ಲಿ ರೂಪಿಸುವ ಕವನ ಸಂಗ್ರಹ.

೬೦ ಪುಟಗಳು ಬೆಲೆ ರೂ. ೦-೮-೦

★

## ರಾಮರಾಜ್ಯ ಪ್ರಕಾಶನ

95, ಸುಬ್ರಾಮಶೆಟ್ಟಿ ರಸ್ತೆ, ಬೆಂಗಳೂರು-4

## ಇದೇ ಲೇಖಕರ, ಪ್ರಕಟವಾಗಲಿರುವ ಗ್ರಂಥಗಳು

●

| | |
|---|---|
| ಸ್ವಾಂಷೀರ | (ಸಾಮಾಜಿಕ ಕಾದಂಬರಿ) |
| ಸಮೀರ | ,, |
| ಮಾತೃಶಾಪ | (ಪೌರಾಣಿಕ ಕಾದಂಬರಿ) |
| ಬಲಿದಾನೀ ಹುಸೇನ್ | (ಐತಿಹಾಸಿಕ ಕಾದಂಬರಿ) |
| ಚಿತ್ತೋಡ್ ವಿಜಯ | ಐತಿಹಾಸಿಕ ನಾಟಕ |
| ಅಂಬರ್‌ನಾಥ್ | ,, |
| ನಿರ್ದೋಷಿ | ಸಾಮಾಜಿಕ ನಾಟಕ |
| ಮಧುಮೋಹನ್ | ,, |
| ಮಿಂಚು | ,, |
| ಲತಾದ್ರುವ | (ಪ್ರಬಂಧ) |

●

ಈ ಗ್ರಂಥದ ಪ್ರತಿಗಳಿಗೆ ಬರೆಯಿರಿ :

ರಾಮರಾಜ್ಯ ಕಾರ್ಯಾಲಯ

ಗಾಂಧಿನಗರ ಬೆಂಗಳೂರು-೨

●

ಬೆಂಗಳೂರಿನಲ್ಲಿ ಮಾರಾಟಗಾರರು :

ಪ್ರಕಾಶ್ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್

ರಂಗಸ್ವಾಮಿಗುಡಿಬೀದಿ : : ಬೆಂಗಳೂರು-೨